
ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪುಟಗಳು : 36 ರೂ. 28/– ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ–06 • ಸಂಚಿಕೆ–01 • ಜೂನ್ 2024



ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ರೂ. 28/- BAAPU PRAPANCHA

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-06 • ಸಂಚಿಕೆ-01 • ಜೂನ್ 2024

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations**, Bangalore

ಪತ್ರಗಳು

ಮಾನ್ಯರೆ ,

ಸಮಕಾಲೀನ ಸಮಸ್ಯೆಗಳಿಗೆ ಗಾಂಧಿ ಚಿಂತನೆಗಳು ಹೇಗೆ ಪ್ರಸ್ತುತ ಎನ್ನುವ ಬಗ್ಗೆ ಸರಣಿ ಲೇಖನಗಳನ್ನು ಬಾಪು ಪ್ರಪಂಚದಲ್ಲಿ ಪ್ರಕಟಿಸಿ . ಗಾಂಧಿ ಬಗ್ಗೆ ಮಾಹಿತಿಗಳು ಬೇರೆ ಕಡೆಯೂ ಸಿಗುತ್ತವೆ . ಯುವ ಸಮುದಾಯವನ್ನು ಆಕರ್ಷಿಸಲು ಗಾಂಧಿ ಭವನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ. ಗಾಂಧಿ ಬಗ್ಗೆ ಇಂದಿನ ಜನರಿಗೆ ಆಸಕ್ತಿ ಹುಟ್ಟುವಂತೆ ಆಯ್ದ ಲೇಖನಗಳನ್ನು ನೀಡಿರಿ.

– ವಿನೋದ್ ಕುಮಾರ್, ನೆಲಮಂಗಲ

* * *

ಮಾನ್ಯರೆ ,

ಮಹಾತ್ಮ ಗಾಂಧೀಜಿ ಒಳ್ಳೆಯ ಮೌಲ್ಯಗಳ ಪ್ರತಿಪಾದಕರಾಗಿದ್ದರು. ವ್ಯಕ್ತಿ ಮತ್ತು ಸಮಾಜದಲ್ಲಿ ಮೌಲ್ಯಗಳು ಒಮ್ಮೆ ಕುಸಿದು ಹೋದರೆ ಎಲ್ಲವೂ ಹಾಳಾಗುತ್ತದೆ. ಇದಕ್ಕೆ ಹೆಚ್ಚು ಒತ್ತು ನೀಡಿ ಲೇಖನಗಳನ್ನು ಆಯ್ಕೆ ಮಾಡಿ ಪ್ರಕಟಿಸಿ. ಗಾಂಧಿ ಕುರಿತ ಕಾರ್ಟೂನ್ ಗಳನ್ನು ನೋಡಲು ನಮಗೆ ಇಷ್ಟ. ಅದಕ್ಕೆ ಅವಕಾಶ ಮಾಡಿಕೊಡಿ. ಅತ್ಯುತ್ತಮ ಗಾಂಧಿ ವಿಡಿಯೋಗಳ ಲಿಂಕ್ ನೀಡಿ. ನೋಡಲು ಅನುಕೂಲವಾಗುತ್ತದೆ.


– ಸ್ನೇಹಾ, ಮೈಸೂರು

* * *

ಮಾನ್ಯರೆ,

ಗ್ರಾಮೀಣ ಪ್ರದೇಶದಲ್ಲಿ ಗಾಂಧಿ ಬಗ್ಗೆ ಹೆಚ್ಚು ಪ್ರಚಾರ ಮಾಡಿ . ಈಗ ಗಾಂಧಿ ಹಳ್ಳಿಗಳಿಗೆ ಹೆಚ್ಚು ಪ್ರಸ್ತುತರು .ಆಧುನಿಕತೆ ಹೆಸರಿನಲ್ಲಿ ಗಾಂಧಿಯ ಸರಳತೆ ಮಾಯವಾಗಿ ಭೋಗ ಜೀವನದ ಕಡೆಗೆ ಮತ್ತು ದುಂದು ವೆಚ್ಚದ ಕಡೆ ಜನ ವಾಲುತ್ತಿದ್ದಾರೆ . ಅವರ ಕಷ್ಟಗಳಿಗೆ ಇದೇ ಮುಖ್ಯ ಕಾರಣವಾಗಿದೆ . ಇದನ್ನು ಜನರಿಗೆ ತಿಳಿಸುವ ಕಾರ್ಯ ಈಗ ತುರ್ತಾಗಿ ಆಗಬೇಕು . ಬಾಪೂ ಪ್ರಪಂಚ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಲಿ.

– ಕುಮಾರ್, ತುಮಕೂರು



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.

ಬುದ್ಧ ಬರಲಿ ನಮ್ಮೂರಿಗೆ

ಕೆ. ಎಂ. ಶಂಕರಪ್ಪ



ಇದು ಸುಮಾರು ಎರಡು ಸಾವಿರದ ಐನೂರು ವರ್ಷಗಳ ಹಿಂದೆ ನಡೆದ ಮಾತು. ಮಗಧದ ರಾಜಧಾನಿ ರಾಜಗೃಹದಲ್ಲಿ ಮಹಾಪುರುಷನೊಬ್ಬ ಹುಟ್ಟು–ಸಾವುಗಳ ಭವಚಕ್ರದಿಂದ ಪಾರಾಗುವ ನಿರ್ವಾಣದ ದಾರಿಯ ಬಗ್ಗೆ ಪ್ರತಿ ದಿನವೂ ಪ್ರವಚನ ನೀಡುತ್ತಿದ್ದ.

ವ್ಯಾಪಾರಕ್ಕೆಂದು ರಾಜಗೃಹಕ್ಕೆ ಬಂದಿದ್ದ ವೇಸಾಲಿ ಪಟ್ಟಣದ ವರ್ತಕನೊಬ್ಬ ಮನುಷ್ಯ ಸಹಜ ಕುತೂಹಲದಿಂದ ಆ ಪ್ರವಚನಗಳನ್ನು ಕೇಳಲು ಹೋದ. ವ್ಯಾಪಾರಿಗೆ ಆ ಮಹಾಪುರುಷನ ಮಾತುಗಳು ಹಿಡಿಸಿದವು. ಅವುಗಳಲ್ಲಿ ಸತ್ಯವಿದೆ ಎಂದು ತೋರಿತು. ಆದರೆ ಎಷ್ಟಾದರೂ ಆತ ವ್ಯಾಪಾರಿ. ಒಬ್ಬ ವ್ಯಾಪಾರಿಗೆ ಸಹಜವಾದ ಅನುಮಾನಗಳು ಅವನನ್ನು ಕಾಡಲು ಪ್ರಾರಂಭಿಸಿದವು.

ಒಂದು ದಿನ ಬೆಳಗ್ಗೆ ಆತ ಆ ಮಹಾಪುರುಷನನ್ನು ಕಾಣಲು ಹೋದ. ಆ ಮಹಾಪುರುಷನಿಗೆ ವಂದಿಸಿ ಹೇಳಿದ "ಭಗವಾನರು ನನ್ನನ್ನು ಮನ್ನಿಸಬೇಕು. ಪ್ರತಿ ದಿನ ತಮ್ಮ ಪ್ರವಚನ ಕೇಳಲು ಬರುವವರಲ್ಲಿ ನಾನೂ ಒಬ್ಬ. ತಾವು ಹೇಳುವುದೆಲ್ಲಾ ನೂರಕ್ಕೆ ನೂರರಷ್ಟು ಸತ್ಯ ಎಂದು ನನಗನ್ನಿಸಿದೆ; ಆದರೂ ನನ್ನದೇ ಆದ ಕೆಲವು ಅನುಮಾನಗಳು ನನ್ನನ್ನು ಕಾಡುತ್ತಿವೆ. ಅದನ್ನು ಕೇಳಿ ಪರಿಹರಿಸಿಕೊಳ್ಳಲೆಂದು ಭಗವಾನರಲ್ಲಿ ಬಂದೆ."

"ಯಾವ ಅನುಮಾನಗಳು ಹೇಳು ಬಂಧು?" ಭಗವಾನರು ಕೇಳಿದರು. ಆತ ಹೇಳಿದ. "ತಾವು ಪ್ರತಿ ದಿನ ಪ್ರವಚನ ನೀಡುತ್ತೀರಿ. ನೂರಾರು ಜನ ಬಂದು ಕೇಳಿ ಹೋಗುತ್ತಾರೆ. ಇವರೆಲ್ಲರೂ ನಿರ್ವಾಣ ಪಡೆಯುತ್ತಾರೆಂದು ನಿಮಗನ್ನಿಸಿದೆಯೆ?"

ಆ ಮಹಾಪುರುಷ ಕೊಟ್ಟ ಉತ್ತರ ಹೀಗಿತ್ತು: "ಹೋಗುವುದು ಬಿಡುವುದು ಅವರವರ ಸಂಕಲ್ಪಕ್ಕೆ ಬಿಟ್ಟದ್ದು."

ವ್ಯಾಪಾರಿ ಮರುಪ್ರಶ್ನೆ ಹಾಕಿದ. "ಒಂದು ವೇಳೆ ಇವರಲ್ಲಿ ಯಾರೂ ನಿರ್ವಾಣಪದ ಪಡೆಯದಿದ್ದರೆ, ಭಗವಾನರು ಮಾಡುತ್ತಿರುವ ಪ್ರವಚನವೆಲ್ಲಾ ವ್ಯರ್ಥವಾಗುವುದಿಲ್ಲವೇ?" ಮುಗುಳ್ನಗೆ ಭಗವಾನರ ಉತ್ತರವಾಗಿತ್ತು.

ಸ್ವಲ್ಪ ತಡೆದು ಭಗವಾನರು ಕೇಳಿದರು. "ನೀನೊಬ್ಬ ವ್ಯಾಪಾರಿಯಂತೆ ಕಾಣುತ್ತೀ ಬಂಧು, ನೀನು ಯಾವ ಊರಿನವನು?"

ವ್ಯಾಪಾರಿ ಉತ್ತರಿಸಿದ. "ಹೌದು ನಾನೊಬ್ಬ ವಣಿಜ, ನನ್ನ ಊರು ವೇಸಾಲಿ."


ಭಗವಾನರು ಹೇಳಿದರು. "ವೇಸಾಲಿ ತುಂಬಾ ಸುಂದರ ನಗರ ಎಂದು ಕೇಳಿ ಬಲ್ಲೆ, ಹೌದೆ ಬಂಧು?"

ವ್ಯಾಪಾರಿ ಎದೆಯುಬ್ಬಿಸಿ ಹೇಳಿದ. "ಹೌದು, ಅಂತಹ ಸುಂದರ ನಗರ ಈ ಜಂಬೂದ್ವೀಪದಲ್ಲೇ ಬೇರೊಂದಿಲ್ಲ."

ಭಗವಾನರು ಕೇಳಿದರು. "ಹಾಗಿದ್ದಲ್ಲಿ, ಜನರಿಗೆಲ್ಲ ಆ ಸುಂದರ ನಗರವನ್ನು ಒಮ್ಮೆಯಾದರೂ ಹೋಗಿ ನೋಡಿ ಬರಬೇಕೆನಿಸುವುದು ಸಹಜವಲ್ಲವೇ?"

ವ್ಯಾಪಾರಿ ಹೇಳಿದ. "ಹೌದು, ಆದರೆ ಅಲ್ಲಿಗೆ ತಲುಪಲು ಹತ್ತಾರು ಮಾರ್ಗಗಳನ್ನು ಕ್ರಮಿಸಬೇಕಾಗುತ್ತದೆ. ನದಿಗಳನ್ನು ದಾಟಬೇಕಾಗುತ್ತದೆ."

ಭಗವಾನರು ಕೇಳಿದರು. 'ಸುಂದರ ನಗರ ವೇಸಾಲಿಯನ್ನು



ನೋಡಲು ಕುತೂಹಲವುಳ್ಳ ಜನರು ಆ ನಗರದವನೇ ಆದ ನಿನ್ನನ್ನು ವೇಸಾಲಿ ನಗರಕ್ಕೆ ದಾರಿಯನ್ನು ಕೇಳಿದಾಗ ನೀನು ಏನು ಮಾಡುತ್ತೀ?"

ವ್ಯಾಪಾರಿ, "ತಪ್ಪದೆ ದಾರಿಯನ್ನು ತಿಳಿಸಿಕೊಡುತ್ತೇನೆ" ಎಂದ.

ಭಗವಾನರು ಮಂದಹಾಸದಿಂದ ಹೇಳಿದರು. "ನಿನ್ನಿಂದ ಕೇಳಿ ದಾರಿ ತಿಳಿದುಕೊಂಡವರೆಲ್ಲಾ ವೇಸಾಲಿಗೆ ಹೋಗಿ ಬರುತ್ತಾರೋ?"

ವ್ಯಾಪಾರಿ ಹೇಳಿದ. "ಇಲ್ಲ ಭಗವಾನ್, ಎಲ್ಲೋ ನೂರರಲ್ಲಿ ಒಬ್ಬ ಹೋಗಿ ಬಂದರೆ ಹೆಚ್ಚು."

ಭಗವಾನರು ಕೇಳಿದರು. "ಆದರೂ ಜನ ಕೇಳಿದರೆ, ನೀನು ವೇಸಾಲಿಯ ದಾರಿಯನ್ನು ತಿಳಿಸುತ್ತೀಯಾ ಅಲ್ಲವೇ?"

ವ್ಯಾಪಾರಿ ಹೇಳಿದ. "ಹೌದು ಭಗವಾನ್, ಎಷ್ಟೇ ಆದರೂ ವೇಸಾಲಿ ನನ್ನ ಊರು."

ಆಗ ಭಗವಾನರು ಹೇಳಿದರು. "ನೀನು ಮಾಡುವಂತೆಯೇ ನಾನೂ ಮಾಡುತ್ತೇನೆ ಬಂಧು; ನಿರ್ವಾಣ ನಾನು ಕಂಡುಕೊಂಡ ನನ್ನ ಸುಂದರ ನಗರ. ಅಲ್ಲಿಗೆ ಹೋಗಬಯಸುವ ಜನರಿಗೆ ಮಾರ್ಗಕ್ರಮಣ ಮಾಡಲು ದಾರಿ ತಿಳಿಸಿಕೊಡುತ್ತೇನೆ. ಹೋಗುವುದು ಬಿಡುವುದು ಅವರ ಸಂಕಲ್ಪಕ್ಕೆ ಬಿಟ್ಟದ್ದು."

ಹೀಗೆ ಹೇಳಿದ ಮಹಾಪುರುಷನೇ ಭಗವಾನ್ ಬುದ್ಧ.

ಹುಲ್ಲು, ಗಿಡ ಮೊದಲಾದ ವನಸ್ಪತಿಗಳಲ್ಲಿ ಬೇರೆ ಬೇರೆ ಜಾತಿಗಳು ದೊರೆಯುತ್ತವೆ. ಅದರಂತೆ ಹುಳು, ಇರುವೆ ಮೊದಲಾದ ಕ್ಷುದ್ರ ಜೀವಿಗಳಲ್ಲಿಯೂ ದೊರೆಯುತ್ತವೆ. ಸರ್ಪಗಳಲ್ಲಿ, ಶ್ವಾಪದಗಳಲ್ಲಿ, ನೀರಿನಲ್ಲಿರುವ ಮತ್ಸ್ಯಗಳಲ್ಲಿ ಮತ್ತು ಆಕಾಶದಲ್ಲಿ ಹಾರುವ ಪಕ್ಷಿಗಳಲ್ಲಿ ಕೂಡ ಅನೇಕ ಜಾತಿಗಳಿವೆ. ಅವುಗಳ ಭಿನ್ನತ್ವದ ಚಿಹ್ನೆಗಳು ಆಯಾ ಪ್ರಾಣಿ ಸಮುದಾಯದಲ್ಲಿ ಸ್ಪಷ್ಟವಾಗಿ ಕಂಡುಬರುವುವು. ಆದರೆ ಮನುಷ್ಯರಲ್ಲಿ ಭಿನ್ನತ್ವದ ಚಿಹ್ನೆಗಳು ಕಾಣುವುದಿಲ್ಲ. ಕೂದಲು, ಕಿವಿ, ಕಣ್ಣು, ಬಾಯಿ, ಮೂಗು, ತುಟಿ, ಹುಬ್ಬು, ಕತ್ತು, ಹೊಟ್ಟೆ, ಬೆನ್ನು, ಕೈ, ಕಾಲು ಮೊದಲಾದ ಅವಯವಗಳಿಂದ ಒಬ್ಬ ಮನುಷ್ಯನು ಇನ್ನೊಬ್ಬನಿಗಿಂತ ತೀರ ಬೇರೆಯಾಗುವುದು ಶಕ್ಯವಿಲ್ಲ. ಅರ್ಥಾತ್ ಪಶುಪಕ್ಷಿ ಮೊದಲಾದವುಗಳಲ್ಲಿ ಆಕಾರಾದಿಗಳಿಂದ ಭಿನ್ನ ಭಿನ್ನ ಜಾತಿಗಳು ದೊರೆಯುವಂತೆ ಮನುಷ್ಯರಲ್ಲಿ ದೊರೆಯುವುದಿಲ್ಲ. ಎಲ್ಲ ಮನುಷ್ಯರ ಅವಯವಗಳು ಒಂದೇ ರೀತಿ ಇರುವುದರಿಂದ ಮನುಷ್ಯರಲ್ಲಿ ಜಾತಿಭೇದವನ್ನು ನಿಶ್ಚಿತಗೊಳಿಸಲು ಬರುವುದಿಲ್ಲ. ಆದರೆ ಕರ್ಮದಿಂದ ಮನುಷ್ಯನ ಜಾತಿಯನ್ನು ಗೊತ್ತು ಮಾಡುವುದು ಶಕ್ಯವಿದೆ.

"ಯಾವನೇ ಬ್ರಾಹ್ಮಣನು ಹಸುವನ್ನಿಟ್ಟುಕೊಂಡು ನಿರ್ವಾಹವನ್ನು ನಡೆಸುತ್ತಿದ್ದರೆ ಅವನನ್ನು ಹಾಲಿನವ(ಗವಳಿ) ಎನ್ನಬೇಕು; ಬ್ರಾಹ್ಮಣ ಎಂದಲ್ಲ. ಶಿಲ್ಪಕಲೆಯಿಂದ ಉಪಜೀವಿಕೆಯನ್ನು ನಡೆಸುವವ ಶಿಲ್ಪಿಗ, ವ್ಯಾಪಾರವನ್ನು ಮಾಡುವವ ವ್ಯಾಪಾರಿ, ದೂತನ ಕೆಲಸವನ್ನು ಮಾಡುವವ ದೂತ, ಕಳವಿನಿಂದ ಉಪಜೀವಿಕೆಯನ್ನು ನಡೆಸುವವ ಕಳ್ಳ, ಯುದ್ಧಕಲೆಯಿಂದ ಉಪಜೀವಿಕೆಯನ್ನು ಮಾಡಿಕೊಳ್ಳುವವ ಯೋಧ, ಯಜ್ಞಯಾಗಗಳಿಂದ ನಿರ್ವಾಹ ನಡೆಸುವವ ಯಾಜಕ ಮತ್ತು ರಾಷ್ಟ್ರದ ಮೇಲೆ ಉಪಜೀವಿಸುವವ ರಾಜನಾಗುತ್ತಾನೆ. ಆದರೆ ಇವರೊಳಗೆ ಯಾವನನ್ನೂ ಜನ್ಮದಿಂದ ಬ್ರಾಹ್ಮಣ ಎನ್ನಲುಬಾರದು."

"ಎಲ್ಲ ಸಂಸಾರ ಬಂಧನಗಳನ್ನು ಕಡಿದೊಗೆದು ಯಾವ ಪ್ರಾಪಂಚಿಕ ದುಃಖಕ್ಕೂ ಹೆದರದವನನ್ನು, ಯಾವ ವಿಷಯದ ಬಗ್ಗೆ ಆಸಕ್ತಿ ಇಲ್ಲದವನನ್ನು, ಇನ್ನೊಬ್ಬರು ಆಡಿದ ಅಪಶಬ್ದಗಳನ್ನೂ ವಿಧಿಸಿದ ವಧುಬಂಧಗಳನ್ನೂ ಸಹಿಸಿಕೊಳ್ಳುವವನನ್ನು, ಕ್ಷಮೆಯೇ ಬಲವಾಗಿ ಉಳ್ಳವನನ್ನು, ಕಮಲಪತ್ರದ ಮೇಲಿನ ಜಲಬಿಂದುವಿನಂತೆ ಇಹಲೋಕದ ವಿಷಯ ಸುಖದಿಂದ ಅಲಿಪ್ತನಾಗಿರುವನನ್ನು ನಾನು ಬ್ರಾಹ್ಮಣ ಎನ್ನುತ್ತೇನೆ."

"ಜನ್ಮದಿಂದ(ಯಾರೂ) ಬ್ರಾಹ್ಮಣನಾಗುವುದಿಲ್ಲ; ಅಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದಲೇ ಬ್ರಾಹ್ಮಣನಾಗುತ್ತಾನೆ ಮತ್ತು ಕರ್ಮದಿಂದಲೇ ಅಬ್ರಾಹ್ಮಣನಾಗುತ್ತಾನೆ. ಕರ್ಮದಿಂದ ರೈತನು ಆಗುವನು, ಕರ್ಮದಿಂದ ಶಿಲ್ಪಕಾರನಾಗುವನು, ಕರ್ಮದಿಂದ ಯಾಜಕನಾಗುವನು ಮತ್ತು ರಾಜನು ಕೂಡ ಕರ್ಮದಿಂದಲೇ ಆಗುವನು. ಈ ಇಡಿಯ ಜಗತ್ತು ಕರ್ಮದಿಂದಲೇ ನಡೆದಿದೆ. ಅಚ್ಚನ್ನು ಅವಲಂಬಿಸಿ ರಥವು ನಡೆವಂತೆ ಎಲ್ಲ ಪ್ರಾಣಿಗಳೂ ತಮ್ಮ ಕರ್ತವ್ಯವನ್ನು ಅವಲಂಬಿಸಿ ಬಾಳುತ್ತವೆ."

ಹೀಗೆ ನುಡಿದು ನಡೆದ ಮಹಾಪುರುಷನೇ ಭಗವಾನ್ ಬುದ್ಧ.

ನೇಪಾಳ ಮತ್ತು ಬಿಹಾರದ ನಡುವಿನಲ್ಲಿದ್ದ ಅನೇಕ ಕೃಷಿಪ್ರಧಾನ ಗಣಕುಲಗಳಲ್ಲಿ ಶಾಕ್ಯ ಬುಡಕಟ್ಟೂ ಒಂದು. ಈ ಶಾಕ್ಯ ಬುಡಕಟ್ಟಿನ ಅನುಕೂಲಸ್ಥ ರೈತನಾದ ಶುದ್ಧೋದನ ಮತ್ತು ಮಾಯಾದೇವಿಯವರಿಗೆ ಮಗನಾಗಿ ವೈಶಾಖ ಶುದ್ಧ ಪೂರ್ಣಿಮೆಯಂದು(ಕ್ರಿ.ಪೂ. 563) ಗೌತಮ ಹುಟ್ಟಿದ. ಹುಟ್ಟಿದ ಕೆಲವೇ

ದಿನಗಳಲ್ಲಿ ಈತನ ತಾಯಿ ಮಾಯಾದೇವಿ ತೀರಿಕೊಂಡಳು. ಅನಂತರ ಶುದ್ಧೋದನನು ಮಗುವಿನ ಪಾಲನೆಗಾಗಿ ಮಾಯಾದೇವಿಯ ತಂಗಿಯಾದ ಗೌತಮಿಯನ್ನು ಮದುವೆಯಾದ. ಗೌತಮ ಅನುಕೂಲಸ್ಥ ರೈತನ ಮಗನಾಗಿದ್ದುದರಿಂದ ಕಪಿಲವಸ್ತುವಿನ ಸುತ್ತಿನಲ್ಲೇ ಇದ್ದ ಬರಂಡುಕಾಲಾಮ ಗುರುಗಳ ಬಳಿ ಶಿಷ್ಯನಾಗಿ ವಿದ್ಯೆ ಕಲಿತ. ಜೊತೆಗೆ ಕುಲಕಸುಬುಗಳಾದ ವ್ಯವಸಾಯ, ಬೇಟೆ ಮುಂತಾದವುಗಳನ್ನೂ ಕಲಿತ. ಭೋಗ ವಿಲಾಸಗಳ ಮಧ್ಯೆ ಇದ್ದಾಗಲೂ ಗೌತಮನಿಗೆ ಮನಸ್ಸು ಜೀವನದ ಅರ್ಥವನ್ನು ಹುಡುಕಲು ತುಯ್ಯುತ್ತಿತ್ತು.

ಮುಂದೆ ಗೌತಮನಿಗೆ ಅವರ ನೆರೆಯ ಕೋಲಿಯಾ ಬುಡಕಟ್ಟಿನ ಸುಂದರ ಕನ್ಯೆ ಯಶೋಧರೆಯೊಂದಿಗೆ ವಿವಾಹವಾಯಿತು. ತನ್ನ ಇಪ್ಪತ್ತೆಂಟು–ಇಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ಗೌತಮ ರಾಹುಲನ ತಂದೆಯೂ ಆದ. ಆ ಬುಡಕಟ್ಟುಗಳ ನಡುವೆ ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಆಗಾಗ್ಗೆ ವೈಷಮ್ಯ ತಲೆದೋರುತ್ತಿತ್ತು. ಗೌತಮ ಇವನ್ನೆಲ್ಲವನ್ನೂ ವಿಷಣ್ಣವಾಗಿ ನೋಡುತ್ತಿದ್ದ.

ಒಮ್ಮೆ ಕೋಲಿಯಾ ಬುಡಕಟ್ಟಿನವರಿಗೂ ಗೌತಮನ ಶಾಕ್ಯ ಬುಡಕಟ್ಟಿನವರಿಗೂ, ನದಿನೀರಿನ ಮಾತಿಗಾಗಿ ಜಗಳವಾಯಿತು. ಈ ಜಗಳವನ್ನು ಕಂಡ ಗೌತಮ, ರಾಗದ್ವೇಷಗಳಿಂದ ಪ್ರೇರಿತನಾಗುವ ಮನುಷ್ಯನನ್ನೂ, ಅವನ ಮನಸ್ಸಿನ ಎಲ್ಲ ಸಣ್ಣತನಗಳನ್ನೂ, ಕ್ರೌರ್ಯಗಳನ್ನು ಕಣ್ಣಾರೆ ಕಂಡು ವ್ಯಾಕುಲಗೊಂಡ. ಅವನಿಗೆ ಶಸ್ತ್ರವನ್ನು ಹಿಡಿಯುವುದು ಭಯಾನಕವೆನಿಸಿತು. ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ ಏನೆಲ್ಲಾ ಮಾಡುತ್ತಾನೆ ಎಂದು ನೊಂದ. ಇಂತಹ ಕ್ಷುಲ್ಲಕ ವಿಚಾರಗಳಿಗಾಗಿ ಹೋರಾಟ ಮಾಡುವ ಮನುಷ್ಯನನ್ನು ಕಂಡು ಕಂಪಿಸಿದ. ಇದೆಲ್ಲವೂ ಅವನಿಗೆ ಅರ್ಥವಿಲ್ಲದವು ಅನ್ನಿಸಿತು. ಮನುಷ್ಯನ ಹೋರಾಟ ಇದಲ್ಲವೆಂದು ತಿಳಿದು; ಹುಟ್ಟು–ಸಾವು, ಮುಪ್ಪು, ರೋಗ, ರುಜಿನ ಮುಂತಾದವುಗಳಿಗೆ ಅರ್ಥ ಹುಡುಕುವುದೇ ನಿಜವಾದ ಹೋರಾಟ ಎಂದು ತಿಳಿದ. ಈ ಮನಸ್ಥಿತಿ ತೀವ್ರಗತಿಯನ್ನು ಮುಟ್ಟಿದಾಗ ಶ್ರಮಣನಾಗಲು ನಿರ್ಧರಿಸಿದ. ಗೌತಮನ ನಿರ್ಧಾರವನ್ನು ಕೇಳಿ, ಅವನ ತಂದೆ–ತಾಯಿಗಳು, ಹೆಂಡತಿ, ಬಂಧು ಬಳಗದವರು ಕಣ್ಣೀರು ಸುರಿಸುತ್ತಾ ಅವನ ನಿರ್ಧಾರಕ್ಕೆ ಅಡ್ಡ ಬಂದರು. ಗೌತಮ ಇದಾವುದರಿಂದಲೂ ವಿಚಲಿತನಾಗಲಿಲ್ಲ.

ಜೀವನದ ಅರ್ಥವನ್ನು ಹುಡುಕಲು, ತನ್ನ ಇಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ಪರಿವ್ರಾಜಕನಾಗಿ ಎಲ್ಲವನ್ನು ಪರಿತ್ಯಾಗ ಮಾಡಿ ಹೊರಟ.

ಹೀಗೆ ಜೀವನದ ಕ್ಲೇಶಗಳಿಗೆ ಅರ್ಥಗಳನ್ನು ಅರಸುತ್ತಾ ಹೊರಟ ಗೌತಮ, ಕಾಡುಮೇಡುಗಳಲ್ಲಿ ಅಲೆದ. ಅಲ್ಲೇ ಆತ ಅಲಾರ ಕಾಲಾಮ ಎಂಬ ಗುರುವಿನ ಶಿಷ್ಯನಾಗಿ ಅವರಿಂದ ಅನೇಕ ವಿದ್ಯೆಗಳನ್ನು ಕಲಿತ. ಆದರೆ ಇದರಿಂದ ಅವನಿಗೆ ಸರಿಯೆನಿಸುವ ಉತ್ತರ ದೊರಕಲಿಲ್ಲ. ಅಲ್ಲಿಂದ ಮುಂದೆ ಉದ್ಧಾಲಕ ರಾಮಪುತ್ತಾ ಎನ್ನುವ ಮತ್ತೊಬ್ಬ ಗುರುವಿನ ಶಿಷ್ಯನಾಗಿ ಅವರಲ್ಲಿಯೂ ಕಲಿತ. ಅವರು ಜೀವನದ ಅರ್ಥದ ಬಗ್ಗೆ ತಾವು ಕಂಡುಕೊಂಡ ಸತ್ಯವನ್ನು ಗೌತಮನಿಗೆ ತಿಳಿ ಹೇಳಿದರು. ಆದರೆ ಇದಾವುದೂ ಗೌತಮನಿಗೆ ಅಂತಿಮ ಸತ್ಯವಾಗಿ ತೋರಲಿಲ್ಲ.

ನಿರಾಶನಾಗದ ಗೌತಮ, ನಾಡಿನ ಉದ್ದಗಲಕ್ಕೂ ಅಲೆದ. ಹೀಗೆ ನಡೆದವನು ಮಗಧ ರಾಜಧಾನಿಗೆ ಬಂದ. ಆರ್ಯಾವರ್ತದಲ್ಲಿ ರಾಜಸತ್ತೆಗಳು ಆಗತಾನೆ ಪ್ರಬಲವಾಗಿ ರೂಪುಗೊಳ್ಳುತ್ತಿದ್ದವು. ಮಗಧ ಒಂದು ಪ್ರಬಲ ರಾಜಸತ್ತೆಯಾಗಿ ನಿರ್ಮಾಣಗೊಳ್ಳುತ್ತಿತ್ತು. ಬಿಂದುಸಾರ ಅದರ ರಾಜನಾಗಿದ್ದ. ಬೇರೆ ಬೇರೆ ಬುಡಕಟ್ಟಿನ ಜನರನ್ನು ತನ್ನ ರಾಜ್ಯದ ಅಧೀನಕ್ಕೆ ಒಳಪಡಿಸಿಕೊಳ್ಳುತ್ತಿದ್ದ. ಗೌತಮನನ್ನು ಕಂಡ ಬಿಂದುಸಾರ, ತನ್ನ ಸೈನ್ಯದಲ್ಲಿ ಅವನಿಗೆ ಉನ್ನತ ಪದವಿಯನ್ನು ನೀಡುವ ಬಯಕೆಯನ್ನು ವ್ಯಕ್ತಪಡಿಸಿದ. ಗೌತಮನು ಬಿಂದುಸಾರನ ಬಯಕೆಯನ್ನು ನಿರಾಕರಿಸಿ ನಾನು ಜೀವನದ ಕ್ಲೇಶಗಳಿಗೆ ಅರ್ಥಗಳನ್ನು ಹುಡುಕುತ್ತಾ ಹೊರಟವನು; ನನಗೆ ಇದರ ಗೊಡವೆ ಬೇಡ ಎಂದು ತನ್ನ ಪ್ರಶ್ನೆಗಳಿಗೆ ಏಕಾಂಗಿಯಾಗಿ ಉತ್ತರ ಹುಡುಕುತ್ತಾ ಹೊರಟ.

ಹೀಗೆ ಯಾವ ಗುರುವಿನಿಂದಲೂ ಜೀವನದ ಕ್ಲೇಶಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಾಗದ ಗೌತಮ, ಕೊನೆಗೆ ಏಕಾಂಗಿಯಾಗಿ ಕಠಿಣವಾದ ತಪಶ್ಚರ್ಯೆಗಳ ಮೂಲಕ ಸತ್ಯವನ್ನು ಕಂಡುಕೊಳ್ಳಲು ನಡೆದ.

ಮುಂದೆ ಸುಂದರ ಗ್ರಾಮವಾದ ಉರುವೇಲಕ್ಕೆ ಬಂದ. ಅಲ್ಲಿ ನಿರ್ಮಲವಾಗಿ ಹರಿಯುತ್ತಿದ್ದ ತೊರೆ, ಹಸಿರು ಮರಗಿಡಗಳು, ಅವುಗಳಿಂದ ಉಂಟಾಗಿದ್ದ ಪ್ರಶಾಂತತೆ ಗೌತಮನ ಮನಸ್ಸಿಗೆ ಹಿಡಿಸಿತು. ತನ್ನ ಗುರಿ ಸಾಧನೆಗೆ ಇದೇ ತಕ್ಕ ಸ್ಥಳವೆಂದು ನಿರ್ಧರಿಸಿ, ಆ ಕಾಲದಲ್ಲಿದ್ದ ಎಲ್ಲ ಪಂಥಗಳ ಕಟುಸಾಧನೆಗಳಿಗೆ ತನ್ನ ಮೈಮನಗಳನ್ನು ಒಡ್ಡಿದ. ಭಯವನ್ನು ಗೆಲ್ಲಲು ಅಮಾವಾಸ್ಯೆಯ ಕಗ್ಗತ್ತಲಲ್ಲಿ ಭಯಾನಕ ಕಾಡುಗಳಲ್ಲಿ ಅಲೆದ. ದಿನಗಟ್ಟಲೆ, ವಾರಗಟ್ಟಲೆ ಬರಿ ಹಿಮ್ಮಡಿಯ ಮೇಲೆ ನಿಂತುಕೊಂಡೇ ತಪಸ್ಸು ಮಾಡುತ್ತಿದ್ದ. ಶರೀರದ ಮೇಲೆ ಹಿಡಿತ ಸಾಧಿಸಲು ಆಹಾರ ಸೇವನೆಯನ್ನು ಮಿತಗೊಳಿಸುತ್ತಾ ಬಂದ. ದಿನಕ್ಕೊಮ್ಮೆಯಂತೆ, ಎರಡು ದಿನಕ್ಕೊಮ್ಮೆಯಂತೆ, ಮೂರು ದಿನ, ಏಳು ದಿನ, ಹದಿನೈದು ದಿನಕ್ಕೊಮ್ಮೆಯಂತೆ ಆಹಾರ ಸೇವಿಸುವುದನ್ನು ರೂಢಿಸಿಕೊಂಡ. ನೀರಿನ ಸೇವನೆಯನ್ನು ಕ್ರಮೇಣ ತೊರೆದು ತನ್ನ ದೇಹ ದಂಡನೆಯನ್ನು ಮುಂದುವರಿಸಿದ. ಶರೀರ ದುರ್ಬಲವಾಯಿತು. ಮನೋಬಲದಿಂದ ಜೀವ ಹಿಡಿದಿದ್ದ. ಇದರಿಂದ ಅವನ ದೇಹ ಕ್ರಿಮಿಕೀಟಗಳ ಆಗರವಾಯಿತು. ದೈಹಿಕ ತೇಜಸ್ಸು ಕ್ಷೀಣಿಸಿತು. ಅವನು ನಿಶ್ಶಕ್ತನಾದ. ಅವನ ಮೈಮೇಲಿನ ರೋಮಗಳು ಉದುರಿದವು. ಮೈಚರ್ಮ ಸುಕ್ಕುಗಟ್ಟಿ ಜೋಲಾಡಿತು. ತಲೆಗೂದಲು ಬೋಳಾಯಿತು. ಕಣ್ಣುಗಳು ಕಂದಕದಂತೆ ಗುಳಿಬಿದ್ದವು. ಇದರಿಂದ ಗೌತಮ ಒಣಮರದ ತೊಗಟೆಯಂತಾದ.

ಗೌತಮನ ಈ ರೀತಿಯ ದೇಹದಂಡನೆಯ ಸಾಧನೆಗಳನ್ನು ನೋಡಿ ಐದು ಜನ ಶ್ರಮಣರು ಅವನ ಶಿಷ್ಯರಾದರು.

ಗೌತಮ ಇಂಥ ಕಠಿಣವಾದ ತಪಶ್ಚರ್ಯೆಗಳನ್ನೂ, ದೇಹದಂಡನೆಯನ್ನೂ ನಿರಂತರವಾಗಿ ಏಳು ವರ್ಷ ನಡೆಸಿದರೂ, ಆದ ಲಾಭ ಭಯವನ್ನು ಗೆದ್ದದ್ದು; ಮಾಂಸಲ ಶರೀರದ ಕಾಮನೆಗಳನ್ನು ಹತ್ತಿಕ್ಕಿದ್ದು; ಬುದ್ಧಿಬಲದ ಮೇಲೆ ಪ್ರಭುತ್ವ ಸಾಧಿಸಿದ್ದು; ಇದಿಷ್ಟು ಮಾತ್ರ. ಆದರೇನು ಅರಿವು ದಕ್ಕಲಿಲ್ಲ. ಇದಾವುದರಿಂದಲೂ ಏನೂ ಉಪಯೋಗವಿಲ್ಲವೆಂದುಕೊಂಡ. ಭೋಗಮಾರ್ಗದಂತೆಯೇ ನಿಗ್ರಹಮಾರ್ಗವು ಮನುಷ್ಯನಿಗೆ ಸತ್ಯದ ದಾರಿಯನ್ನು ತೋರಿಸುವುದಿಲ್ಲ ಎಂಬುದನ್ನು ಅರಿತು, ನಿಧಾನವಾಗಿ ಸಾಮಾನ್ಯ ಮನುಷ್ಯರಂತೆ ಆಹಾರವನ್ನು ಸೇವಿಸುತ್ತಾ ಮನುಷ್ಯರಂತೆ ವರ್ತಿಸತೊಡಗಿದ.

ತದನಂತರ ಅವನಲ್ಲಾದ ಬದಲಾವಣೆಯನ್ನು ಕಂಡ ಅವನ ಶಿಷ್ಯರು,

"ಗೌತಮನು ಸಾಮಾನ್ಯ ಮನುಷ್ಯರಂತೆ ಭೋಗಜೀವನಕ್ಕೆ ಬಿದ್ದ; ಇನ್ನು ಅವನ ಕತೆ ಮುಗಿದಂತೆಯೇ" ಎಂದು ಭಾವಿಸಿ ಅವನಿಂದ ದೂರವಾದರು. ಅರಿವಿಗಾಗಿ ಹುಡುಕಾಟ ಮತ್ತೆ ಹೊಸದಾಗಿ ಪ್ರಾರಂಭವಾಯಿತು. ಮುಂದುವರಿಯುತ್ತ ನಡೆದ ಗೌತಮ ಗಯೆಗೆ ಬಂದ. ಅಲ್ಲಿನ ನೈರಂಜನ ನದಿಯ ಹತ್ತಿರದ ಆಲದಮರದ ಕೆಳಗೆ ಕುಳಿತ. ಆ ಊರಿನ ಗೌಡನ ಮಗಳಾದ ಸುಜಾತೆಯು, ತನಗೆ ಗಂಡುಮಗುವಾಗಿದ್ದರ ಕಾರಣಕ್ಕಾಗಿ ವೃಕ್ಷ ದೇವತೆಗೆ ಹರಕೆ ಸಲ್ಲಿಸಲು ಪಾಯಸ ತಂದಿದ್ದಳು. ಆಗ ಅಲ್ಲಿಯೇ ಕುಳಿತಿದ್ದ ಗೌತಮನಿಗೆ ನೀಡಿದಳು.

ಈ ಬಾರಿಯ ಹುಡುಕಾಟದಲ್ಲಿ ಕಟುಸಾಧನೆಗಳ ಅತಿ ವಿಪರೀತತೆಯನ್ನು ಕೈಬಿಡಲಾಗಿತ್ತು. ದೇಹಧಾರಣೆಗೆ ಬೇಕಾಗುವಷ್ಟು ಆಹಾರೋಪಚಾರಗಳನ್ನು ಉಳಿಸಿಕೊಳ್ಳಲಾಗಿತ್ತು. ಈ ರೀತಿ ಆರೋಗ್ಯಕರ ಮೈ ಮನಸ್ಸುಗಳನ್ನು ಗಳಿಸಿಕೊಂಡು ಗೌತಮ ಅರಳಿಮರವೊಂದರ ಬುಡದಲ್ಲಿ ಕುಳಿತು, ನಿರಾಳ ಮನಸ್ಸಿನ ವೈಚಾರಿಕ ನೆಲಗಟ್ಟಿನ ಮೇಲೆ ಧ್ಯಾನ ಮುಂದುವರಿಸಿದ. ಪ್ರಪಂಚದ ಎಲ್ಲ ಕಾಮನೆಗಳೂ ಗೌತಮನ ಮುಂದೆ ಸುಳಿದು ಆತನ ಮನಸ್ಸನ್ನು ಸೆಳೆಯಲು ಪ್ರಯತ್ನಿಸಿದವು. ಗೌತಮ ವಿಚಲಿತನಾಗಲಿಲ್ಲ. ದೃಢಚಿತ್ತನಾಗಿ ಧ್ಯಾನವನ್ನು ಮುಂದುವರಿಸಿದ. ಮನಸ್ಸಿನಲ್ಲಿ ಕತ್ತಲೆ ಹರಿದು ಪ್ರಕಾಶ ಮೈದೋರಿತು. ಅರಿವು ಮೂಡಿಬಂತು.

ವೈಶಾಖ ಶುದ್ಧ ಪೂರ್ಣಿಮೆಯಂದು ಗೌತಮನಿಗೆ ಚಿತ್ತದಲ್ಲಿ ಅರಿವು ಸಿದ್ಧಿಸಿ, ಗೌತಮನಾಗಿದ್ದವನು ಬೋಧಿಯನ್ನು ಪಡೆದು ಬುದ್ಧನಾಗಿ ಕಂಗೊಳಿಸಿದ.

ಬುದ್ಧನಾದ ಮೇಲೆ ಶ್ರೇಷ್ಠವಾದ ನಾಲ್ಕು ಪರಮ ಸತ್ಯಗಳು ಮತ್ತು ಅಷ್ಟಾಂಗ ಮಾರ್ಗಗಳನ್ನು ಕಂಡುಕೊಂಡ. ಆಗ ಅವನ ಮುಂದೆ, ಮನುಷ್ಯರನ್ನು ಕಾಡುವ ಪ್ರಲೋಭನೆಗಳ, ಕಾಮನೆಗಳ, ಕ್ಲೇಶಗಳ ರೂಪವಾದ ಮಾರನು ಬಂದು, ಇನ್ನು ಬುದ್ಧನಾಗಿರುವ ನೀನು ನಿರ್ವಾಣಕ್ಕೆ ಹೋಗಬಹುದು ಎಂದು ಹೇಳಿದ. ಬುದ್ಧನು ಮಾರನ ಮಾತನ್ನು ತಳ್ಳಿಹಾಕಿ, ಜಗತ್ತಿನ ಜೀವರಾಶಿಗಳೆಲ್ಲಾ ಬುದ್ಧನಾಗುವ ದಾರಿಯಲ್ಲಿ ಸಾಗಬೇಕು ಎಂದು ಹೇಳಿದ. ನಿರ್ವಾಣದ ಸುಂದರ ನಗರಕ್ಕೆ ಪ್ರವೇಶ ದೊರಕಿಸಿಕೊಂಡು ಬುದ್ಧನಾದ ಗೌತಮ ಅಲ್ಲಿಯೇ ಉಳಿದುಬಿಡಲಿಲ್ಲ. ತಾನು ಕಂಡ ಆ ಸುಂದರ ಪಟ್ಟಣಕ್ಕೆ ಬೇರೆಯವರನ್ನು ಕೊಂಡೊಯ್ಯುವ ಮನಸ್ಸು ಮಾಡಿದ. ಕ್ಲೇಶಗಳ ಧೂಳಿನಿಂದ ಮಸುಕಾಗಿರುವ ಜಗತ್ತಿನ ಜೀವರಾಶಿಗಳ ಕಣ್ಣನ್ನು ಸ್ವಚ್ಛಗೊಳಿಸಿ, ಬುದ್ಧನ ಕಣ್ಣನ್ನು ಪಡೆದುಕೊಳ್ಳುವ ದಾರಿಯನ್ನು ತೋರಿಸಲು ಮುಂದಾದ.

ಇದಕ್ಕಾಗಿ ಭಿಕ್ಕು ಭಿಕ್ಕುನಿಯರ ಸಂಘವನ್ನು ಸ್ಥಾಪಿಸಲು ನಿಶ್ಚಯಿಸಿದ. ಅರಿವು ಮೈದೋರಿದ ಸಂದರ್ಭದಲ್ಲಿ ಭಗವಾನ್ ಬುದ್ಧ ಕಂಡುಕೊಂಡ ನಾಲ್ಕು ಪರಮ ಸತ್ಯಗಳು ಇವು.

ಮೊದಲನೆಯ ಪರಮ ಸತ್ಯ

ಬದುಕು ದುಃಖದಿಂದ ಕೂಡಿದೆ ಎಂಬುದು. ಹುಟ್ಟು, ಸಾವು, ಮುಪ್ಪು ರೋಗರುಜಿನಗಳು ಬದುಕನ್ನು ಯಾತನಾಮಯವನ್ನಾಗಿಸಿವೆ. ಬೇಡವಾದುದರ ಸಂಬಂಧ, ಬೇಕೆನಿಸುವುರಿಂದ ವಿಯೋಗ ಎಲ್ಲವೂ ಬದುಕನ್ನು ದುಃಖಮಯವನ್ನಾಗಿಸಿವೆ. ನಾವು ಯಾವುದನ್ನು ಬದುಕಿನಲ್ಲಿ ಸುಖಮಯ ಕ್ಷಣಗಳೆಂದು ಪರಿಗಣಿಸುತ್ತೇವೋ ಆ ಕ್ಷಣಕ್ಕಾಗಿ ಕಾತರಿಸುವುದು ಮತ್ತೆ ಮತ್ತೆ ದುಃಖವೇ ಆಗಿರುತ್ತದೆ. ಪ್ರತಿ ಕ್ಷಣವೂ ಎಲ್ಲವೂ ಬದಲಾವಣೆಯಾಗುತ್ತಿರುವ ಈ ಪ್ರಪಂಚದಲ್ಲಿ ಸುಖವೆಂಬುದು ಶಾಶ್ವತ ನೆಲೆಯಲ್ಲ. ಅದೂ ಕೂಡ ಬದುಕನ್ನು ದುಃಖದತ್ತ ಕೊಂಡೊಯ್ಯುವ ತತ್‌ಕ್ಷಣದ ಅವಸ್ಥೆ ಮಾತ್ರ. ಅಂದರೆ ಬದುಕನ್ನು ಬದುಕಿನಿಂದ ಹೊರಗೆ ನಿಂತು ನೋಡಿದಾಗ ಕಾಣುವ ಸ್ಥಿರಸತ್ಯ ಬದುಕು ದುಃಖದಿಂದ ಕೂಡಿದೆ ಎಂಬುದು.

ಎರಡನೆಯ ಪರಮ ಸತ್ಯ

ಜೀವಿಯ ಬಯಕೆಗಳೇ ದುಃಖದ ಉದಯಕ್ಕೆ ಕಾರಣವಾಗುತ್ತವೆ ಎಂಬುದು. ಜೀವಿಯ ಬಯಕೆಗಳು ಹಲವಾರು. ಇಂದ್ರಿಯ ಭೋಗಗಳು, ಶಕ್ತಿ, ಸಂಪತ್ತು, ಅಧಿಕಾರಗಳ ಅಭಿಲಾಷೆ ಇತ್ಯಾದಿ. ಇದಿಷ್ಟೇ ಅಲ್ಲ; ಕಲ್ಪನೆಗಳಿಗೆ, ಭಾವನೆಗಳಿಗೆ, ಅಭಿಪ್ರಾಯಗಳಿಗೆ, ಸಿದ್ಧಾಂತಗಳಿಗೆ, ನಂಬಿಕೆಗಳಿಗೆ ಅಂಟಿಕೊಂಡಿರುವುದು ಬಯಕೆಯ ಇನ್ನೊಂದು ಮುಖವೇ ಆಗಿರುತ್ತದೆ. ಅರ್ಥಾತ್, ವ್ಯಕ್ತಿಯ ಯಾವುದೇ ಸ್ವಾರ್ಥಪರ ಆಸೆ-ಆಕಾಂಕ್ಷೆಗಳು ಅಂತಿಮವಾಗಿ ದುಃಖದ ಉದಯಕ್ಕೆ ಫಲವತ್ತಾದ ನೆಲೆಗಳಾಗಿಯೇ ಕಾರ್ಯ ನಿರ್ವಹಿಸುತ್ತವೆ.

ಮೂರನೆಯ ಪರಮ ಸತ್ಯ

ದುಃಖ ನಿವಾರಣೆಗೆ ಸಂಬಂಧಿಸಿದುದು. ಜೀವಿ ತನ್ನ ಆಶೆ, ಬಯಕೆ ಅಥವಾ ತೃಷ್ಣೆಗಳನ್ನು ಇಲ್ಲವಾಗಿಸಿಕೊಂಡಲ್ಲಿ, ಜೀವನದಲ್ಲಿ ಪಡೆದುಕೊಳ್ಳಲು ಏನೂ ಇಲ್ಲವಾದುದರಿಂದಾಗಿ; ಯಾವ ಸಂಕಷ್ಟಗಳಿಗೂ ಅವನು ಸಿಕ್ಕಿಕೊಳ್ಳುವುದಿಲ್ಲ. ಅತೃಪ್ತಿ, ಆಶೆ, ಬಯಕೆಗಳನ್ನುಳಿಸಿಕೊಂಡ ಜೀವ, ಒಂದು ಜೀವಮಾನದಲ್ಲಿ ಅವು ಈಡೇರದಿದ್ದರೆ, ಆ ಬಯಕೆಗಳ ಪೂರೈಕೆಗಾಗಿ ಮತ್ತೊಂದು ಜನ್ಮವೆತ್ತಬೇಕಾಗಿ ಬರುತ್ತದೆ. ಆ ಜನ್ಮ ಎತ್ತಿದ್ದಾಗ ಮತ್ತೆ ಹೊಸ ಹೊಸ ಆಶೆ-ಬಯಕೆಗಳು ಚಿಗುರುತ್ತವೆ. ಹೊಸ ಬಯಕೆಗಳ ಪೂರೈಕೆಗಾಗಿ ಜೀವ ಮರುಹುಟ್ಟು ಪಡೆಯುತ್ತ ಧಾವಿಸುತ್ತದೆ. ಹೀಗೆ ಜೀವಿ ಹುಟ್ಟು-ಸಾವುಗಳ ಭವಚಕ್ರದಲ್ಲಿ ಸಿಲುಕಬೇಕಾಗುತ್ತದೆ.

ನಾಲ್ಕನೇ ಪರಮ ಸತ್ಯ

ಬೋಧಿಯನ್ನು ಪಡೆದು ಈ ಭವಚಕ್ರಗಳಿಂದ ಪಾರಾಗಲು ಇರುವ ಏಕೈಕ ಉಪಾಯ-ಬಯಕೆಗಳನ್ನು ಇಲ್ಲವಾಗಿಸಿಕೊಳ್ಳುವುದು. ಆಶೆ-ಬಯಕೆಗಳನ್ನು ಇಲ್ಲವಾಗಿಸಿಕೊಂಡು, ಹುಟ್ಟು-ಸಾವುಗಳ ಭವಚಕ್ರದಿಂದ ಪಾರಾಗಬೇಕಾದರೆ, ಜೀವಿ ಅನುಸರಿಸಬೇಕಾದ ಮಾರ್ಗವೇ ಈ ಸತ್ಯ. ಇದನ್ನು ಶ್ರೇಷ್ಠ ಅಷ್ಟಾಂಗಿಕ ಮಾರ್ಗವೆಂದು ಕರೆಯಲಾಗಿದೆ.

ಶ್ರೇಷ್ಠ ಅಷ್ಟಾಂಗ ಮಾರ್ಗಗಳು

ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮಾಂತ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿ.

ಸಮ್ಯಕ್ ದೃಷ್ಟಿ ಎಂದರೆ ಜೀವನದ ಅರ್ಥವನ್ನು ಬುದ್ಧ ಭಗವಾನರು ಹೇಳಿದ ಪರಮಸತ್ಯಗಳ ಆಧಾರದ ಮೇಲೆ ಸಮಗ್ರವಾಗಿ ಗ್ರಹಿಸುವುದು. ಸಮಾಹಿತ ಚಿತ್ತದಿಂದ ಜೀವನದ ಅರ್ಥವನ್ನು ಗ್ರಹಿಸಿ ಅದಕ್ಕನುಗುಣವಾಗಿ ತನ್ನ ದೈನಂದಿನ ಜೀವನವನ್ನು ರೂಪಿಸಿಕೊಳ್ಳುವುದು.

ಸಮ್ಯಕ್ ಸಂಕಲ್ಪ ಎಂದರೆ ವ್ಯಕ್ತಿತ್ವದ ಅರ್ಥವನ್ನು ಸಮಗ್ರ ಪರಿಶೀಲನೆಯ ದೃಷ್ಟಿಯಲ್ಲಿ ನೋಡಿ ಅರಿತುಕೊಳ್ಳುವುದು ಮತ್ತು ಇತರರಿಗೆ ತಿಳಿಸಿಕೊಡುವುದು.

ಸಮ್ಯಕ್ ವಾಕ್ ಎಂದರೆ ಧರ್ಮದ ವಚನವನ್ನು ನುಡಿಯುವುದು ಎಂದರ್ಥ. ಬುದ್ಧ ಭಗವಾನರು ತಿಳಿಸಿಕೊಟ್ಟ ಧರ್ಮವನ್ನೇ ಸರಿಯಾಗಿ ಅರ್ಥ ಮಾಡಿಕೊಂಡು ಅದನ್ನೇ ಇತರರೊಡನೆ ನುಡಿಯುವುದು.

ಸಮ್ಯಕ್ ಕರ್ಮಾಂತ ಎಂದರೆ ತಾನು ಮಾಡುವ ಕ್ರಿಯೆಗಳೆಲ್ಲಾ ಧರ್ಮದ ನೆಲೆಗಟ್ಟಿನ ಮೇಲೆ ಇರಬೇಕೆನ್ನುವ ನಿರ್ಧಾರ. ಇದರಿಂದಾಗಿ ವ್ಯಕ್ತಿ ಅಕುಶಲ ಕರ್ಮಗಳನ್ನು ಒಟ್ಟಾರೆ ತೊರೆದು, ಕುಶಲ

ಕರ್ಮಗಳನ್ನು ಮಾತ್ರ ಮಾಡುತ್ತಾನೆ. ಇದು ವ್ಯಕ್ತಿಯನ್ನು ಉನ್ನತ ಹಾದಿಯಲ್ಲಿ ನಡೆಸುತ್ತದೆ.

ಸಮ್ಯಕ್ ಆಜೀವ ಎಂದರೆ ವ್ಯಕ್ತಿ ಪರಿಶುದ್ಧ ಜೀವನವನ್ನು ನಡೆಸುವುದೇ ಆಗಿದೆ. ಅರ್ಥಾತ್ ವ್ಯಕ್ತಿ ಕಾಯಾ, ವಾಚಾ, ಮನಸಾ ಪರಿಶುದ್ಧನಾಗಿದ್ದು; ತನ್ನ ಜೀವನವನ್ನು ನಡೆಸುವುದು.

ಸಮ್ಯಕ್ ವ್ಯಾಯಾಮ ಎಂದರೆ ಕುಶಲ ಚಿತ್ತವನ್ನು ಬೆಳೆಸಿಕೊಳ್ಳುವಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದೇ ಆಗಿದೆ. ಅಕುಶಲ ವಿಚಾರಗಳನ್ನು ತನ್ನ ಚಿತ್ತದಿಂದ ಪ್ರತಿ ಕ್ಷಣವೂ ತೊಡೆದು ಹಾಕುತ್ತಾ, ವ್ಯಕ್ತಿ ಧರ್ಮದ ಕುಶಲ ವಿಚಾರಗಳಲ್ಲಿ ತನ್ನ ಮನಸ್ಸನ್ನು ನಿಲ್ಲಿಸಿ ಸಮಾಧಾನಚಿತ್ತನಾಗಿರಬೇಕಾದುದು ಅವಶ್ಯ.

ಸಮ್ಯಕ್ ಸ್ಮೃತಿ ಎಂದರೆ ಸಮಾಧಾನ ಚಿತ್ತದಿಂದ ಇರುವುದು. ಪರಮ ಸತ್ಯಗಳನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡು ಅವುಗಳೊಂದಿಗೆ ತಾದಾತ್ಮ್ಯ ಭಾವವನ್ನು ಪಡೆದು, ಚಿತ್ತ-ವಿಸ್ಮೃತಿಗಳಿಂದ ದೂರನಾಗಿ ಪೂರ್ಣಪ್ರಜ್ಞನಾಗಿ ವ್ಯಕ್ತಿ ಸಮಾಧಾನ ಚಿತ್ತದಿಂದ ಇರುವುದು.

ಸಮ್ಯಕ್ ಸಮಾಧಿ ಎಂದರೆ ವ್ಯಕ್ತಿ ಸ್ಥಿರಚಿತ್ತತೆಯನ್ನು ಸಂಪಾದಿಸಿಕೊಂಡು ಸಮಗ್ರ ಶಾಂತಿಯ ನೆಲೆಯಲ್ಲಿ ಅಚಲನಾಗಿ ನಿಂತು ತನ್ನನ್ನು ತಾನು ಇಲ್ಲವಾಗಿಸಿಕೊಳ್ಳುತ್ತಾ ಹುಟ್ಟು-ಸಾವುಗಳೆಂಬ ಭವಚಕ್ರದಿಂದ ವಿಮುಕ್ತಿ ಪಡೆಯುವ ಹಾದಿಯ ಪಯಣ.

ಈ ನಾಲ್ಕು ಪರಮ ಸತ್ಯಗಳು ಹಾಗೂ ಶ್ರೇಷ್ಠ ಅಷ್ಟಾಂಗ ಮಾರ್ಗವೇ ಮನುಷ್ಯನು ಹುಟ್ಟು-ಸಾವುಗಳ ಭವಚಕ್ರದಿಂದ ಪಾರಾಗಿ ನಿರ್ವಾಣಪದ ಪಡೆಯಲು ನಡೆಯಬೇಕಾಗಿರುವ ದಾರಿ.

ಇದೇ ಬುದ್ಧ ತೋರಿಸಿದ ದಾರಿ. ತನ್ನ ಮೂವತ್ತಾರನೇ ವಯಸ್ಸಿನಲ್ಲಿ ಬೋಧಿಯನ್ನು ಪಡೆದು ಬುದ್ಧನಾಗಿ ಕಂಗೊಳಿಸುತ್ತಿದ್ದ ಗೌತಮ, ಧರ್ಮ ಪ್ರಸಾರಕ್ಕಾಗಿ ಸಂಘದ ಸ್ಥಾಪನೆಗಾಗಿ ನಿಶ್ಚಯಿಸಿದ. ನೀತಿ-ನಿಯಮಾವಳಿಗಳ ಆಧಾರದ ಮೇಲೆ ಸಂಘ ನಿರ್ಮಾಣದ ಕಲ್ಪನೆಯನ್ನು ಮೊದಲು ತೋರಿಸಿದವನು ಬುದ್ಧ.

ಅಲ್ಲಿಂದ ಕಾಶಿಯ ಇಸಿ ಪಟ್ಟಣಕ್ಕೆ ಬಂದು ಮೊದಲು ತನ್ನೊಂದಿಗೆ ಇದ್ದು, ತೊರೆದುಹೋಗಿದ್ದ ಐದು ಜನ ಶಿಷ್ಯರನ್ನು ಕಂಡು, ಹೊಸ ತೇಜಸ್ಸಿನಿಂದ ಬಂದ ಬುದ್ಧನನ್ನು ಕಂಡ ಕೂಡಲೇ ಆ ಐದೂ ಜನರು ನಮಸ್ಕರಿಸಿದರು. ನಂತರ ಬುದ್ಧ ಬೋಧಿ ಸಂಘವನ್ನು ಪಡೆದುಕೊಂಡ. ಶ್ರೇಷ್ಠಸತ್ಯವನ್ನೂ, ಅಷ್ಟಾಂಗ ಮಾರ್ಗಗಳನ್ನೂ ಅವರಿಗೆ ತಿಳಿಯ ಹೇಳಿದ. ಅದನ್ನು ಕೇಳಿದ ಅವರು ಬುದ್ಧನ ಮೊದಲ ಶಿಷ್ಯರಾಗಿ ಸಂಘವನ್ನು ಸೇರಿದರು. ಇದು ಬುದ್ಧನು ಮಾಡಿದ ಮೊದಲ ಧರ್ಮ ಪ್ರಸಾರ. ಅದನ್ನೇ 'ಧರ್ಮಚಕ್ರ ಪ್ರವರ್ತನ'ವೆಂದು ಕರೆಯಲಾಗಿದೆ.

ಬುದ್ಧನು ಕಟ್ಟಿದ ಸಂಘ ಜಾತಿ-ಮತ ಮತ್ತು ಕುಲಗಳ ಭೇದಗಳಿಗೆ ಮನ್ನಣೆ ಕೊಡುತ್ತಿರಲಿಲ್ಲ. ಮನುಷ್ಯ-ಮನುಷ್ಯರಲ್ಲಿ ಭೇದವನ್ನು ಒಪ್ಪುತ್ತಿರಲಿಲ್ಲ. ಸಂಘದ ಆಸ್ತಿವಾರವನ್ನು ಜನತಂತ್ರದ ಆಧಾರದ ಮೇಲೆ ರೂಪಿಸಿದ್ದ. ಮೊದಲು ಸಂಘವನ್ನು ಸ್ಥಾಪಿಸಿ ಅನಂತರ ಭಿಕ್ಕುಗಳ ಚರ್ಯೆಯನ್ನು ಗಮನಿಸಿ, ಅದಕ್ಕೆ ತಕ್ಕಂತಹ ನಿಯಮಗಳನ್ನು ರಚಿಸುತ್ತಿದ್ದ. ತಪ್ಪಿದಾಗ ಅದನ್ನು ತಿದ್ದುತ್ತಿದ್ದ. ಹಾಗೆಯೇ ಎಲ್ಲರೂ ಸುಲಭವಾಗಿ ಸಂಘವನ್ನು ಸೇರುವಂತಿರಲಿಲ್ಲ. ಯಾರು ಎಲ್ಲವನ್ನೂ ಪರಿತ್ಯಾಗ ಮಾಡಿ ನಿರ್ವಾಣದ ದಾರಿಯಲ್ಲಿ ನಡೆಯಲು ಇಚ್ಛಿಸುತ್ತಾರೋ ಅಂಥವರು ಮೊದಲು ಸಂಘದ ಹಿರಿಯ ಭಿಕ್ಕುವಿನ ಪರಿವೀಕ್ಷಣೆಯಲ್ಲಿ ನಾಲ್ಕು ತಿಂಗಳು ಇರಬೇಕಾಗುತ್ತಿತ್ತು. ನಂತರ ಅವರಿಗೆ ಒಪ್ಪಿತವಾದಲ್ಲಿ ಮಾತ್ರ, ಆ ಶ್ರಮಣನಿಗೆ ಭಿಕ್ಕುವಾಗಿ ಪೂರ್ಣ ದೀಕ್ಷೆ ನೀಡಿ, ಸಂಘಕ್ಕೆ ಸೇರಿಸಿಕ್ಕೊಳ್ಳಲಾಗುತ್ತಿತ್ತು. ಹಾಗೆಯೇ ಸಂಘದ ನಿಯಮವನ್ನು ಪಾಲಿಸದವನು ಸಂಘವನ್ನು ತೊರೆಯಬೇಕಾಗುತ್ತಿತ್ತು.

ಸಂಘದ ಭಿಕ್ಕುಗಳಾದವರಿಗೆ ಬುದ್ಧ ಹಲವಾರು ನಿಯಮಗಳನ್ನು ವಿಧಿಸಿದ. ಭಿಕ್ಕುವಾದವನಿಗೆ ಖಾಸಗಿ ಆಸ್ತಿ ಇರಬಾರದು. ಕೇವಲ ಭಿಕ್ಷಾನ್ನದ ಮೂಲಕವೇ ಜೀವಿಸಬೇಕು. ತಾವು ಬೇಡಿ ಪಡೆದ ಆಹಾರವು ಮಾಂಸಾಹಾರವಾಗಿದ್ದರೂ ಸೇವಿಸಬಹುದು. ಆದರೆ ಭಿಕ್ಕುವಿನ ಆಹಾರಕ್ಕಾಗಿಯೇ ಒಂದು ಪ್ರಾಣಿಯನ್ನು ಕೊಲ್ಲುವುದಾದರೆ ಅದನ್ನು ತಡೆಯಬೇಕು. ತನ್ನ ಮೂಲಭೂತ ಅವಶ್ಯಕತೆಗಿಂತ ಹೆಚ್ಚಾದ ವಸ್ತುಗಳನ್ನು ಇತರರಿಗೆ ಹಂಚಬೇಕು. ಯಾವುದೇ ಊರಿನಲ್ಲಿ ಮೂರು ದಿನಗಳಿಗಿಂತ ಹೆಚ್ಚಾಗಿ ತಂಗಿರಬಾರದು. ಯಾರಿಗೂ ಬಲವಂತದಿಂದ ಧರ್ಮವನ್ನು ಉಪದೇಶಿಸಬಾರದು. ಕೇಳಿದರೆ ಮಾತ್ರ ಉಪದೇಶ ಮಾಡಬಹುದು. ತಿಂಗಳಿನ ನಿಗದಿತ ದಿನದಂದು ಭಿಕ್ಕುಗಳು ಸಭೆ ಸೇರಬೇಕು. ಅಂಥ ಸಭೆಗಳಲ್ಲಿ ಭಿಕ್ಕು ತಾನು ಮಾಡಿದ ತಪ್ಪುಗಳನ್ನು ಸಭೆಯ ಮುಂದಿಡಬೇಕು(ಸಂಘದ ಭಿಕ್ಕುಗಳು ಪಾಲಿಸಬೇಕಾದ ನಿಯಮಗಳನ್ನು ವಿನಯ ಪಿಟಕದಲ್ಲಿ ವಿವರಿಸಲಾಗಿದೆ).

ಬುದ್ಧನ ತತ್ವಗಳನ್ನು ತಿಳಿಸುತ್ತಿದ್ದ ಸಂಘಕ್ಕೆ ಬೇರೆ ಬೇರೆ ಪಂಥದ ಶ್ರಮಣರು ಆಕರ್ಷಿತರಾಗಿ ಸಂಘವನ್ನು ಕ್ರಮೇಣ ಸೇರತೊಡಗಿದರು. ಇದರಿಂದಾಗಿ ಭಿಕ್ಕುಗಳ ಸಂಘ ಆರಂಭವಾಯಿತು. ಸಾರಿಪುತ್ರ, ಮೌದ್ಗಲಾಯನ, ಪೂರಣಕಸ್ಯಪ ಮತ್ತು ಆನಂದ ಬುದ್ಧನ ಶಿಷ್ಯರಲ್ಲಿ ಉಲ್ಲೇಖಾರ್ಹರು. ಬುದ್ಧನ ತತ್ವಗಳಿಂದ ಆಕರ್ಷಿತರಾಗಿ ಅನೇಕ ಶ್ರೀಮಂತವರ್ಗದವರೂ, ರಾಜರೂ ಬುದ್ಧನ ಶಿಷ್ಯರಾದರು. ಇವರಲ್ಲಿ ಮಗಧದ ಬಿಂದುಸಾರ ಮತ್ತು ಕೋಸಲದ ಪ್ರಸೇನ ಜಿತ್ತರಾಜರೂ ಇದ್ದರು. ಹಾಗೆಯೇ ಮಹಿಳೆಯರೂ ಬುದ್ಧನ ಶಿಷ್ಯೆಯರಾಗಿ ಭಿಕ್ಕುನಿಯರ ಸಂಘವನ್ನು ಸೇರಿದರು. ಹೀಗೆ ಸೇರಿದವರಲ್ಲಿ ಬುದ್ಧನ ಸಾಕುತಾಯಿಯಾದ ಗೌತಮಿ, ಹೆಂಡತಿಯಾದ ಯಶೋಧರೆಯೂ ಇದ್ದರು. ಮಗನಾದ ರಾಹುಲನೂ ಭಿಕ್ಕು ಸಂಘವನ್ನು ಸೇರಿದ.

ಸಂಘದ ಭಿಕ್ಕುಗಳು ಮತ್ತು ಭಿಕ್ಕುನಿಯರು ವರ್ಷದ ಎಂಟು ತಿಂಗಳ ಕಾಲ ಊರಿನಿಂದ ಊರಿಗೆ ಅಲೆಯುತ್ತಾ ಬುದ್ಧನ ತತ್ವವನ್ನು ಪ್ರಸಾರ ಮಾಡುತ್ತಿದ್ದರು. ಸ್ವತಃ ಬುದ್ಧನೂ ಅವರೊಂದಿಗೆ ಸೇರಿ ಧರ್ಮ ಪ್ರಸಾರ ಮಾಡುತ್ತಿದ್ದ. ಇನ್ನುಳಿದ ವರ್ಷಾಕಾಲದಲ್ಲಿ ಅವರೆಲ್ಲರೂ ಸಂಘಕ್ಕಾಗಿ ಶ್ರೀಮಂತರು ಕಟ್ಟಿಸಿ ದಾನ ನೀಡಿದ್ದ ಆರಾಮಗಳಲ್ಲಿ ತಂಗುತ್ತಿದ್ದರು. ಆ ದಿನಗಳಲ್ಲಿ ಪರಸ್ಪರ ವಿಚಾರ-ವಿನಿಮಯ, ಧ್ಯಾನಗಳಲ್ಲಿ ತೊಡಗಿರುತ್ತಿದ್ದರು.

ಆ ಕಾಲಕ್ಕೆ ಬುದ್ಧನ ಧರ್ಮ ಪ್ರಸಾರದ ಹಾದಿ ಸುಗಮವಾಗಿರಲಿಲ್ಲ. ಆವೊತ್ತಿನ ಬೇರೆ ಬೇರೆ ಧರ್ಮದ ಶ್ರಮಣ ಪಂಥದವರಿಂದ ಬುದ್ಧನ ಬಗ್ಗೆ ಅನೇಕ ಅಪಪ್ರಚಾರಗಳು ನಡೆಯುತ್ತಿದ್ದವು. ಭಿಕ್ಕುಗಳು ಮತ್ತು ಭಿಕ್ಕುನಿಯರಿಗೆ ದೈಹಿಕ ಹಿಂಸೆ ಕೊಡುವುದು ಸಾಮಾನ್ಯವಾಗಿತ್ತು. ಆದರೂ ಭಿಕ್ಕುಗಳು ಧೃತಿಗೆಡದೆ ಧರ್ಮ ಪ್ರಸಾರ ಮಾಡುತ್ತಿದ್ದರು. ಇಂಥದ್ದೇ ಸನ್ನಿವೇಶಗಳ ನಡುವೆ, ಭಿಕ್ಕುಗಳ ಸಂಘದಲ್ಲಿದ್ದ ದೇವದತ್ತನು, ಬುದ್ಧನು ಬದುಕಿದ್ದಾಗಲೇ ಸಂಘದ ಆಧಿಪತ್ಯಕ್ಕಾಗಿ ರಾಜ ಅಜಾತಶತ್ರುವಿನ ಜೊತೆ ಸೇರಿ ಸಂಚು ನಡೆಸಿ ಬುದ್ಧನನ್ನು ಕೊಲ್ಲಿಸಲು ಪ್ರಯತ್ನಿಸಿ ವಿಫಲನಾದನು. ಬುದ್ಧ ಇವೆಲ್ಲವನ್ನೂ ಸಂಭಾಳಿಸಿಕೊಂಡು ಸಂಘವನ್ನು

ಮುನ್ನಡೆಸಿದ; ಧರ್ಮ ಪ್ರಸಾರ ಮಾಡಿದ.

ಹೀಗೆ ಸುಮಾರು ನಲವತ್ತೂರು ವರ್ಷಗಳವರೆಗೆ ಇಡೀ ಆರ್ಯಾವರ್ತದಲ್ಲೆಲ್ಲಾ ಬುದ್ಧನು ಸ್ವತಃ ಧರ್ಮ ಪ್ರಸಾರ ಮಾಡಿದ. ಇದರಿಂದಾಗಿ ಸಂಘ ಬೆಳೆಯಿತು.

ಬುದ್ಧನ ಖ್ಯಾತಿ ಹರಡಿತು.

ಧರ್ಮದ ಪ್ರಸರಣವಾಯಿತು.

ಮಾಲುಂಕ್ಯಪುತ್ತ ಎನ್ನುವ ಭಿಕ್ಕು ಬುದ್ಧನ ಬಳಿಗೆ ಬಂದು "ಜೀವ ಎಂದರೇನು? ಶರೀರವೇ ಅಥವಾ ಮತ್ತೊಂದೆ? ಜಗತ್ತು ಶಾಶ್ವತವೇ ಅಥವಾ ಅಶಾಶ್ವತವೇ? ಜಗತ್ತು ಕೊನೆಯಿಲ್ಲದ್ದೇ ಅಥವಾ ಮೊದಲಿಲ್ಲದ್ದೇ? ತಥಾಗತನು(ಬುದ್ಧ) ಸಾವನ್ನು ಮೀರಿದವನೇ ಅಥವಾ ಸಾವಿನ ಮಿತಿಯಲ್ಲಿರುವವನೇ? ಈ ಪ್ರಶ್ನೆಗಳು ನನ್ನನ್ನು ಕಾಡುತ್ತಿವೆ. ಇವುಗಳಿಗೆ ತಥಾಗತನು ಸತ್ಯವನ್ನು ತಿಳಿಸಿದ್ದೇ ಆದರೆ ನಾನು ಸಂಘದಲ್ಲಿ ಉಳಿಯುತ್ತೇನೆ. ತಥಾಗತನು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಸದಿದ್ದರೆ ನಾನು ಸಂಘವನ್ನು ತೊರೆದು ಪ್ರಾಪಂಚಿಕ ಜೀವನಕ್ಕೆ ಹೋಗುತ್ತೇನೆ" ಎಂದು ಹೇಳಿದ.

ಬುದ್ಧ ಹೇಳಿದ: "ಸಂಘವನ್ನು ಸೇರಿದವರಿಗೆ ಇಂತಹ ವಿಚಾರಗಳನ್ನು ತಿಳಿಸಿ ಹೇಳುತ್ತೇನೆಂದು ಎಂದಾದರೂ ನಾನು ಹೇಳಿದ್ದೇನೆಯೇ?"

"ಇಲ್ಲ" ಎಂದನು ಮಾಲುಂಕ್ಯಪುತ್ತ.

ಆಮೇಲೆ ಬುದ್ಧ ಹೇಳಿದ–"ಅಯ್ಯಾ, ಒಬ್ಬನಿಗೆ ಒಂದು ವಿಷದ ಬಾಣ ನಾಟಿದೆ. ಅವನ ಬಂಧು–ಮಿತ್ರರು ಅವನನ್ನು ವೈದ್ಯನ ಬಳಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಆ ಬಾಣಕ್ಕೆ ತುತ್ತಾದವನು ನನಗೆ ಬಾಣವನ್ನು ಬಿಟ್ಟವನ ಹೆಸರೇನು? ಅವನ ಜಾತಿ ಯಾವುದು? ಅವನು ಕಪ್ಪು ಬಣ್ಣದವನೆ ಅಥವಾ ಬಿಳಿಯ ಬಣ್ಣದವನೆ? ಎತ್ತರಕ್ಕಿದ್ದನೆ ಅಥವಾ ಗಿಡ್ಡಕ್ಕಿದ್ದನೆ? ಯಾವ ಬಗೆಯ ಬಿಲ್ಲಿನಿಂದ ಬಾಣ ಬಿಟ್ಟ? ಆ ಬಿಲ್ಲು ಡೊಂಕಾಗಿತ್ತೇ? ಉದ್ದವಾಗಿತ್ತೇ? ಅದನ್ನು ಯಾವ ಜಾತಿಯ ಮರದಿಂದ ತಯಾರಿಸಲಾಗಿತ್ತು? ಅವನು ಹೂಡಿದ ಬಾಣದ ಮೊನೆಗೆ ಯಾವ ವಿಷವನ್ನು ಲೇಪಿಸಿದ್ದರು? ಅದರ ಬಾಣದ ಗರಿಗಳು ಯಾವ ಪಕ್ಷಿಯದು? ಇದನ್ನು ತಿಳಿಸುವವರೆಗೂ ನಾನು ನನ್ನ ಶರೀರದಿಂದ ಬಾಣವನ್ನು ಹೊರತೆಗೆಯಲು ಬಿಡುವುದಿಲ್ಲ ಎಂದು ಹೇಳಿದರೆ, ಬಾಣ ನಾಟಿದವನು ಸಾಯಬಹುದೇ ಹೊರತು; ಅವನ ಪ್ರಶ್ನೆಗಳಿಗೆ ಉತ್ತರ ದೊರಕುವುದಿಲ್ಲ."

"ಈ ದ್ವಂದ್ವ, ಬುದ್ಧಿವಂತಿಕೆಗಳ ಮೇಲೆಯೇ ಜೀವನ ನಿಲ್ಲುವುದಾದರೆ ಅದು ಧರ್ಮದ ದಾರಿ ಅಲ್ಲ. ನಾನು ಹೇಳುವುದನ್ನು ಕೇಳು; ಪ್ರಪಂಚ ಶಾಶ್ವತವೊ, ಅಶಾಶ್ವತವೊ? ಆದರೆ ಹುಟ್ಟಂತೂ ಇದೆ. ಆದ್ದರಿಂದ ದುಃಖವೂ ಇದೆ. ಇದನ್ನು ಇಲ್ಲದಂತೆ ಮಾಡಿಕೊಳ್ಳುವ ದಾರಿಯನ್ನು ನಾನು ಹೇಳುತ್ತೇನೆ."

"ನಾನು ಯಾವುದನ್ನು ಹೇಳಬಯಸುತ್ತೇನೆಯೋ ಅದನ್ನು ಮಾತ್ರ ಹೇಳುತ್ತೇನೆ. ನಾನು ಯಾವುದನ್ನು ಹೇಳಬಯಸುವುದಿಲ್ಲವೋ ಅದನ್ನು ನಾನು ಹೇಳುವುದಿಲ್ಲ. ಈ ವಿಚಾರ ಲಾಭದಾಯಕವಲ್ಲ, ಧರ್ಮದ ದಾರಿಗೆ ಸಂಬಂಧಪಟ್ಟಿಲ್ಲ. ಅದು ನಿರ್ವಾಣದ ದಾರಿಗೆ ಅಡ್ಡ ಬರುವಂಥದ್ದು. ಆದ್ದರಿಂದ ನಾನು ಹೇಳಿಲ್ಲ."

"ನಾನು ಹೇಳಿರುವುದು, ಇದು ದುಃಖ. ದುಃಖವು ಈ ರೀತಿಯಾಗಿ ಉತ್ಪನ್ನವಾಗುತ್ತದೆ. ದುಃಖವನ್ನು ಈ ರೀತಿ ಶಮನ ಮಾಡಬುಹುದು. ಈ ದಾರಿಯಿಂದ ನಡೆದರೆ ದುಃಖವು ಇಲ್ಲವಾಗುತ್ತದೆ. ಇದು ಧರ್ಮದ ದಾರಿ. ಇದೇ ಬೋಧಿಯನ್ನು ಪಡೆಯಲು ದಾರಿ ಮಾಡಿಕೊಡುತ್ತದೆ. ಇದೇ ನಿರ್ವಾಣದ ದಾರಿ. ಇದನ್ನೇ ನಾನು ಹೇಳಿರುವುದು."

ಇದು ತಥಾಗಥನು ಹೇಳಿದ ಧರ್ಮದ ದಾರಿ.

ವಿಭಿನ್ನ ಪಂಥದ, ವಿಭಿನ್ನ ಧರ್ಮದ, ವಿಭಿನ್ನ ಅಭಿಪ್ರಾಯಗಳ ಶ್ರಮಣ–ಬ್ರಾಹ್ಮಣರು ಭಿಕ್ಷೆಗಾಗಿ ಶ್ರಾವಸ್ಥಿಗೆ ಬರುತ್ತಿದ್ದರು. ಹೀಗೆ ಭಿಕ್ಷೆಗೆ ಬಂದವರು ತಮ್ಮನ್ನೇ ಜ್ಞಾನಿಗಳು ಎಂದು ಭ್ರಮಿಸಿ ತಮ್ಮ ತಮ್ಮ ನಿಲುವಿಗೆ ತಕ್ಕಂತೆ ವಾದ–ವಿವಾದಗಳನ್ನು ಮಾಡುತ್ತಾ, ಸಮರ್ಥನೆ–ಖಂಡನೆಗಳಲ್ಲಿ ಮುಳುಗಿ ಪರಸ್ಪರ ವ್ಯರ್ಥ ಜಿಜ್ಞಾಸೆಯಲ್ಲಿ ತೊಡಗಿದ್ದರು. ಇದನ್ನು ಕಂಡ ಭಿಕ್ಕುಗಳು ಈ ವಿಚಾರವನ್ನು ಬುದ್ಧನಿಗೆ ತಿಳಿಸಿದರು.

ಅವರಿಗೆ ಬುದ್ಧ ಹೇಳಿದ. "ಇವರು ತಮ್ಮ ಅಲ್ಪಜ್ಞಾನವನ್ನೇ, ಪೂರ್ಣಜ್ಞಾನ ಎಂದು ಭ್ರಮಿಸಿರುವರು. ಸತ್ಯದ ಒಂದು ಮಗ್ಗುಲನ್ನೇ ನೋಡಿ, ಅದೇ ಪೂರ್ಣಸತ್ಯ ಎಂದು ತಿಳಿದಿರುವರು. ಇವರು ಸತ್ಯ ಮತ್ತು ಮಿಥ್ಯಗಳ ನಡುವಿನ ಭೇದವನ್ನು ಅರಿಯದವರು. ಅಜ್ಞಾನದ ನೆಲೆಯಲ್ಲಿ ನಿಂತು ಸತ್ಯವನ್ನು ಹುಡುಕುತ್ತಿರುವವರು" ಎಂದು ಹೇಳಿ, ಅವರ ಅಜ್ಞಾನವು ಯಾವ ರೀತಿಯದು ಎಂಬುದನ್ನು ತಿಳಿಸಲು ಒಂದು ನೀತಿ ಕಥೆ ಹೇಳಿದ: "ಶ್ರಾವಸ್ಥಿಯ ರಾಜನೊಬ್ಬ ತನ್ನ ಮಂತ್ರಿಗೆ, ಶ್ರಾವಸ್ಥಿಯಲ್ಲಿರುವ ಅಂಧರನ್ನೆಲ್ಲಾ ಒಂದು ಕಡೆ ಕಲೆಹಾಕು ಎಂದು ಹೇಳಿದ. ಮಂತ್ರಿಯು ರಾಜನು ಹೇಳಿದ ಹಾಗೆಯೇ ಅಂಧರನ್ನೆಲ್ಲಾ ಕಲೆಹಾಕಿದ. ಆಗ ರಾಜನು ಆ ಅಂಧರಿಗೆಲ್ಲಾ ಆನೆಯನ್ನು ತೋರಿಸು ಎಂದು ಹೇಳಿದ. ಅದರಂತೆಯೇ ಮಂತ್ರಿಯು ಅಂಧರನ್ನು ಕರೆದೊಯ್ದು ಒಬ್ಬನಿಗೆ ಆನೆಯ ತಲೆಯನ್ನು ಮುಟ್ಟಿಸಿ ಇದೇ ಆನೆ ಎಂದು ಹೇಳಿದ. ಇನ್ನೊಬ್ಬನಿಗೆ ಅದರ ಕಾಲನ್ನು ಮುಟ್ಟಿಸಿ ಇದೇ ಆನೆ ಎಂದು ಹೇಳಿದ. ಇದೇ ರೀತಿ ಬಾಲ, ಸೊಂಡಿಲು, ಆನೆಯ ಹಿಂಭಾಗ, ದಂತ, ಹೊಟ್ಟೆ, ಬಾಲದ ತುದಿಗಳನ್ನು ಒಬ್ಬೊಬ್ಬರಿಗೂ ಮುಟ್ಟಿಸಿ ಇದೇ ಆನೆ ಎಂದು ಅವರಿಗೆ ಹೇಳಿದ. ಬಳಿಕ ಬಂದು ರಾಜನಿಗೆ ವರದಿ ಮಾಡಿದ.

ನಂತರ ರಾಜನು ಎಲ್ಲ ಅಂಧರನ್ನು ಕರೆದು, ನೀವು ಕಂಡುಕೊಂಡ ಆನೆಯನ್ನು ವರ್ಣಿಸಿ ಎಂದು ಹೇಳಿದ. ಆಗ ಆನೆಯ ತಲೆಯನ್ನು ಮುಟ್ಟಿದವನು ಬಂದು, ಆನೆಯು ಮಡಕೆಯಂತಿದೆ ಎಂದು ಹೇಳಿದ. ಹೊಟ್ಟೆಯನ್ನು ಮುಟ್ಟಿದವನು ಬಂದು ಆನೆಯು ವಾಡೆಯಂತಿದೆ ಎಂದು ಹೇಳಿದ. ಅದೇ ರೀತಿ ಹಿಂಭಾಗವನ್ನು ಮುಟ್ಟಿದವನು ಗೋಡೆಯಂತಿದೆ ಎಂದರೆ, ಸೊಂಡಿಲನ್ನು ಮುಟ್ಟಿದವನು ನೇಗಿಲಿನಂತಿದೆ ಎಂದು ಹೇಳಿದ. ದಂತವನ್ನು ಮುಟ್ಟಿದವನು ಕುಳದಂತಿದೆ ಎಂದು, ಬಾಲವನ್ನು ಮುಟ್ಟಿದವನು ಹಗ್ಗದಂತಿದೆ ಎಂದು, ಬಾಲದ ತುದಿಯನ್ನು ಮುಟ್ಟಿದವನು ಪೊರಕೆಯಂತಿದೆ ಎಂದು, ಕಾಲನ್ನು ಮುಟ್ಟಿದವನು ಕಂಬದಂತಿದೆ ಎಂದು ಹೇಳತೊಡಗಿದರು. ಹೀಗೆ ತಾವು ಹೇಳುವುದೇ ಸತ್ಯವೆಂದು ಅವರು ಜಗಳವಾಡತೊಡಗಿದರು.

ಹೀಗೆಯೇ ಸತ್ಯ–ಅಸತ್ಯಗಳ ಭೇದವನ್ನು ಅರಿಯದ ಈ ಜನರೂ ಕೂಡ ತಾವು ಹೇಳುವುದೇ ಸತ್ಯವೆಂದು ಜಗಳವಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಶ್ರಮಣ–ಬ್ರಾಹ್ಮಣರೂ ಕೂಡ ಸತ್ಯದ ಕಣ್ಣಿಲ್ಲದ ಅಂಧರು. ಸತ್ಯವೇನೆಂಬುದನ್ನು ಅರಿಯರು. ಅವರ ಬಗ್ಗೆ ವಿಚಾರ ಮಾಡುತ್ತಾ, ನೀವು ನಿಮ್ಮ ಕಾಲವನ್ನು ವ್ಯರ್ಥ ಮಾಡಬೇಡಿ" ಎಂದು ಹೇಳಿದ.

ಹೀಗೆ ಭಗವಾನ್ ಬುದ್ಧನು ತನ್ನ ಐದುನೂರು ಜನ

ಶಿಷ್ಯರೊಂದಿಗೆ ಇಡೀ ಆರ್ಯಾವರ್ತದಲ್ಲೆಲ್ಲಾ ನಲವತ್ತೊಂರು ವರ್ಷಗಳ ಕಾಲ ನಿರಂತರವಾಗಿ ಧರ್ಮ ಪ್ರಸಾರ ಮಾಡಿ, ತನ್ನ ಜೀವಿತದ ಕೊನೆಯ ದಿನಗಳ ಹತ್ತಿರ ಬಂದ. ಆಗ ಎಂಬತ್ತು ವರ್ಷದವನಾಗಿದ್ದ ಬುದ್ಧ, ತನ್ನ ದೇಹವೆಂಬ ಬಂಡಿಯು ಜೀರ್ಣಾವಸ್ಥೆಯಲ್ಲಿದೆ ಎಂಬುದನ್ನು ತಿಳಿದವನಾಗಿದ್ದ. ಈ ದಿನಗಳಲ್ಲಿ ಬುದ್ಧನು ಕೊನೆಯ ಬಾರಿಗೆ ಸುಂದರ ನಗರವಾದ ವೇಸಾಲಿಯನ್ನು ನೋಡಿಕೊಂಡು ತನ್ನ ಪ್ರಿಯಶಿಷ್ಯನಾದ ಆನಂದನೊಡನೆ ಮಲ್ಲ ರಾಜ್ಯದ ಪಾವಾಕ್ಕೆ ಬಂದು ತಂಗಿದ.

ಭಗವಾನ್ ಬುದ್ಧನು ಪಾವಾ ಗ್ರಾಮದಲ್ಲಿರುವ ಮಾವಿನ ಮರದ ತೋಪಿನಲ್ಲಿ ತಂಗಿರುವ ವಿಷಯವನ್ನು ತಿಳಿದ ಚುಂದ ಎನ್ನುವ ಕಮ್ಮಾರನು ಸಂತೋಷಗೊಂಡು, ಬುದ್ಧನನ್ನು ಆ ದಿನದ ಊಟಕ್ಕಾಗಿ ತನ್ನ ಮನೆಗೆ ಆಹ್ವಾನಿಸಿದ. ಬುದ್ಧನು ಚುಂದನ ಆಹ್ವಾನವನ್ನು ಒಪ್ಪಿ ಅವನ ಮನೆಗೆ ಊಟಕ್ಕೆ ಹೋದ. ಚುಂದನು ತಾನು ತಯಾರಿಸಿದ್ದ ಹಂದಿಯ ಮಾಂಸದ ಆಹಾರವನ್ನು ಬುದ್ಧನಿಗೆ ಪ್ರೀತಿಯಿಂದ ಬಡಿಸಿದ. ಬುದ್ಧ ಚುಂದನು ನೀಡಿದ ಆಹಾರವನ್ನು ಸೇವಿಸಿದ ಕೂಡಲೇ ಆ ಆಹಾರವು ವಿಷಮಯವಾಗಿರುವುದನ್ನು ತಿಳಿದು ಇದು ತನ್ನ ದೇಹಕ್ಕೆ ತೀವ್ರವಾದ ಘಾಸಿಯನ್ನು ಉಂಟು ಮಾಡುತ್ತದೆ ಎನ್ನುವುದನ್ನು ಅರಿತುಕೊಂಡ. ಬುದ್ಧನು ಚುಂದನನ್ನು ಹತ್ತಿರಕ್ಕೆ ಕರೆದು, "ಅಯ್ಯಾ, ತಥಾಗತನಲ್ಲದೆ ಜಗತ್ತಿನ ಇನ್ನಾವ ಜೀವರಾಶಿಯೂ ನೀನು ನೀಡಿದ ಆಹಾರವನ್ನು ಜೀರ್ಣಿಸಿಕೊಳ್ಳಲಾರದು. ಆದ್ದರಿಂದ ಈ ಆಹಾರವನ್ನು ತೆಗೆದುಕೊಂಡು ಹೋಗಿ ನೆಲದಲ್ಲಿ ಹೂತುಬಿಡು" ಎಂದು ತಿಳಿಸಿದ. ಅನಂತರ ಚುಂದನಿಗೆ ಧರ್ಮೋಪದೇಶ ಮಾಡಿದ.

ಚುಂದನು ನೀಡಿದ ಆಹಾರದಿಂದ ಬುದ್ಧನ ದೇಹ ತೀವ್ರವಾದ ಭೇದಿ–ಜ್ವರ–ನೋವುಗಳಿಗೆ ಒಳಗಾಯಿತು. ಇದರಿಂದ ಬಹಳ ಕಾಲ ಈ ದೇಹದಲ್ಲಿರುವುದು ಸಾಧ್ಯವಿಲ್ಲ ಎಂದು ತಥಾಗತನು ತಿಳಿದು, ಈ ಹುಟ್ಟು–ಸಾವುಗಳ ಭವಚಕ್ರದಿಂದ ಬಿಡುಗಡೆ ಹೊಂದಿ ಮಹಾ ನಿರ್ವಾಣವನ್ನು ಹೊಂದುವ ಕಾಲ ಸಮೀಪಿಸಿತು ಎಂದು ತಿಳಿದು, ತನ್ನನ್ನು ಕುಶಿನಾರ(ಕುಶಿನಗರ)ಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಸಾಲವೃಕ್ಷಗಳ ಕೆಳಗೆ ಮಲಗಿಸಬೇಕೆಂದು ಆನಂದನಿಗೆ ಹೇಳಿದ. "ಸುಜಾತೆ ನೀಡಿದ ಊಟದ ಭಿಕ್ಷೆ ಬೋಧಿ ಪಡೆಯಲು ಹೇಗೆ ಕಾರಣವಾಯಿತೋ ಹಾಗೆಯೇ ಹುಟ್ಟು ಸಾವುಗಳ ಭವಚಕ್ರದಿಂದ ಬಿಡುಗಡೆ ಹೊಂದಿ ಮಹಾನಿರ್ವಾಣ ಹೊಂದಲು ಚುಂದನು ನೀಡಿದ ಆಹಾರವು ಕಾರಣವಾಗಿದೆ. ಆದ್ದರಿಂದ ಸುಜಾತೆ ನೀಡಿದ ಆಹಾರದ ಭಿಕ್ಷೆಯಷ್ಟೇ ಚುಂದನು ನೀಡಿದ ಆಹಾರದ ಭಿಕ್ಷೆಯೂ ಶ್ರೇಷ್ಠವಾದದ್ದು. ತಥಾಗತನು ತನ್ನ ಜೀವಿತದ ಕೊನೆಯ ಊಟವನ್ನು ಚುಂದನಲ್ಲಿ ಮಾಡಿದ್ದಾನೆ. ಆದ್ದರಿಂದ ಚುಂದನು ಪಶ್ಚಾತ್ತಾಪ ಪಡುವಂತೆ ಯಾರು ನಡೆದುಕೊಳ್ಳಬೇಡಿ" ಎಂದು ಮಹಾಕರುಣೆಯಿಂದ ಆನಂದನಿಗೆ ತಿಳಿಸಿದ.

ಭಗವಾನ್ ಬುದ್ಧನು ಕುಶಿನಾರದಲ್ಲಿ ಮಹಾನಿರ್ವಾಣ ಹೊಂದುವ ಸುದ್ದಿಯನ್ನು ಶ್ರಮಣರಿಂದ ಕೇಳಿದ ಸುಬದ್ಧ ಎನ್ನುವ ಶ್ರಮಣನು ಇನ್ನು ಈ ಜಗತ್ತಿನಲ್ಲಿ ಬುದ್ಧನು ಇಲ್ಲವಾಗುತ್ತಾನಲ್ಲ ಎಂದು ತಿಳಿದು, ಬುದ್ಧನಿಂದಲೇ ಧರ್ಮವನ್ನು ಪಡೆಯಬೇಕು ಮತ್ತು ತನ್ನಲ್ಲಿದ್ದ ಅನುಮಾನಗಳನ್ನು ಬುದ್ಧನಿಂದಲೇ ಪರಿಹರಿಸಿಕೊಳ್ಳಬೇಕು ಎಂದು ಬುದ್ಧನ ಬಳಿ ಬಂದ.

ತೀವ್ರವಾದ ಭೇದಿ–ಜ್ವರ, ನೋವುಗಳಿಂದ ನಿಶ್ಶಕ್ತನಾಗಿ ಮಲಗಿದ್ದ ಬುದ್ಧನನ್ನು ಕಾಣಲು ಬಂದ ಸುಬದ್ಧನಿಗೆ ಆನಂದನು ಅವಕಾಶ ನೀಡಲಿಲ್ಲ. ಇವರಿಬ್ಬರ ಸಂವಾದವನ್ನು ಕೇಳಿದ ಬುದ್ಧ, "ಅವನನ್ನು ತಡೆಯಬೇಡ; ಅವನು ಇಲ್ಲಿಗೆ ಬಂದಿರುವುದು ನನಗೆ ತೊಂದರೆ ಕೊಡಲು ಅಲ್ಲ; ಧರ್ಮವನ್ನು ಅರಿಯಲು. ಆದ್ದರಿಂದ ಅವನನ್ನು ನನ್ನ ಬಳಿಗೆ ಕಳುಹಿಸು" ಎಂದು ಆನಂದನಿಗೆ ಹೇಳಿದ.

ಬುದ್ಧನನ್ನು ಕಂಡು ನಮಸ್ಕರಿಸಿದ ಸುಬದ್ಧ, ಬೇರೆ ಬೇರೆ ಸಾಧಕರ ಸಾಧನೆಗಳ ಬಗ್ಗೆ ಬುದ್ಧನಲ್ಲಿ ಪ್ರಶ್ನೆ ಕೇಳಿದ. ಅವನ ಪ್ರಶ್ನೆಗಳಿಗೆ ಬುದ್ಧ ಹೇಳಿದ. "ಅಯ್ಯಾ, ಅನಿತ್ಯವಾದವುಗಳನ್ನೆಲ್ಲಾ ವೃಥಾ ಮನಸ್ಸಲ್ಲಿ ಇಟ್ಟುಕೊಳ್ಳಬೇಡ. ನಾನು ಹೇಳುವ ಮಾತನ್ನು ಮನಸಿಟ್ಟು ಕೇಳು. ನಾನು ಹೇಳುವ ನಿಜವಾದ ಧರ್ಮ ಯಾವುದೆಂದು ತಿಳಿ. ಯಾವ ಧರ್ಮದಲ್ಲಿ ನಾಲ್ಕು ಶ್ರೇಷ್ಠ ಸತ್ಯಗಳು ಮತ್ತು ಶ್ರೇಷ್ಠ ಅಷ್ಟಾಂಗ ಮಾರ್ಗವು ಇರುವುದಿಲ್ಲವೋ, ಆ ಧರ್ಮದವನು ನಾಲ್ಕನೇ ದರ್ಜೆಯ ಶ್ರಮಣನಾಗಿರುತ್ತಾನೆ ಮತ್ತು ಯಾರು ಶ್ರೇಷ್ಠವಾದ ಅಷ್ಟಾಂಗ ಮಾರ್ಗವನ್ನು ಅನುಸರಿಸಿ ನಿರ್ವಾಣವನ್ನು ಪಡೆಯುತ್ತಾರೋ ಅವರು ಅರ್ಹಂತರಾಗುತ್ತಾರೆ. ಎಲ್ಲಿಯವರೆಗೆ ಅಷ್ಟಾಂಗ ಮಾರ್ಗವನ್ನು ಅನುಸರಿಸುವವರು ಇರುತ್ತಾರೋ ಅಲ್ಲಿಯವರೆಗೆ ಅರ್ಹಂತರಿರುತ್ತಾರೆ" ಎಂದು ಸುಬದ್ಧನಿಗೆ ಧರ್ಮೋಪದೇಶ ಮಾಡಿದ.

ಕುಶಿನಾರದ ಸಾಲವೃಕ್ಷಗಳ ಕೆಳಗೆ ಮಲಗಿದ್ದ ಬುದ್ಧನನ್ನು ಕಂಡ ಆನಂದನು, ಇನ್ನು ಜಗತ್ತಿನಲ್ಲಿ ಬುದ್ಧನು ಇಲ್ಲವಾಗುತ್ತಾನಲ್ಲ ಎಂದು ತಿಳಿದವನಾಗಿ, ತಾಯನ್ನಗಲುವ ಮಗು ಅಳುವಂತೆ ದುಃಖಿತಪ್ತನಾಗುತ್ತಾನೆ. ಆಗ ಬುದ್ಧ ಆನಂದನನ್ನು ಕುರಿತು ಹೇಳಿದ ಮಾತುಗಳು 'ಬುದ್ಧನ ಕೊನೆಯ ವಾಕ್ಯಗಳು' ಎಂದು ಪ್ರಸಿದ್ಧಿ ಪಡೆದು ಶ್ರೇಷ್ಠವಾಗಿವೆ. ಬುದ್ಧ ಆನಂದನಿಗೆ ಹೇಳುತ್ತಾನೆ: "ತಥಾಗತನು ಹೇಳಿದ ಜ್ಞಾನ ದೃಷ್ಟಿಯನ್ನು ನೀನು ಕಾಣಬೇಕೇ ಹೊರತು, ತಥಾಗತನ ಶರೀರದ ಬಗ್ಗೆ ಇಟ್ಟಿರುವ ವ್ಯಾಮೋಹವನ್ನು ತೊರೆದುಬಿಡು."

"ನಾನು ಇಲ್ಲದಿರುವಾಗ ನಾನು ಹೇಳಿದ ಧರ್ಮ ಮತ್ತು ವಿನಯ ನಿಮಗೆ ದಾರಿದೀಪವಾಗುತ್ತದೆ, ಗುರುವಾಗುತ್ತದೆ."

ಕೊನೆಯದಾಗಿ ತನ್ನ ಎಲ್ಲ ಭಿಕ್ಕುಗಳನ್ನು ಕರೆಸಿ, "ನಿಮ್ಮಲ್ಲಿ ಏನಾದರೂ ಪ್ರಶ್ನೆಗಳಿವೆಯೆ? ಇದ್ದರೆ ಸ್ನೇಹಿತರಂತೆ ಕೇಳಿ" ಎಂದು ಹೇಳಿದ. ಯಾವ ಭಿಕ್ಕುವೂ ಪ್ರಶ್ನೆಯನ್ನು ಕೇಳಲಿಲ್ಲ. ಬುದ್ಧ ತನ್ನ ಕೊನೆಯ ವಾಕ್ಯವನ್ನು ನುಡಿದ–

ಹುಟ್ಟಿದ್ದೆಲ್ಲಾ ನಾಶವಾಗಲೇಬೇಕು

ಇದು ಲೋಕ ನಿಯಮ

ನೀವೆಲ್ಲ ಈ ಹುಟ್ಟು ಸಾವುಗಳ ಭವಚಕ್ರದಿಂದ

ಪಾರಾಗಲು ಧರ್ಮದ ದಾರಿಯಲ್ಲಿ ನಡೆಯಿರಿ

ಧರ್ಮದ ದಾರಿಯಲ್ಲಿ ನಡೆದು ನಿರ್ವಾಣ ಪಡೆಯಿರಿ.

ಕುಶಿನಾರದ ಸಾಲವೃಕ್ಷಗಳ ನೆರಳಲ್ಲಿ ವೈಶಾಖ ಶುದ್ಧ ಪೂರ್ಣಿಮೆಯಂದು ಬುದ್ಧ ದೇಹವನ್ನು ತ್ಯಜಿಸಿ ಮಹಾನಿರ್ವಾಣ ಪಡೆದ.

ಭಗವಾನ್ ಬುದ್ಧನ ಜೀವಿತದಲ್ಲಿ ವೈಶಾಖ ಶುದ್ಧ ಪೂರ್ಣಿಮೆ ಅತ್ಯಂತ ಘನವಾದದ್ದು. ಗೌತಮ ಜನ್ಮ ತಾಳಿದ್ದು, ಗೌತಮನಾಗಿದ್ದವನು ಬುದ್ಧನಾಗಿದ್ದು ಮತ್ತು ಬುದ್ಧನು ದೇಹವನ್ನು ತ್ಯಜಿಸಿ ಮಹಾ ನಿರ್ವಾಣವನ್ನು ಪಡೆದದ್ದು ವೈಶಾಖ ಶುದ್ಧ ಪೂರ್ಣಿಮೆಯಂದೆ. ಇಂದಿಗೂ ನಾಡಿನ ಜನಪದಕ್ಕೆ ವೈಶಾಖ ಶುದ್ಧ ಪೂರ್ಣಿಮೆಯು ಪವಿತ್ರವಾದ ದಿನವಾಗಿದೆ. ■

ಗಾಂಧಿ ಮತ್ತು ಕರ್ನಾಟಕ

ಭಾಗ – 13

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.



ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಸ್ವರಾಜ್ಯದ ಯೋಜನೆ:

ಈ ರಾಟೆ, ಹಿಂದೂ ಮುಸ್ಲಿಂ ಐಕ್ಯ, ಅಸ್ಪೃಶ್ಯ ನಿವಾರಣೆ ಎಲ್ಲವೂ ಒಂದು ಗುರಿಗೆ ಸಾಧನ ಮಾತ್ರ. ನನ್ನ ಮಟ್ಟಿಗಂತೂ ಸಾಧನ ಮಾರ್ಗ ತಿಳಿದರೆ ಸಾಕು. ನನ್ನ ಜೀವನ ಸಿದ್ಧಾಂತದಲ್ಲಿ ಸಾಧನ ಸಾಧ್ಯ ಎರಡೂ ಒಂದಕ್ಕೊಂದು ಪರ್ಯಾಯ ಶಬ್ದಗಳು. ಆದರೆ ನಾನು ಬಾಬೂ ಭಗವಾವಾನದಾಸಕ. ಅದರ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದೇನೆ ಜನತೆಗೆ ನಮ್ಮ ಲಕ್ಷ್ಯ ಏನೋ ತಿಳಿಯಬೇಕು. ಅಸ್ಪಷ್ಟವಾಗಿ ಅಲ್ಲ ಸ್ಪಷ್ಟವಾಗಿ. ಸ್ವರಾಜ್ಯದ ಲಕ್ಷಣ ಅವರಿಗೆ ಜಯ. ಅಖಿಲ ಭಾರತಕ್ಕೆ ಯಾವ ಸ್ವರಾಜ್ಯದ ಸಂಯೋಜನೆ ಬೇಕೋ , ಯಾವುದಕ್ಕಾಗಿ ಹೋರಾಡಬೇಕೋ ಅದು ತಿಳಿಯಬೇಕು.ಸಮ್ಮೇಲನದ ಸಮಿತಿಗೆ ಈ ಕೆಲಸವನ್ನು ವಹಿಸಿ ಕೊಟ್ಟಿದ್ದಾರೆ. ಸರ್ವಪಕ್ಷಗಳಿಗೂ ಸೇರಿ ಒಂದು ಯೋಜನೆಯನ್ನು ಆ ಸಮಿತಿ ತಯಾರಿಸಿತು ಎಂದು ಆಶಿಸೋಣ,

ಅವುಗಳ ಪರಿಶೀಲನೆಗೆ ಈ ಕೆಳಗಿನ ಅಂಶಗಳನ್ನು ನಾನು ಸೂಚಿಸಲೇ ಬೇಕು.

1. ಆಸ್ತಿಗಾಗಲೀ ಅಧಿಕಾರಕ್ಕಾಗಲೀ ಮತದಾನದ ಅರ್ಹತೆ ಇರಬಾರದು. ಶರೀರ ಶ್ರಮದ ಅರ್ಹತೆ ಮತದಾನಕ್ಕೆ ಇರಬೇಕು. ಈಗ ಕಾಂಗ್ರೆಸ್ಸಿಗೆ ಇದ್ದ ಹಾಗೆಯೇ,ಓದು ಬರಹದ ಅಥವಾ ಸೊತ್ತಿನ ನಿಯಮವು ಭ್ರಾಮಕ. ಆಡಳಿತದಲ್ಲಿ ರಾಜ್ಯದ ಯೋಗಕ್ಷೇಮದಲ್ಲಿ ಭಾಗವಹಿಸಬೇಕು ಎನ್ನುವವರಿಗೆಲ್ಲ ಶರೀರ ಶ್ರಮವು ಸಮಾನ ಅವಕಾಶ ಕೊಡುತ್ತದೆ .
2. ಸಾಮಾನ್ಯ ದಿನಗಳಲ್ಲಿ ಪ್ರಾಣವನ್ನೂ, ಸ್ವತ್ತನ್ನು ಕಾಪಾಡಲು ಎಷ್ಟು ಅಗತ್ಯವೋ ಅಷ್ಟು ದಂಡಿನ ವೆಚ್ಚ ಸಾಕು.
3. ನ್ಯಾಯವಿತರಣೆ ಅಗ್ಗವಾಗಬೇಕು. ಈ ದೃಷ್ಟಿಯಿಂದ ಪರಮೋಚ್ಚ ನ್ಯಾಯಾಲಯವು ಲಂಡನ್ನಿನಲ್ಲಿ ಇರಬಾರದು, ದಿಲ್ಲಿಯಲ್ಲಿರಬೇಕು. ಸಿವಿಲ್ ದಾವೆಗಳಲ್ಲಿ ಸಾಧಾರಣವಾಗಿ ಎಲ್ಲ ಪಕ್ಷಗಳವರನ್ನೂ ಪಂಚಾಯತಿಗೆ ಒಪ್ಪಿಸುವಂತೆ ಬಲಾತ್ಕರಿಸ ಬೇಕು .ಲಂಚಕೋರತನ, ಇತರೆ ದುರುಪಯೋಗ ಇಲ್ಲದ ಸಂದರ್ಭಗಳಲ್ಲಿ ಪಂಚಾಯತಿಯ ತೀರ್ಪು ಕಟ್ಟಕಡೆಯದಾಗಬೇಕು. ನಡುವೆ ಇರುವ ಎಷ್ಟೋ ಕೋರ್ಟುಗಳು ಎಲ್ಲವೂ ಹೋಗಬೇಕು. ಕೇಸ್ ಲಾ ಕೊನೆಗೊಳ್ಳಬೇಕು.ಸಾಧಾರಣ ಕ್ರಮ, ಇಂಗ್ಲೀಷರ ಕ್ರಮ 'ಬಹಳ ಹಳೆಯದು ಮತ್ತು ಬಹಳ' ಬಳಸು. ನಾವು ಅದನ್ನೇ ಅನುಕರಿಸುತ್ತಿದ್ದೇವೆ. ಈ ಕ್ರಮವನ್ನು ಸರಳಮಾಡಿ, ಕೋರ್ಟಿಗೆ ಬರುವವರು ತಮ್ಮ ಪಕ್ಷವನ್ನು ತಾವೇ ಮಂಡಿಸಲು ಸಾಧ್ಯವಾಗುವಂತೆ ಸುಲಭವಾಗುವಂತೆ ನಡೆಸುವುದು.

ಮಾದಕ ಪಾನೀಯಗಳ ಮತ್ತು ಔಷಧಗಳ ಮೂಲಕ ಆಗುವ ರಾಜ್ಯದ ಆದಾಯವನ್ನು ನಿಲ್ಲಿಸಬೇಕು. ಸಿವಿಲ್ ಮತ್ತು ಸೈನಿಕ ನೌಕರಿಗಳ ಸಂಬಳಗಳನ್ನು ದೇಶದ ಪರಿಸ್ಥಿತಿಗೆ ಅನುಗುಣವಾದ ಮಟ್ಟಕ್ಕೆ ಇಳಿಸಬೇಕು. ದೇಶವನ್ನು ಭಾಷಾನುಗುಣವಾಗಿ ವಿಂಗಡಿಸತಕ್ಕದ್ದು. ಪ್ರತಿಯೊಂದು ಪ್ರಾಂತ್ಯಕ್ಕೂ ಒಳಾಡಳಿತವನ್ನೂ, ವಿಕಾಸವನ್ನೂ ಸಾಧಿಸಲು ಪೂರ್ಣ ಸ್ವಾತಂತ್ರ್ಯ ಇರತಕ್ಕದ್ದು.

ಪರದೇಶದವರಿಗೆ ಕೊಟ್ಟಿರುವ ಎಲ್ಲ ಗುತ್ತಿಗೆಗಳನ್ನು ಪರೀಕ್ಷೆ ಮಾಡಲು ಒಂದು ಆಯೋಗ ರಚಿಸಬೇಕು. ಆ ಆಯೋಗದ ವರದಿಗೆ ವಿರೋಧವಾಗದಂತೆ ನ್ಯಾಯವಾಗಿ ಸಂಪಾದಿಸಿದ ಎಲ್ಲ ಹಕ್ಕುಗಳಿಗೂ ಪೂರ್ಣ ಭರವಸೆ ಕೊಡಬೇಕು.

ಸಂಸ್ಥಾನಿಕರಿಗೆ ಅವರ ಸ್ಥಾನಮಾನಗಳ ಬಗ್ಗೆ ಅಭಯ ಕೊಡಬೇಕು. ಕೇಂದ್ರ ಸರಕಾರವು ಯಾವ ಆಮಿಷ ಒಡ್ಡಬಾರದು. ಯಾವ ಅಪರಾಧವನ್ನೂ ಮಾಡದ ಸಂಸ್ಥಾನಿಕ ಪ್ರಜೆಗಳು ಸ್ವತಂತ್ರ ಭಾರತದಲ್ಲಿ ನೆಲೆಸಲು ಅವಕಾಶ ಇರಬೇಕು.

ಎಲ್ಲ ನಿರಂಕುಶಾಧಿಕಾರವನ್ನೂ ತೆಗೆದುಹಾಕಬೇಕು.

ದೇಶದ ಪರಮೋಚ್ಚ ಪದವಿ, ಅರ್ಹರಾದವರೆಲ್ಲರಿಗೂ ಲಭ್ಯ ಇರಬೇಕು. ಸಿವಿಲ್ ಮತ್ತು ಸೈನಿಕ ನೌಕರಿಗಳಿಗೆ ಪರೀಕ್ಷೆಗಳು ಭಾರತದಲ್ಲಿಯೇ ನಡೆಯಬೇಕು. ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಇರಬೇಕು. ಆದರೆ ಪರಸ್ಪರ ಸಹನೆಯೂ ಇರಬೇಕು.

ಪ್ರಾಂತೀಯ ಸರಕಾರಗಳಿಗೆ ಶಾಸನ ಸಭೆಗಳಿಗೆ, ಕೋರ್ಟುಗಳಿಗೆ ಇಂತಿಷ್ಟು ಕಾಲದಲ್ಲಿ ಎಂದು ನಿಗದಿ ಮಾಡಿ, ಆ ಕಾಲದೊಳಗಾಗಿ ಆಯಾ ಪ್ರಾಂತೀಯ ಭಾಷೆಯೇ ಅಧಿಕೃತ ಭಾಷೆ ಆಗಬೇಕು. ಪರಮೋಚ್ಚ ಪುನರ್ವಿಮರ್ಶ ನ್ಯಾಯಾಲಯಕ್ಕೆ ಹಿಂದೂಸ್ಥಾನೀ ಭಾಷೆ ಮಾಧ್ಯಮವಾಗಬೇಕು. ಲಿಪಿ ಪಾರಶೀ ಆದರೂ ಆಗಬಹುದು, ಕೇಂದ್ರ ಸರಕಾರದ ಮತ್ತು ಕೇಂದ್ರ ಶಾಸನ ಸಭೆಯ ಭಾಷೆಯು ಹಿಂದುಸ್ತಾನಿಯೇ ಆಗಬೇಕು. ಅಂತರಾಷ್ಟ್ರೀಯ ರಾಜ್ಯತಂತ್ರದ ಭಾಷೆ ಇಂಗ್ಲೀಷ್ ಇರಬೇಕು.

ನನ್ನ ಅಭಿಪ್ರಾಯದಲ್ಲಿ ಸ್ವರಾಜ್ಯಕ್ಕೆ ಏನು ಬೇಕೋ ಅದನ್ನು ಹೇಳಿದ್ದೇನೆ. ಇದರಲ್ಲಿ ನಾನು ಹೇಳಿರುವ ಎಲ್ಲ ಕೆಲಸವನ್ನು ಸಾಧಿಸಲು ಇವತ್ತು ನಮಗೆ ಅಧಿಕಾರವಿಲ್ಲ. ಹೋಗಲಿ, ಸಂಕಲ್ಪ ಇರುವವರಾದರೂ ಕೂಡಿ ಕನಿಷ್ಠ ಪಕ್ಷ ಹಂಬಲ ಬೆಳಸಿಕೊಳ್ಳೋಣ. ಈ ವಿಚಾರ ಬಹಳ ಆಕರ್ಷಕ. ಏಕೆಂದರೆ, ಇದು ಊಹಾ ಪ್ರಪಂಚದ್ದು. ನನ್ನ ಈ ಸೂಚನೆಗೆ ಬೇರಾವ ವ್ಯಕ್ತಿಯ ಸೂಚನೆಗಿಂತಲೂ ಹೆಚ್ಚು ಗಮನ ಕೊಡಬೇಕೆಂದು ನಾನು ಕೇಳುವುದಿಲ್ಲ ಎಂದು ಸ್ವರಾಜ್ಯ ಯೋಜನೆಯನ್ನು ತಯಾರಿಸುವ ಆ ಸಮಿತಿಗೆ ಭರವಸೆ ಕೊಡುತ್ತೇನೆ. ಈ ಭಾಷಣದಲ್ಲಿ ಅದನ್ನು ಸೇರಿಸಿರುವ ಕಾರಣ, ಅದಕ್ಕೆ ಹೆಚ್ಚು ಪ್ರಚಾರ ಸಿಗಲಿ ಎಂದು. ಬೇರೆ ರೀತಿಯಿಂದ ಇಷ್ಟು ಪ್ರಚಾರ ಸಿಗಲಿಕ್ಕಿಲ್ಲ. ಸ್ವಾತಂತ್ರ್ಯ ಹಾಗೂ ಮೇಲೆ ಹೇಳಿದ್ದೆಲ್ಲವು ಬ್ರಿಟಿಷರ ಜೊತೆಗಿನ ಸಂಬಂಧವು ಸಮಾನತೆಯ ಆಧಾರದ ಮೇಲೆ ಪೂರ್ಣ ಗೌರವದಿಂದ ಇರಬೇಕು ಎಂಬುದನ್ನು ತಿಳಿಸುತ್ತದೆ. ನನ್ನ ಅಭಿಪ್ರಾಯ ಹೀಗಿದೆ ; ಬ್ರಿಟಿಷ್ ಸರಕಾರ ತಾನು ಆಡಿದಂತೆ ಮಾಡಬಯಸಿದರೆ, ನಮಗೆ ಸಮಾನತೆ ಸಿಗುವುದಾದರೆ , ಸಂಪೂರ್ಣವಾಗಿ ಬ್ರಿಟಿಷರ ಸಂಬಂಧತ್ಯಾಗಕ್ಕಿಂತ ಅದು ಹೆಚ್ಚಿನ ಗೆಲುವು. ಆದ್ದರಿಂದ ಸಾಮ್ರಾಜ್ಯದ ಒಳಗೆಯೇ ಸ್ವರಾಜ್ಯಕ್ಕಾಗಿ ಎಂದರೆ ವಸಾಹತು ಸ್ವರಾಜ್ಯಕ್ಕಾಗಿ ಪ್ರಯತ್ನ ಮಾಡುತ್ತೇನೆ. ಆದರೆ ಬ್ರಿಟನ್ನಿನ ತಪ್ಪಿನಿಂದ ಸಂಬಂಧತ್ಯಾಗ ಅಗತ್ಯವಾದರೆ ನಾನು ಅದಕ್ಕೂ ಸಿದ್ಧ; ಹಿಂದೆ ಮುಂದೆ ನೋಡಲಿಕ್ಕಿಲ್ಲ. ಹೀಗೆ ಪರಸ್ಪರ ವಿಯೋಗ ಆದರೆ ಅದರ ಹೊಣೆ ಅವರ ಮೇಲೆಯೇ.

ಜಗತ್ತಿನ ಉತ್ತಮ ಬುದ್ಧಿವಂತರು ಎಲ್ಲರೂ ಪರಸ್ಪರ ಅವಲಂಬಿತವಾಗಿರುವ ರಾಜ್ಯ–ಸಮೂಹ ಇರಬೇಕು, ಒಂದರೊಡನೆ ಒಂದು ಸದಾ ಯುದ್ಧ ಮಾಡುತ್ತಿರುವ ಪೂರ್ಣ ಸ್ವತಂತ್ರ ರಾಜ್ಯಗಳು ಬೇಡ ಎನ್ನುತ್ತಾರೆ. ಅಂಥ ದಿನ ಬೇಗ ಬರಲಿಕ್ಕಿಲ್ಲ. ನಮ್ಮ ದೇಶಕ್ಕಾಗಿ ನಾನು ಹೆಚ್ಚು ಏನನ್ನೂ ಇಚ್ಛಿಸುವುದಿಲ್ಲ .ಆದರೆ ಸರ್ವ



ಸ್ವಾತಂತ್ರ್ಯಕ್ಕಿಂತಲೂ ರಾಜ್ಯ ಅನ್ಯೋನ್ಯ ಅವಲಂಬನೆಗೆ ನಾವು ಸಿದ್ಧರಾಗಿದ್ದೇವೆ ಎಂದು ಹೇಳುವದು ಹೆಚ್ಚುಗಾರಿಕೆಯೂ ಅಲ್ಲ ಅಸಾಧ್ಯವಾದ ಮಾತೂ ಅಲ್ಲ. ಭಾರತದ ಜೊತೆಗೆ ಯಾವ ಸಂಬಂಧವೂ ಬೇಡ ಎಂದು ಬ್ರಿಟನ್ ಬೇಕಾದರೆ ಹೇಳಲಿ; ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸದೆಯೇ ಪೂರ್ಣ ಸ್ವತಂತ್ರವಾಗಿರುವ ಸಾಮರ್ಥ್ಯವನ್ನು ನಾನು ಬಯಸುತ್ತೇನೆ. ಸಾಮ್ರಾಜ್ಯದೊಳಗೆ ಭಾರತಕ್ಕೆ ಸಂಪೂರ್ಣ ಸಮಾನತೆ ಎಂದು ಬ್ರಿಟನ್ ಘೋಷಿಸುವದಾದರೆ, ನನ್ನ ಯೋಜನೆಯಲ್ಲಿ ಒಂದು ಸ್ನೇಹ ಸಂಬಂಧ ಇದ್ದೇ ಇರುತ್ತದೆ. ಸಂಬಂಧವಿಲ್ಲದ ಸಂಪೂರ್ಣ ಸ್ವಾತಂತ್ರ್ಯ ಇರದು. ಕಾಂಗ್ರೆಸಿಗರು ಪ್ರತಿಯೊಂದು ಸಂದರ್ಭದಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತಾಯ ಮಾಡಬಾರದೆಂದು ಪ್ರತಿಯೊಬ್ಬರನ್ನೂ ಪ್ರಾರ್ಥಿಸುತ್ತೇನೆ. ಅದು ಅಸಾಧ್ಯವೆಂದಲ್ಲ. ಆದರೆ ಅನಾವಶ್ಯಕ. ಬ್ರಿಟಿನ್ ಸಂಪೂರ್ಣ ಸಮಾನತೆ ಕೊಡುವ ಘೋಷಣೆ ಮಾಡಿದರೂ, ಅವರ ನಿಜವಾದ ಉದ್ದೇಶ ನಮ್ಮನ್ನು ಅಧೀನದಲ್ಲೇ ಇಟ್ಟುಕೊಳ್ಳುವದು ಸ್ಪಷ್ಟ. ಅದು ವ್ಯಕ್ತವಾಗುವವರೆಗೆ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತಾಯಪಡಿಸುವುದು ಅನಾವಶ್ಯಕ.

ಸ್ವರಾಜ್ಯ ಪಕ್ಷ:

ಇಲ್ಲಿಯವರೆಗೆ ಒಪ್ಪಂದದ ಮೂಲವನ್ನೂ, ಅದರಿಂದ ಹುಟ್ಟುವ ಅನೇಕ ಪ್ರಶ್ನೆಗಳನ್ನು ಪರಿಶೀಲಿಸಿದ್ದಾಯಿತು. ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಸಮಾನತೆಯ ಬಗ್ಗೆ ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ಇದನ್ನು ತಪ್ಪಿಸಿದ್ದರೆ ಚೆನ್ನಾಗಿತ್ತು . ಆ ಪಕ್ಷ ಸರಿ ಇಲ್ಲವೆಂದಲ್ಲ; ಶಾಸನಸಭಾ ಪ್ರವೇಶದ ಬಗ್ಗೆ ಅದರ ಅಭಿಪ್ರಾಯಗಳು ನನಗೆ ಸಹಮತವಿಲ್ಲ ಅಷ್ಟೇ . ಕಾಂಗ್ರೆಸ್ಸಿನೊಳಗೆ ಇದ್ದು,ಮುಂದೆ ನಿಂತು ಅದನ್ನು ನಡೆಸಲೂ ಬೇಕಾದರೆ ಇರುವ ಸಂಗತಿಗಳನ್ನು ಇರುವ ಹಾಗೆಯೇ ಗ್ರಹಿಸಬೇಕು . ಕಾಂಗ್ರೆಸನ್ನು ಬಿಟ್ಟು ಹೋಗುವುದೂ ನನಗೆ ಸುಲಭವಾಗಿತ್ತು. ಈ ಅಧ್ಯಕ್ಷ ಪದವಿಯ ಗೌರವವನ್ನು ನಿರಾಕರಿಸಲೂ ಬರುತ್ತಿತ್ತು. ಆದರೆ ಹಾಗೆ ಮಾಡುವುದು ದೇಶಕ್ಕೆ ಹಿತವಲ್ಲ ಎಂದು ನಾನು ಯೋಚಿಸಿದೆ. ಈಗಲೂ ನನ್ನ ಯೋಚನೆ ಹಾಗೆಯೇ ಇದೆ. ಸ್ವರಾಜ್ಯ ಪಕ್ಷಕ್ಕೆ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯೆ ಇರದಿದ್ದರೂ, ದಿನೇ ದಿನೇ ಬೆಳೆಯುತ್ತಿರುವ ಬಲಿಷ್ಠವಾದ ಅಲ್ಪಸಂಖ್ಯೆ ಅದು. ಆ ಪಕ್ಷದವರ ಗೌರವದ ಪ್ರಶ್ನೆಯ ಮೇಲೆ ಕಾಂಗ್ರೆಸ್ಸನ್ನು ಇಬ್ಭಾಗ ಮಾಡಬಾರದೆಂದು ನಾನು ಹೇಳಿದರೆ ಅವರ ಕರಾರುಗಳಿಗೆ ನಾನು ಒಪ್ಪಲೇಬೇಕು ಅಷ್ಟೇ . ಆ ಕರಾರು ನನ್ನ ಅಂತರಂಗಕ್ಕೆ ವಿರುದ್ಧವಾಗಿರಬಾರದು . ಅವರೇನೂ ಅವಿಚಾರಿಗಳಲ್ಲ. ತಮ್ಮ ಧೋರಣೆಗೆ ಸ್ವರಾಜ್ಯ ಪಕ್ಷದವರು ಕಾಂಗ್ರೆಸಿನ ಹೆಸರನ್ನು ಬಳಸಬಯಸುತ್ತಾರೆ. ಅವರು ಹಾಗೆ ಮಾಡಲು ಅವಕಾಶ ಇರಬೇಕು. ಆದರೆ ಅವರು ತಮ್ಮ ಧೋರಣೆಯಿಂದ ಅಪರಿವರ್ತನವಾದಿಗಳನ್ನು ಬಂಧಿಸಬಾರದು. ಇಂಥ ಒಂದು ಸೂತ್ರವನ್ನು ಹುಡುಕಬೇಕಾಗಿತ್ತು. ಅದನ್ನು ಮಾಡಲು ಒಂದು ಮಾರ್ಗ ಅವರ ಧೋರಣೆಯನ್ನು ಅವರು ಅನುಸರಿಸಲು, ಅದನ್ನು ನಿಶ್ಚಯಿಸಲು, ಅವರಿಗೆ ಆರ್ಥಿಕ ಮತ್ತು ವ್ಯಾವಹಾರಿಕ ಜವಾಬ್ದಾರಿಯನ್ನೂ , ಅಧಿಕಾರವನ್ನೂ ಕೊಡುವದು.

ಇಡೀ ಕಾಂಗ್ರೆಸ್ಸೇ ಆ ಕೆಲಸ ಮಾಡಬೇಕು ಎಂದರೆ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.ನಾನು ಅದನ್ನು ಹೊರಲಾರೆ. ಅಪರಿವರ್ತನ ವಾದಿಗಳು ಯಾರೂ ಹೊರಲಾರರು ಎಂದು ನನಗೆ ಅನಿಸುತ್ತದೆ. ಅದರ ಧೋರಣೆಯನ್ನು ನಾನು ನಿಶ್ಚಯಿಸಲಾರೆ. ನನಗೆ ಅದರಲ್ಲಿ ಮನಸ್ಸಿಲ್ಲ.ಹೀಗೆ ಸ್ವರಾಜ್ಯ ಪಕ್ಷಕ್ಕೆ, ತನ್ನ ಶಾಸನಾಸಭಾ ಪ್ರವೇಶದ ಕಾರ್ಯಕ್ರಮಕ್ಕೆ ಕಾಂಗ್ರೆಸಿನ ಹೆಸರು ಬಳಸಲು ಅವಕಾಶ ಕೊಟ್ಟರೆ ಕಾಂಗ್ರೆಸಿಗೆ ಇತರ ಪಕ್ಷಗಳಿಗೂ ಯಡವಟ್ಟಾಗುತ್ತದೆ. ಇದು ಅನಿವಾರ್ಯ ಎಂದು ನನಗೆ ಅಂಜಿಕೆ. ಸ್ವರಾಜ್ಯಪಕ್ಷ , ತನಗೆ ಈಗಿರುವ ವಿಶೇಷ ಅನುಕೂಲತೆಯನ್ನು ಬಿಟ್ಟುಕೊಡಲಾರದು. ಅದಕ್ಕೆ ಈ ನೀತಿ ತನಗಾಗಿ ಬೇಕಾಗಿಲ್ಲ. ದೇಶದ ಸೇವೆಗಾಗಿ ಬೇಕು. ಎಲ್ಲ ಪಕ್ಷಗಳಿಗೂ ಅದೇ ಆಶೆ . ಬೇರೆ ಸಾಧ್ಯವಿಲ್ಲ. ಆದ್ದರಿಂದ ಇತರರು ಕಾಂಗ್ರೆಸಿಗೆ ಸೇರಿ ಒಳಗೆ ನಿಂತು ಕೆಲಸಮಾಡಿ, ದೇಶದ ಧೋರಣೆಗಳನ್ನು ದಾಖಲಿಸಬಹುದು . ಡಾ। ಅನಿ ಬೆಜೆಂಟ ಆ ದಾರಿಯಲ್ಲಿ ಕೆಲಸ ಮಾಡಿದ್ದಾರೆ . ಇನ್ನೂ ಎಷ್ಟೋ ಕೆಲಸ ಆಗಬೇಕೆಂದು ಆಕೆಯ ಮನಸ್ಸು. ಆದರೆ ಸಂಸ್ಥೆಯ ಒಳಗಡೆ ಇದ್ದುಕೊಂಡು ಕಾಂಗ್ರೆಸಿನ ಮತದಾರರನ್ನು ತನ್ನ ಅಭಿಪ್ರಾಯಕ್ಕೆ ತರಬಹುದು ಎಂದು ಆಕೆ ಭಾವಿಸಿದ್ದಾಳೆ. ಅಪರಿವರ್ತನವಾದಿಗಳು ನಿಸ್ಸಂಕೋಚವಾಗಿ ಈ ಒಪ್ಪಂದಕ್ಕೆ ಮತ ಕೊಡಬಹುದು ಎನ್ನುವುದು ನನ್ನ ಅಭಿಪ್ರಾಯ. ಎಲ್ಲರೂ ಎಲ್ಲ ಗುಂಪುಗಳು ಒಟ್ಟುಗೂಡಿ ನಡೆಸಬಹುದಾದ ರಾಷ್ಟ್ರೀಯ ವಾದಗಳು ಎಂದರೆ ಖಾದಿ, ಹಿಂದೂ ಮುಸ್ಲಿಂ ಐಕ್ಯ, ಹಿಂದೂಗಳಿಗಾಗಿ ಅಸ್ಪೃಶ್ಯತಾ ನಿವಾರಣೆ. ಇಷ್ಟೆ ಅಲ್ಲವೇ ಅವರಿಗೆ ಬೇಕಾದ್ದು.

ಕೇವಲ ಸಾಮಾಜಿಕ ಸುಧಾರಣೆಯೋ?

ಈ ಕಾರ್ಯಕ್ರಮವು ಕಾಂಗ್ರೆಸ್ಸನ್ನು ಕೇವಲ ಸಾಮಾಜಿಕ ಸುಧಾರಣೆಯ ಸಂಸ್ಥೆಯಾಗಿ ಮಾಡುತ್ತದೆ ಎನ್ನುತ್ತಾರೆ. ನನ್ನ ಅಭಿಪ್ರಾಯ ಬೇರೆ. ಸ್ವರಾಜ್ಯಕ್ಕೆ ಬೇಕಾದ ಅತ್ಯಗತ್ಯ ವಿಷಯಗಳು ಸಮಾಜ ಸುಧಾರಣೆಗಿಂತ ಹೆಚ್ಚಿನವು. ಅವನ್ನು ಕಾಂಗ್ರೆಸ್ ಕೈಕೊಳ್ಳಬೇಕು. ಕಾಂಗ್ರೆಸ್ ಯಾವಾಗಲೂ ಇದೊಂದೇ ಕೆಲಸ ಮಾಡುತ್ತ ಇರಬೇಕೆಂದು ನನ್ನ ವಿಚಾರವಲ್ಲ. ಆದರೆ ಬರುವ ವರ್ಷ ಪೂರಾ ತನ್ನ ಶಕ್ತಿಯನ್ನು ರಚನಾತ್ಮಕ ಕಾರ್ಯಕ್ಕೆ ಅಥವಾ ನನ್ನ ವಿವರಣೆಯಂತೆ ಆಂತರಿಕ ವಿಕಾಸಕ್ಕೆ ಗಮನ ಕೊಡಬೇಕು . ಈ ಒಪ್ಪಂದದಲ್ಲಿ ಸೇರಿಸಿದ ರಚನಾತ್ಮಕ ಕಾರ್ಯಗಳಷ್ಟೇ

ಕಾಂಗ್ರೆಸ್ ಕೈಕೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳು ಎಂದರ್ಥವಲ್ಲ. ಅವು ಇನ್ನೂ ಬೇಕಾದಷ್ಟಿವೆ. ಈಗ ನಾನು ಹೇಳಲಿರುವ ಕಾರ್ಯಕ್ರಮಗಳು ಸಹ ಬಹಳ ಮುಖ್ಯವಾದವು. ಅವು ವಿವಾದಾತ್ಮಕ ಅಲ್ಲದ್ದರಿಂದ ಮತ್ತು ಮೇಲೆ ಹೇಳಿದ ಮೂರು ಕಾರ್ಯಕ್ರಮಗಳಷ್ಟು ಸ್ವರಾಜ್ಯಕ್ಕೆ ಅವಶ್ಯಕವಲ್ಲದ್ದರಿಂದ ಅವುಗಳನ್ನು ಈ ಒಪ್ಪಂದದಲ್ಲಿ ಸೇರಿಸಿಲ್ಲ

ರಾಷ್ಟ್ರೀಯ ಶಾಲೆಗಳು:

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಅಂಥದೊಂದು. ಜನತೆಗೆ ಗೊತ್ತಿದೆಯೋ ಇಲ್ಲವೋ–ಖಾದಿಯ ತರುವಾಯ ಈ ಸಂಸ್ಥೆಗಳ ನಿರ್ವಹಣವೇ ಹೆಚ್ಚು ಯಶಸ್ವಿ. ಇದನ್ನು ಕೈಬಿಡಲು ಆಗದು. ಕೆಲವೇ ವಿದ್ಯಾರ್ಥಿಗಳಾದರು ಚಿಂತೆ ಇಲ್ಲ, ತಮ್ಮ ಕಾಲೇಜುಗಳನ್ನು ರಾಷ್ಟ್ರೀಯ ನೀತಿಗೆ ಹೊಂದಿಸ ಬೇಕಾದ್ದರಿಂದ ಪ್ರಾಂತಗಳಿಗೆ ಒಂದು ಗೌರವ. ಅಸಹಕಾರವನ್ನು ನಿಲ್ಲಿಸಿದ್ದರಿಂದ ಈ ಸಂಸ್ಥೆಗಳ ಮೇಲೆ ಯಾವ ಕೆಟ್ಟ ಪರಿಣಾಮವೂ ಆಗಬಾರದು. ಅದಕ್ಕೆ ಬದಲು ಇವನ್ನು ಸ್ಥಿರಗೊಳಿಸಿ, ಬಲಪಡಿಸಲು ಹೆಚ್ಚು ಪ್ರಯತ್ನ ನಡೆಯಬೇಕು. ಅನೇಕ ಪ್ರಾಂತಗಳಲ್ಲಿ ರಾಷ್ಟ್ರೀಯ ಶಾಲೆಗಳು ಕಾಲೇಜುಗಳು ಇವೆ. ಗುಜರಾತ್ ಪ್ರಾಂತ್ಯ ಒಂದರಲ್ಲೇ ರಾಷ್ಟ್ರೀಯ ವಿದ್ಯಾಪೀಠ ಇದೆ. ಅವಕ್ಕೆ ವರ್ಷ ವರ್ಷವೂ ಸುಮಾರು 1 ಲಕ್ಷ ರೂಪಾಯಿ ವೆಚ್ಚವಾಗುತ್ತದೆ . ಇದರ ಕೈಕೆಳಗೆ ಮೂರು ಕಾಲೇಜು, ಎಪ್ಪತ್ತು ಶಾಲೆಗಳು ಇವೆ.ಒಂಬತ್ತು ಸಾವಿರ ವಿದ್ಯಾರ್ಥಿಗಳಿದ್ದಾರೆ . ಅದು ತನ್ನ ಸ್ವಂತ ನಿವೇಶನವನ್ನು ಸಂಪಾದಿಸಿದೆ. ಈಗಾಗಲೇ 2,05,323 ರೂ. ಗಳನ್ನು ಕಟ್ಟಡಕ್ಕಾಗಿ ವೆಚ್ಚ ಮಾಡಿದೆ. ದೇಶಾದ್ಯಂತ ಈ ಕೆಲಸ ಸದ್ದಿಲ್ಲದೇ ಅತ್ಯುತ್ತಮವಾಗಿ ನಡೆದಿದೆ. ಅಸಹಕಾರ ಮಾಡಿದ ವಿದ್ಯಾರ್ಥಿಗಳ ಕೆಲಸವಿದು. ಅವರ ತ್ಯಾಗವು ಅತ್ಯುತ್ತಮ, ಅತಿ ಶ್ರೇಷ್ಠ. ಪ್ರಾಪಂಚಿಕ ದೃಷ್ಟಿಯಿಂದ ಅವರು ತಮ್ಮ ಉಜ್ವಲ ಭವಿಷ್ಯವನ್ನು ಕಳೆದುಕೊಂಡಿರಬಹುದು. ಆದರೆ ರಾಜಕೀಯ ದೃಷ್ಟಿಯಿಂದ, ಅವರಿಂದಾದ ನಷ್ಟಕ್ಕಿಂತ ಲಾಭವೇ ಹೆಚ್ಚು ಎನ್ನುತ್ತೇನೆ. ಈ ವಿದ್ಯಾರ್ಥಿಗಳು ತಮ್ಮ ಮೊದಲಿನ ಶಾಲೆ ಕಾಲೇಜುಗಳನ್ನು ತೊರೆದರು. ಏಕೆಂದರೆ ಈ ಶಾಲೆ ಕಾಲೇಜುಗಳಲ್ಲಿ ತರಬೇತಾದ ಜನರಿಂದಲೇ ರಾಷ್ಟ್ರದ ತರುಣ ಜನಾಂಗಕ್ಕೆ ಪಂಜಾಬಿನಲ್ಲಿ ಉಪಮಾನವಾಯಿತು, ತೇಜೋಭಂಗವಾಯಿತು.

ನಮ್ಮ ಗುಲಾಮ ನದಿಯ ಮೊದಲನೆಯ ಕೊಂಡಿ ಈ ಬ್ರಿಟಿಷ್ ಚಾಲಿತವಾದ ಶಾಲೆಗಳಲ್ಲಿ ಸಿದ್ಧವಾಗುತ್ತದೆ. ಇದಕ್ಕೆ ವಿರುದ್ಧವಾದ ರಾಷ್ಟ್ರೀಯ ಶಾಲೆಗಳನ್ನು ಎಷ್ಟು ಕ್ಷಮತಾ ಹೀನವಾಗಿ ನಡೆಸಿದರೂ ನಮ್ಮ ಸ್ವಾತಂತ್ರ್ಯದ ಪ್ರಥಮ ಆಯುಧಗಳನ್ನು ತಯಾರು ಮಾಡುವ ಕಾರಖಾನೆಗಳು ಅವು. ಮುಂದಿನ ಭವಿಷ್ಯವು ನಮ್ಮ ಈ ರಾಷ್ಟ್ರೀಯ ಸಂಸ್ಥೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕೈಯಲ್ಲೇ ಇದೆ. ಆದ್ದರಿಂದ ಪ್ರಾಂತೀಯ ಹಣಕಾಸಿನ ವೆಚ್ಚದಲ್ಲಿ ಇವಕ್ಕೆ ಮೊದಲನೆಯ ಸ್ಥಾನ. ಈ ಸಂಸ್ಥೆಗಳು ನಿಜವಾಗಿ ರಾಷ್ಟ್ರೀಯವಾಗ ಬೇಕಾಗಿದ್ದರೆ, ಅವು ಹಿಂದೂ ಮುಸ್ಲಿಂ ಐಕ್ಯವನ್ನು ಬೆಳೆಸಬೇಕು. ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಒಂದು ಕಳಂಕ, ಮತ್ತು ಮಾನವೀಯತೆಗೆ ಎಸಗಿದ ಅಪರಾಧ ಎಂದು ಹಿಂದೂ ಬಾಲ ಬಾಲಕಿಯರು ತರಬೇತಿ ಪಡೆಯುವ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ತಿಳಿಯಬೇಕು. ನೂಲುವವರಿಗೆ ನೇಯುವವರಿಗೆ ಅತ್ಯುತ್ತಮ ತಾಂತ್ರಿಕ ಶಿಕ್ಷಣ ಕೊಡಬೇಕು. ರಾಟೆಯಲ್ಲಿ ಖಾದಿಯಲ್ಲಿ ಕಾಂಗ್ರೆಸ್ಸಿಗೆ ವಿಶ್ವಾಸ ಉಳಿದುಕೊಂಡಿದ್ದರೆ ಚರಕಾ ಶಾಸ್ತ್ರವನ್ನು ಈ ಸಂಸ್ಥೆಗಳು ಒದಗಿಸಬೇಕು ಎಂದು ಅಪೇಕ್ಷಿಸುವ ಅಧಿಕಾರ ನಮಗಿದೆ. ಇವು ಖಾದಿ ಅಭಿಮಾನದ ಕಾರಖಾನೆಗಳು ಆಗಬೇಕು.

ಹೀಗೆಂದರೆ ವಿದ್ಯಾರ್ಥಿಗಳಿಗೆ ಅಕ್ಷರ ಶಿಕ್ಷಣವೇ ಬೇಡ ಎಂದಲ್ಲ. ಆದರೆ ಹಸ್ತಕೌಶಲದ ಶಿಕ್ಷಣ ಮತ್ತು ಅಂತಃಕರಣ ಶಿಕ್ಷಣ, ಬೌದ್ಧಿಕ ಶಿಕ್ಷಣದ ಜೊತೆಗೆಯೇ ನಡೆಯಬೇಕೆಂದು ನನ್ನ ಅಭಿಪ್ರಾಯ, ರಾಷ್ಟ್ರೀಯ ಸಂಸ್ಥೆಯ ಯೋಗ್ಯತೆ ಅದರ ಪ್ರಯೋಜನ ನಮಗೆ ತಿಳಿಯಬೇಕಾದುದು ವಿದ್ಯಾರ್ಥಿಗಳ ಗ್ರಂಥ ಪಾಂಡಿತ್ಯದ ಹಿರಿಮೆಯಿಂದಲ್ಲ . ರಾಷ್ಟ್ರೀಯ ಚಾರಿತ್ರ್ಯವನ್ನು ನೂಲುವ ರಾಟಿಯನ್ನು, ಮಗ್ಗವನ್ನು ಉಪಯೋಗಿಸುವ ಕೌಶಲ್ಯಗಳಿಂದ ಅಳೆಯಬೇಕು. ರಾಷ್ಟ್ರೀಯ ಸಂಸ್ಥೆಗಳು ಯಾವುದೂ ಮುಚ್ಚಬಾರದು ಎಂದು ನನ್ನ ಚಿಂತೆ. ಆದರೆ ಹಿಂದೂಗಳಲ್ಲದವರನ್ನು ಸೇರಿಸಿಕೊಳ್ಳಲು ಆರೆಸ್ಸೆಸ್ ಮತ್ತು ಅಸ್ಪೃಶ್ಯರನ್ನು ಸೇರಿಸಿಕೊಳ್ಳದ ಅಥವಾ ಹಿಂಜುವುದನ್ನೂ ನೂಲುವುದನ್ನೂ ಶಿಕ್ಷಣದ ಭಾಗ ಎಂದು ಕಲಿಸದ ಶಾಲೆ ಕಾಲೇಜುಗಳನ್ನು ಮುಚ್ಚಿಬಿಡಲು ನಾನು ಕಿಂಚಿತ್ತೂ ಹಿಂದೆ ಮುಂದೆ ನೋಡುವದಿಲ್ಲ. ಶಾಲೆಯ ನಾಮಫಲಕದ ಮೇಲೆ ರಾಷ್ಟ್ರೀಯ ಎಂಬ ಶಬ್ದವನ್ನು ಬರೆಯಿಸಿ. ಸರಕಾರಕ್ಕೆ ಇದು ಸಂಬಂಧಿಸಿಲ್ಲ, ಸರಕಾರದ ನಿಯಂತ್ರಣ ಇದಕ್ಕಿಲ್ಲ ಎಂಬುದರಿಂದಲೇ ತೃಪ್ತಿಪಡುವ ಕಾಲ ಹಿಂದಾಯಿತು. ಅನೇಕ ರಾಷ್ಟ್ರೀಯ ಸಂಸ್ಥೆಗಳಲ್ಲಿ ಇನ್ನೂ ಪ್ರಾಂತೀಯ ಭಾಷೆಗಳಿಗೆ ಮತ್ತು ಹಿಂದುಸ್ತಾನಿಗೆ ಗಮನ ಕೊಡುತ್ತಿಲ್ಲ ಎಂಬುದನ್ನು ಹೇಳದೆ ಇರಲಾರೆ. ಪ್ರಾಂತೀಯ ಭಾಷೆಯ ಮೂಲಕ, ಹಿಂದುಸ್ತಾನಿಯ ಮೂಲಕ ಶಿಕ್ಷಣ ನೀಡುವ ಅಗತ್ಯವನ್ನು ಇನ್ನೂ ಅನೇಕ ಉಪಾಧ್ಯಾಯರು ಅರಿತುಕೊಂಡಿಲ್ಲ, ರಾಷ್ಟ್ರೀಯ ಶಿಕ್ಷಣಶಾಸ್ತ್ರಜ್ಞರ ಈ ಸಭೆಯನ್ನು ಏರ್ಪಡಿಸಿ, ನಾನು ಈಗ ಹೇಳಿದ ಕೆಲವು ವಿಷಯಗಳ ಬಗ್ಗೆ ತಮ್ಮ ಅನುಭವವನ್ನು ವಿನಿಮಯ ಮಾಡಿಕೊಂಡು, ಸಾಧ್ಯವಿದ್ದರೆ ಒಂದು ಸರ್ವ ಸಾಧಾರಣ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಸಿದ್ಧಗೊಳಿಸಲು ಕೆಲವರು ಏರ್ಪಾಟು ಮಾಡಿದ್ದಾರೆ.

ರಾಷ್ಟದ ಕರೆಗೆ ಓಗೊಟ್ಟು ವಕೀಲಿಯನ್ನು ಬಿಟ್ಟ ವಕೀಲರ ಬಗ್ಗೆ, ಸರಕಾರಿ ನೌಕರಿಯನ್ನು ಬಿಟ್ಟ ಶಿಕ್ಷಕರ ಬಗ್ಗೆ ಮತ್ತು ಸರಕಾರೀ ನೌಕರರ ಬಗ್ಗೆ ಒಂದು ಮಾತು ಹೇಳಲು ಇದೇ ಸರಿಯಾದ ಸ್ಥಾನ. ನಾನು ಬಲ್ಲೆ ; ಅವರಲ್ಲಿ ಅನೇಕರಿಗೆ ಎರಡು ಹೊತ್ತಿನ ಊಟಕ್ಕೂ ತೊಂದರೆಯಿದೆ.



ಅವರಿಗೆ ರಾಷ್ಟ್ರದ ಸಹಾಯ ದೊರೆಯಬೇಕು. ಖಾದಿ ಬೋರ್ಡು, ರಾಷ್ಟ್ರೀಯ ಶಾಲೆ ಕಾಲೇಜುಗಳು ಎರಡೂ ಪ್ರಾಮಾಣಿಕರಾದ ಉದ್ಯೋಗಶೀಲರಾದ ಅನೇಕರನ್ನು ನೇಮಿಸಿ ಕೊಳ್ಳಬಹುದು. ಆದರೆ ಈ ಜನರು ಕಷ್ಟಪಡಲು, ಕಲಿಯಲು, ಅಲ್ಪತೃಪ್ತರಾಗಿರಲು ಸಿದ್ದರಾಗಿರಬೇಕು.

ರಾಷ್ಟ್ರೀಯ ಸೇವೆಗಾಗಿ ಏನೂ ಪ್ರತಿಫಲವನ್ನು ಸ್ವೀಕರಿಸದ ಮನೋವೃತ್ತಿ ಜನರಲ್ಲಿ ಬೆಳೆಯುತಿದೆ. ಪ್ರತಿಫಲವಿಲ್ಲದೇ ಸೇವೆ ಸಲ್ಲಿಸುವುದು ಪ್ರಶಂಸನೀಯವೇ ಸರಿ. ಆದರೆ ಇದು ಎಲ್ಲರಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ಅವನ ಪಾರಿಶ್ರಮಿಕ ಸಲ್ಲಬೇಕು. ಪ್ರತಿಫಲ ತೆಗೆದುಕೊಳ್ಳದ ಕಾರ್ಯಕರ್ತರನ್ನು ಯಾವ ದೇಶವೂ ಸಾವಿರಗಟ್ಟಲೆ ಉತ್ಪನ ಮಾಡಲಾರದು. ಆದ್ದರಿಂದ ದೇಶಾಭಿಮಾನಿಗಳು ದೇಶಸೇವೆ ಸಲ್ಲಿಸಿ, ಅದಕ್ಕೆ ತಕ್ಕ ಪ್ರತಿಫಲ ಪಡೆಯುವದು ಒಂದು ಗೌರವ ಎಂಬ ವಾತಾವರಣವು ಬೆಳೆಯಬೇಕು.

ಮಾದಕ ಪದಾರ್ಥಗಳು:

ರಾಷ್ಟ್ರೀಯ ಪ್ರಾಮುಖ್ಯತೆಯ ಇನ್ನೊಂದು ಸಂಗತಿ ಎಂದರೆ ಹೆಂಡದ ಮಾರಾಟ ಮತ್ತು ಅಫೀಮಿನ ವ್ಯಾಪಾರ. ಪಾನ ನಿಷೇಧದ ಬಗ್ಗೆ 1921ರಲ್ಲಿ ದೇಶವನ್ನು ಅಲ್ಲಾಡಿಸಿದ ಉತ್ಸಾಹ ತರಂಗ ಅಹಿಂಸಾತ್ಮಕವಾಗಿ ಉಳಿದಿದ್ದರೆ, ಇವತ್ತು ನಮಗೆ ಅದರಲ್ಲಿ ಒಂದು ಪ್ರಗತಿ ಕಾಣುತ್ತಿತ್ತು. ನಮ್ಮ ದುರದೃಷ್ಟ ನಮ್ಮ ಪಿಕೆಟಿಂಗ್ ಹಿಂಸಾತ್ಮಕವಾಯಿತು. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪ್ರಚ್ಛನ್ನವಾಗಿ, ಆದ್ದರಿಂದ ಪಿಕೆಟಿಂಗ್‌ನ್ನು ನಿಲ್ಲಿಸಲಾಯಿತು. ಹೆಂಡದ ಗಂಡಂಗಗಳೂ ಅಫೀಮಿನ ಅಂಗಡಿಗಳೂ ಮೊದಲಿನಂತೆಯೇ ಏಳಿಗೆ ಹೊಂದಿದವು. ಆದರೆ ಪಾನನಿಷೇಧದ ಪ್ರಚಾರಕಾರ್ಯ ಪೂರ್ಣ ನಿಂತುಹೋಗಿಲ್ಲ ಎಂಬುದನ್ನು ಕೇಳಿ ನಿಮಗೆ ಸಂತೋಷವಾಗಬಹುದು. ಎಷ್ಟೋ ಜನ ಕೆಲಸಗಾರರು ಸದ್ದಿಲ್ಲದೆ ಸ್ವಾರ್ಥವಿಲ್ಲದೆ ಇನ್ನೂ ಈ ಕೆಲಸವನ್ನು ನಡೆಸುತ್ತಲೇ ಇದ್ದಾರೆ. ಮಾದಕ ಪದಾರ್ಥ ಸೇವನೆಯ ಈ ದುಷ್ಟಪದ್ಧತಿ ಸ್ವರಾಜ್ಯ ಸಾಧನೆಯ ಅಂಶ ಎಂಬುದನ್ನು ನಾವು ಅರಿತುಕೊಳ್ಳಬೇಕು.

ದುರ್ನೀತಿಯ ಮೂಲಕ ಬಂದ ಹಣದಿಂದ ನಮ್ಮ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿದೆ ಎಂಬುದು ನಮಗೆ ಗೌರವದ ಸಂಗತಿ ಅಲ್ಲ. ಕಾಂಗ್ರೆಸಿಗರು ಶಾಸನ ಸಭೆಗೆ ಹೋದರೂ ಚಿಂತೆ ಇಲ್ಲ, ಮಾದಕ ಪದಾರ್ಥದಿಂದ ಬರುವ ಈ ಆದಾಯವನ್ನು ಧೈರ್ಯದಿಂದ ಕಿತ್ತುಹಾಕಿಬಿಟ್ಟರೆ ನಾನು



ಕ್ಷಮಿಸಿಯೇನು. ಇದರಿಂದ ಶಿಕ್ಷಣ ನಿಂತರೂ ಚಿಂತೆಯಿಲ್ಲ . ಸೇನೆಯ ವೆಚ್ಚವನ್ನು ತಗ್ಗಿಸಲು ಒತ್ತಾಯ ಮಾಡಿದರೆ ಇಂಥ ಪರಿಸ್ಥಿತಿ ಬರುವದೇ ಇಲ್ಲ.

ಬಂಗಾಳದ ದಬ್ಬಾಳಿಕೆ – ದಮನ:

ಇಲ್ಲಿಯವರೆಗೆ ಆಂತರಿಕ ವಿಷಯಗಳನ್ನೇ ಪ್ರಸ್ತಾಪ ಮಾಡಿದ್ದೇನೆ. ಆದರೆ ನಮ್ಮ ಬಾಹ್ಯ ಪರಿಸ್ಥಿತಿಗಳು – ಮುಖ್ಯವಾಗಿ ನಮ್ಮ ಆಡಳಿತಗಾರರು ಮಾಡುತ್ತಿರುವ ಕೆಲಸಗಳು ನಮ್ಮ ವಿರುದ್ಧವಾಗಿ ಅದೃಷ್ಟವನ್ನು ರೂಪಿಸುತ್ತಿವೆ. ಆದರೆ ನಮಗೆ ಮನಸ್ಸಿದ್ದರೆ ಅವನ್ನು ನಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳಬಹುದು. ಅಥವಾ ಅದಕ್ಕೆ ತುತ್ತಾಗಲೂಬಹುದು. ನಮ್ಮ ಪ್ರಜೆಗಳ ಇತ್ತೀಚಿನ ಕೃತ್ಯ ಅಂದರೆ ಬಂಗಾಳದಲ್ಲಿ ಅವರು ಆರಂಭಿಸಿರುವ ದಬ್ಬಾಳಿಕೆ ಮತ್ತು ದಮನ. ಸರ್ವಪಕ್ಷ ಸಮ್ಮೇಳನವು ಅದನ್ನು ಅಸಂದಿಗ್ಧ ಶಬ್ದಗಳಲ್ಲಿ ಖಂಡಿಸಿತು. ದಬ್ಬಾಳಿಕೆಯು ಬಂಗಾಳದ ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಏಟು ಎಂದು ಹೇಳಲು ಆ ಸಮ್ಮೇಲನಕ್ಕೆ ಸಂಕೋಚವಿತ್ತು. ನನಗಂತೂ ಒಪ್ಪಿಗೆ ಇಲ್ಲ. ನಾನು ಕಲ್ಕತ್ತೆಗೆ ಹೋಗಿದ್ದೆ. ಭಿನ್ನ ಭಿನ್ನ ಅಭಿಪ್ರಾಯದ ಜನರ ಪ್ರತಿನಿಧಿಗಳನ್ನು ಭೇಟಿ ಮಾಡಿದೆ . ಸ್ವರಾಜ್ಯ ಪಕ್ಷ ಕೊಟ್ಟ ಏಟು ಇದು ಎಂಬ ತೀರ್ಮಾನಕ್ಕೂ ಬಂದೆ. ಆಮೇಲೆ ಲಾರ್ಡ ಲಿಟನ್, ಲಾರ್ಡ ರೀಡಿಂಗ್ ಮಾಡಿದ ಭಾಷಣಗಳಿಂದ ಈ ಅಭಿಪ್ರಾಯ ಸ್ಥಿರವಾಯಿತು. ಅವರು ಮಾಡಿಕೊಂಡಿರುವ ಸಮರ್ಥನೆ, ತೀರ ಅಸಮರ್ಪಕವಾಗಿತ್ತು ಯಾರಿಗೂ ಅದು ಒಪ್ಪಿಗೆ ಆಗಲಾರದು. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಏನೂ ಬೆಲೆಯಿಲ್ಲ. ಆದ್ದರಿಂಥ ಇಂಥಲ್ಲಿ ಮಾತ್ರ ಆ ಸಮರ್ಥನೆ ಸಾಧ್ಯ. ಸೆರೆಯಾಳುಗಳನ್ನು ಬಿಡಲು ಲಾರ್ಡ ಲಿಟನ್ ಹಾಕಿದ ಕರಾರು ನಮ್ಮ ಬುದ್ಧಿಗೇ ಒಂದು ಅವಮಾನ. ಪರಿಸ್ಥಿತಿ ಅಂಥದಿಲ್ಲ ಅಂದರೂ ಇದೆ ಎಂದು ಗ್ರಹಿಸಿ ಪರಿಸ್ಥಿತಿಯ ಮೂಲಕ ಈ ಸುಗ್ರೀವಾಜ್ಞೆಯನ್ನು (ಆರ್ಡಿನನ್ಸ್) ಹೊರಡಿಸ ಬೇಕಾಯಿತು; 1818ರ ನಿಯಮದಂತೆ ಕಾರ್ಯವನ್ನು ಕೈಕೊಳ್ಳ ಬೇಕಾಯಿತು ಎಂದು ಅವರು ಹೇಳಿದ್ದಾರೆ.

ರಾಷ್ಟದ ವಾದ ಹೀಗಿದೆ:

1. ಅವರು ವರ್ಣಿಸಿರುವ ಪರಿಸ್ಥಿತಿ ಇದ್ದುದಕ್ಕೆ ಪ್ರಮಾಣವಿಲ್ಲ.
2. ಒಂದು ವೇಳೆ 'ಅಂಥ ಪರಿಸ್ಥಿತಿ ಇದೆ ಎಂದರೆ ರೋಗಕ್ಕಿಂತ ಮದ್ದೇ ಹೆಚ್ಚು ವಿನಾಶಕಾರಕ.
3. ಪರಿಸ್ಥಿತಿಯನ್ನು ಹದಕ್ಕೆ ತರಲು ಸಾಧಾರಣ ಕಾನೂನಿನಲ್ಲಿ ಸಾಕಷ್ಟು ಅಧಿಕಾರವಿದೆ.
4. ಒಂದು ವೇಳೆ ಅಸಾಧಾರಣ ಅಧಿಕಾರ ಬೇಕು ಎನಿಸಿದರೂ ತಾವೇ ರಚಿಸಿರುವ ಶಾಸನ ಸಭೆಯಿಂದ ಅದನ್ನು ಪಡೆಯಬೇಕಾಗಿತ್ತು.

ಇಬ್ಬರ ಭಾಷಣಗಳಲ್ಲೂ ಈ ಮಾತುಗಳನ್ನು ಹಾರಿಸಿದ್ದಾರೆ. ಸರಕಾರದ ಹೇಳಿಕೆಗಳಿಗೆ ಏನೂ ಧಾಟಿ ಇರುವದಿಲ್ಲ ಎಂಬುದು ಈ ರಾಷ್ಟಕ್ಕೆ ಬೇಕಾದಷ್ಟು ಅನುಭವ ಆಗಿದೆ. ಆದ್ದರಿಂದ ಅವರ ಮಾತನ್ನು ನಾವು ನಂಬಲಾರೆವು. ನಂಬುವುದಿಲ್ಲ ಎಂಬುದು ಅವರಿಗೂ ಗೊತ್ತು. ಕಾರಣ ಅವರ ಹೇಳಿಕೆಗಳು ಬುದ್ಧಿಪೂರ್ವಕವಾಗಿ ಹೇಳಿದ ಸುಳ್ಳು ಎಂದಲ್ಲ . ಆದರೆ ಅವರ ಹೇಳಿಕೆಗಳಿಗೆ ಅಧಾರವಾದ ಸುದ್ದಿಗಳು ವಿರೂಪಗೊಂಡು ಬಂದಿರುತ್ತವೆ ಎಂದು ಗೊತ್ತಾಗಿದೆ. ಹೀಗಾಗಿ ಅವರು ಕೊಟ್ಟ ಭರವಸೆ ಜನರನ್ನು ಅಣಕಿಸಿದ ಹಾಗೆ, ಆ ಭಾಷಣಗಳು. ನೀವು ಬೇಕಾದದ್ದನ್ನು ಮಾಡಿ ಎಂದು ನಮಗೆ ಸವಾಲು ಹಾಕಿದಂತಿವೆ. ಇದರಿಂದ ನಾವು ರೇಗಲೂ ಬೇಕಾಗಿಲ್ಲ ಅಸಹನೆ ತೋರಲೂ ಬೇಕಾಗಿಲ್ಲ. ಈ ದಬ್ಬಾಳಿಕೆಯಿಂದ ನಾವು ಕುಗ್ಗದಿದ್ದರೆ, ನಮ್ಮ ಗುರಿಯಿಂದ ನಾವು ವಿಮುಖರಾಗದಿದ್ದರೆ, ಸ್ವರಾಜ್ಯಪ್ರಾಪ್ತಿ ಬೇಗ ಆದೀತು. ದಬ್ಬಾಳಿಕೆಯು ನಮ್ಮ ಶಕ್ತಿಯನ್ನು ಒರೆಗೆ ಹಚ್ಚುತ್ತದೆ. ಸಂಕಟಸಮಯದಲ್ಲಿ ಅದು ಜನರ ತ್ಯಾಗಶಕ್ತಿ ಮತ್ತು

ಧೈರ್ಯಗಳನ್ನು ಜಾಗ್ರತಗೊಳಿಸುತ್ತದೆ. ಬಂಗಾರವನ್ನು ಬೆಂಕಿಯಲ್ಲಿ ಪುಟವಿಟ್ಟರೆ ಏನು ಆಗುತ್ತದೆಯೋ ನಿಜವಾದ ಮನುಷ್ಯನಿಗೆ ರಾಷ್ಟಕ್ಕೆ ದಬ್ಬಾಳಿಕೆ–ದಮನದಿಂದಲೂ ಅದೇ ಆಗುತ್ತದೆ. 1921ರಲ್ಲಿ ದಬ್ಬಾಳಿಕೆಗೆ ಉತ್ತರವಾಗಿ ಸವಿನಯ ಕಾಯಿದೆ ಭಂಗವನ್ನು ಪ್ರಾರಂಭಿಸಿ, ಸರಕಾರವು ಏನು ಮಾಡಿದರೂ ಮಾಡಲಿ ಎಂದು ಆಹ್ವಾನಿಸಿದೆವು. ಇವತ್ತು ನಾವು ದೀನರಾಗಿದ್ದೇವೆ. ಸವಿನಯ ಶಾಸನ ಭಂಗಕ್ಕೆ ನಾವಿನ್ನೂ ಸಿದ್ಧರಾಗಿಲ್ಲ. ಅದಕ್ಕೆ ನಾವು ಸಿದ್ಧತೆ ಮಾಡಿಕೊಳ್ಳಬೇಕು. ಅದರ ಸಿದ್ಧತೆ ಮಾಡಿಕೊಳ್ಳುವುದು ಎಂದರೆ ಶಿಸ್ತು ಹಾಸುವ, ಅಹಿಂಸಾತ್ಮಕ ಪ್ರತಿಭಟನಾ ಶಕ್ತಿ ಇವೆಲ್ಲ ಅನಿವಾರ್ಯ. ಎಲ್ಲಕ್ಕಿಂತ ಮಿಗಿಲಾಗಿ, ನಮಗೆ ತಿಳಿದ ದೈವಕೃತ ನಿಯಮ ಹಾಗೂ ಅದಕ್ಕೆ ಅನುಕೂಲವಾದ ಮಾನವ ರಚಿತ ನಿಯಮಗಳನ್ನು ಕಟ್ಟುನಿಟ್ಟಾಗಿ ನಿಷ್ಠೆಯಿಂದ ಪಾಲಿಸುವದು ಅತ್ಯಗತ್ಯ. ಆದರೆ ದುರ್ದೈವದಿಂದ ಈ ಕೆಲಸಕ್ಕೆ ಬೇಕಾದಷ್ಟು ಶಿಸ್ತಾಗಲೀ ಸಂಯಮವಾಗಲೀ ನಮ್ಮಲ್ಲಿಲ್ಲ. ನಾವು ಹಿಂಸಾಮಯರು ಆಗಿದ್ದೇವೆ. ಇಲ್ಲವೆ ನಮ್ಮ ಅಹಿಂಸೆಯು ಪ್ರತಿಭಟನಾ ಶಕ್ತಿರಹಿತವಾದದ್ದಾಗಿದೆ. ನಮ್ಮಲ್ಲಿ ಸಾಕಷ್ಟು ಸಾಮರಸ್ಯವಿಲ್ಲ. ದೈವನಿರ್ಮಿತವೋ ಅಥವಾ ಮನುಷ್ಯರಚಿತವೋ, ಅಂತೂ ನಾವು ಪಾಲಿಸುವ

ಕಾನೂನು ಬಲಾತ್ಕಾರದ್ದು. ಹಿಂದೂ ಮುಸಲ್ಮಾನರ ನಡುವೆ ದಿನವೂ ಶಾಸನಗಳನ್ನು ಮುರಿಯುತ್ತಲಿದ್ದೇವೆ. ಇವು ದೈವನಿರ್ಮಿತವಿರಲಿ ಮನುಷ್ಯರಚಿತವಿರಲಿ ಇವುಗಳನ್ನು ಉಲ್ಲಂಘಿಸುತ್ತಿದ್ದೇವೆ. ಇದು ಸವಿನಯ ಶಾಸನಭಂಗಕ್ಕೆ ಅನುಕೂಲವಾದ್ದಲ್ಲ.

ಗುಲಾಮ ಜನಾಂಗಕ್ಕೆ ಇರುವ ಒಂದೇ ಒಂದು ಅಜೇಯವು ಅಪ್ರತಿಹತವೂ ಆದ ಆಯುಧವೆಂದರೆ ಸವಿನಯ ಶಾಸನಭಂಗ . ಇದನ್ನು ಬಿಟ್ಟರೆ ಹಿಂಸೆಯೇ ಗತಿ. ವಾತಾವರಣ ಅದಕ್ಕೆ ಅನುಕೂಲ ಇದ್ದಂತೆ ; ಹಿಂದೂ ಮುಸ್ಲಿಂ ಜಗಳ ಹಿಂಸೆಗೆ ನಮ್ಮನ್ನು ಸಿದ್ಧಗೊಳಿಸುತ್ತಿದೆ. ಭಾರತದ ವಿಮೋಚನೆಯು ಹಿಂಸೆಯ ಮೂಲಕವೇ ಸಾಧ್ಯ ಎಂದು ನಂಬಿದವರು ನಮ್ಮಲ್ಲಿ ನಡೆಯುವ ಈ ಸ್ವಚ್ಛಂದ ಕಲಹಗಳನ್ನು ನೋಡಿ ಉಬ್ಬಿ ಹೋಗಬಹುದು. ಆದರೆ ಹಿಂಸೆಯನ್ನು ನಂಬಿದವರಿಗೆ ನಾನು ಹೀಗೆ ಹೇಳಬಯಸುತ್ತೇನೆ : ನೀವು ಹಿಂದೂಸ್ತಾನದ ಪ್ರಗತಿಗೆ ಅಡ್ಡಿ ಒಡ್ಡುತ್ತಿದ್ದೀರಿ. ಹೊಟ್ಟೆಗಿಲ್ಲದೇ ಸಾಯುತ್ತಿರುವ ಜನಕೋಟಿಯಲ್ಲಿ ನಿಮಗೆ ಸ್ನೇಹ ಕರುಣೆ ಇದ್ದರೆ, ಹಿಂಸೆಯಿಂದ ಅವರಿಗೆ ಏನೂ ಲಾಭವಿಲ್ಲ ಎಂದು ತಿಳಿದುಕೊಳ್ಳಿ. ಯಾರನ್ನು ನೀವು ಉಳಿಸಬಯಸುತ್ತೀರೋ ಅವರ ಕೈಯಲ್ಲಿ ಹೆಚ್ಚು ಶಸ್ತ್ರ ಇವೆ, ಅವರ ಸಂಘಟನೆಯೂ ನಿಮಗಿಂತ ಉತ್ತಮ. ನಿಮ್ಮ ಜೀವದ ಯೋಚನೆ

ನಿಮಗೆ ಇಲ್ಲದಿರಬಹುದು. ಆದರೆ ಹುತಾತ್ಮರಾಗಲು ಅಪೇಕ್ಷೆ ಇಲ್ಲದ. ನಮ್ಮ ದೇಶಬಾಂಧವರ ಪ್ರಾಣಗಳನ್ನೂ ನೀವು ದುರ್ಲಕ್ಷ ಮಾಡಲಾರಿರಿ. ಜಾಲಿಯಾನ್‌ವಾಲಾಬಾಗಿನ ಕಗ್ಗೊಲೆಯಂಥ ಕೃತ್ಯಗಳಲ್ಲಿ ಸರಕಾರಕ್ಕೆ ವಿಶ್ವಾಸವಿದೆ. ಆತ್ಮರಕ್ಷಣೆಗೆ ಅದೇ ನ್ಯಾಯವಾದ ಮಾರ್ಗ ಎಂದು ಈ ಸರಕಾರ ತಿಳಿಯುತ್ತದೆ. ನಿಮಗೂ ಇದು ಗೊತ್ತು. ಉಳಿದ ದೇಶಗಳ ಬಗ್ಗೆ ಏನೇ ಇರಲಿ, ಈ ದೇಶದಲ್ಲಿ ಮಾತ್ರ ಹಿಂಸೆಯ ಪಂಥವು ಬೆಳೆಯುವ ಸಂಭವವಿಲ್ಲ. ಭಾರತವೇ ಅಹಿಂಸೆಯನ್ನು ಪ್ರತಿಪಾದಿಸಬಲ್ಲದು, ಮತ್ತು ಅದೇ ಅಹಿಂಸೆಗೆ ಆಗರವಾಗಿರಬಲ್ಲದು. ಇದು ನಿರ್ವಿವಾದ. ನಿಮಗೆ ಹುತಾತ್ಮರಾಗುವದೇ ಇದ್ದರೆ ಅಹಿಂಸೆಯ ಪ್ರತಿಪಾದನೆಗಾಗಿ ನಿಮ್ಮ ಜೀವಗಳನ್ನು ಏಕೆ ಮುಡುಪು ಇಡಬಾರದು? ಅಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ನನ್ನ ಈ ಬಿನ್ನಹದಿಂದ ಏನೂ ಪ್ರಯೋಜನವಿಲ್ಲ. ಹಿಂಸಾತ್ಮಕ ಅರಾಜಕ ಸರಕಾರಕ್ಕೆ ಬಿನ್ನಯಿಸಿದರೆ ಎಷ್ಟು ಫಲವೋ, ಕ್ರಾಂತಿಕಾರರಿಗೆ ಬಿನ್ನಯಿಸಿದರೂ ಅಷ್ಟೇ ಫಲ. ಆದ್ದರಿಂದ ನಾವು ಇದಕ್ಕೆ ಪರಿಹಾರವನ್ನು ಕಂಡುಹಿಡಿದು, ಅವರ ಹಿಂಸೆಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಶಕ್ತಿ ಇನ್ನೊಂದು ಇದೆ ಎಂದು ಹಿಂಸಾತ್ಮಕ ಕ್ರಾಂತಿಕಾರರಿಗೂ ಹಿಂಸಾತ್ಮಕ ಸರಕಾರಕ್ಕೂ ತೋರಿಸಿಕೊಡಬೇಕು.

ದಬ್ಬಾಳಿಕೆಯು ರೋಗದ ಲಕ್ಷಣ:

ಈ ದಬ್ಬಾಳಿಕೆಯು ಹಳೆಯ ರೋಗದ ಒಂದು ಹಳೆಯ ಲಕ್ಷಣ ಎನ್ನುತ್ತೇನೆ. ಇದರ ಸೂತ್ರವು ಐರೋಪ್ಯರ ಅಧಿಕಾರ–ಏಶಿಯಾದವರ ಅಧೀನ. ಕೆಲವು ಸಲ ಇನ್ನೂ ರಹಸ್ಯವಾಗಿ ಬಿಳಿಯರು, ವಿರುದ್ಧ ಕಪ್ಪು ಜನರು ಎನ್ನುತ್ತಾರೆ. ಬಿಳಿಯ ಮನುಷ್ಯನು ಹೊರಿಸಿದ ನೊಗವನ್ನು , ಬಿಳಿಯ ಮನುಷ್ಯ ಹೊತ್ತ ಹೊರೆ ಎಂದು ತಪ್ಪೇ ಹೇಳಿದ ಕಿಪ್ಲಿಂಗ್. ಮಲಯಾದಲ್ಲಿ ಬಣ್ಣದ ಆತಂಕವು ತಾತ್ಕಾಲಿಕವೆಂದು ತಿಳಿದಿದ್ದರು. ಈಗಂತೂ ಅದು ಶಾಶ್ವತವೇ ಆಗಿದೆ. ಮಾರಿಷಸ್ ತೋಟಗಾರ ಅನಿರ್ಬಂಧವಾಗಿ ಭಾರತದ ಕೂಲಿಕಾರರನ್ನು ಪಡೆಯಲೇಬೇಕು. ಭಾರತೀಯರು ಮೊದಲಿನಿಂದಲೂ ಅಲ್ಲಿ ಇದ್ದರೂ ಕೀನ್ಯಾ ಐರೋಪ್ಯರು ಅವರ ಮೇಲೆ ಸವಾರಿ ಮಾಡುತ್ತಿದ್ದಾರೆ. ಹಿಂದಿನ ಉಪಕಾರವನ್ನು ಕಡೆಗಣಿಸಿ ಸಾಧ್ಯವಾದರೆ ಎಲ್ಲ ಭಾರತೀಯರನ್ನೂ ದಕ್ಷಿಣ ಆಫ್ರಿಕಾ ಕಡೆಗಣಿಸಲು ಸಿದ್ಧ. ಈ ಎಲ್ಲ ಸಂದರ್ಭಗಳಲ್ಲೂ ಭಾರತ ಸರಕಾರ ಮತ್ತು ಸಾಮ್ರಾಜ್ಯ ಸರಕಾರ ಕೈಲಾಗದವರೇನಲ್ಲ. ಅವರಿಗೆ ಮನಸ್ಸಿಲ್ಲ ಅಥವಾ ಭಾರತೀಯ ವಲಸೆಗಾರರ ಬಗ್ಗೆ ಎಷ್ಟು ಒತ್ತಾಯ ಮಾಡಬೇಕೋ ಅಷ್ಟು ಮಾಡುತ್ತಿಲ್ಲ. ಭಾರತ ಸರಕಾರ ಫಿಜಿ ದ್ವೀಪಗಳ ಬಗ್ಗೆ ತಾವೇ ನೇಮಿಸಿದ ಆಯೋಗದ ವರದಿಯನ್ನು ಪ್ರಕಟಿಸುವಷ್ಟು ಸೌಜನ್ಯ ಅದಕ್ಕೆ ಇಲ್ಲ. ಅಕಾಲಿಗಳ ದುರ್ದಮನೀಯ ವೀರತನವನ್ನು ಮೆಟ್ಟಿಹಾಕಲು ಮಾಡಿದ ಪ್ರಯತ್ನವೂ ಅದೇ ರೋಗದ ಕುರುಹು. ತಮ್ಮ ಪ್ರಾಣದಷ್ಟೆ ಪ್ರಿಯವಾದ ಉದ್ದೇಶಕ್ಕಾಗಿ ನೀರಿನ ಹಾಗೆ ತಮ್ಮ ರಕ್ತವನ್ನು ಅವರು ಸುರಿದಿದ್ದಾರೆ. ಅವರು ತಪ್ಪು ಮಾಡಿರಬಹುದು. ಮಾಡಿದ್ದರೆ ಅವರ ರಕ್ತ ಸುರಿಯಿತು ಅಷ್ಟೆ. ಬೇರೆ ಯಾರಿಗೂ ಅವರು ತೊಂದರೆ ಮಾಡಲಿಲ್ಲ. ಅವರ ಧೈರ್ಯಕ್ಕೆ, ಅವರ ಮೂಕ ಕಷ್ಟ ಸಹನೆಗೆ, ಅವರ ಆತ್ಮಾರ್ಪಣೆಗೆ ನಾನ್‌ಕಾನಾ ಸಾಹೇಬ, ಗುರು ಕಾ ಬಾಗ್, ಜೈತೋಗಳು ಸಾಕ್ಷಿಯಾಗಿ ನಿಂತಿವೆ. ಆದರೂ ಅಕಾಲಿಗಳನ್ನು ಮೆಟ್ಟಿ ಹಾಕುತ್ತೇನೆ ಎಂದು ಪಂಜಾಬ ಗವರ್ನರ್ ಪ್ರತಿಜ್ಞೆ ಮಾಡಿದ್ದಾನೆಂದು ಹೇಳಲಾಗಿದೆ.

ನಮಗಿಂತ ಈಜಿಪ್ತಿನ ಹಣೆಯ ಬರಹ ಉತ್ತಮವಾಗಿಲ್ಲ. ಯಾರೋ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಕೊಂದನಂತೆ. ಇದು ಖಂಡಿತವಾಗಿಯೂ ಬಹು ತುಚ್ಛ ಹಾಗೂ ಬಲು ಹೀನಕಾರ್ಯ. ಆದರೆ ಇದಕ್ಕೆ ಕೊಡುತ್ತಿರುವ ಶಿಕ್ಷೆ ಅದಕ್ಕೂ ಹೀನ ಅಪರಾಧ,ಅಷ್ಟೇ ಅಲ್ಲ; ಅದು ಒಂದು ಅತ್ಯಾಚಾರ, ಮಾನವತೆಗೆ ಮಾಡಿದ ಅಪಚಾರ.ಒಬ್ಬ ಮಾಡಿದ ಅಪರಾಧಕ್ಕಾಗಿ ಇಡೀ ಜನಾಂಗವನ್ನೇ ನಿರ್ದಯೆಯಿಂದ ಶಿಕ್ಷಿಸಲಾಗುತ್ತಿದೆ . ಆ ಕೊಲೆಗೆ ಈಜಿಪ್ತಿನ ಜನರು ಸಹಾನುಭೂತಿ ತೋರಿಸಿರಲೂ ಬಹುದು . ಆದರೆ ಹಿಂಸೆಯನ್ನು ನಿಯಂತ್ರಿಸ ಬಲ್ಲ ಸಾಮರ್ಥ್ಯವುಳ್ಳ ಸರಕಾರದ ಈ ಭಯೋತ್ಪಾದಕ ಕೃತ್ಯವು ನ್ಯಾಯಸಮ್ಮತವಾದೀತೇ?

ಆದ್ದರಿಂದ ಬಂಗಾಲದಲ್ಲಿ ನಡೆಯುವ ದೌರ್ಜನ್ಯ ಅಸಾಧಾರಣವೇನೂ ಅಲ್ಲ.ಕಾಲ

ಕಾಲಕ್ಕೆ ಇದು ಹೊರಚಿಮ್ಮುತ್ತದೆ, ಅದು ಯಾವುದೋ ರೂಪದಲ್ಲಿ ಯಾವುದೋ ಪ್ರಾಂತದಲ್ಲಿ ಸ್ವತಂತ್ರವಾಗುವವರೆಗೆ ಇದು ಸಾಮಾನ್ಯವಾದದ್ದೆಂದು ನಾವು ತಿಳಿಯಬೇಕು.

ಅಂಗೀಕಾರದ ಅಗತ್ಯ:

ಆದ್ದರಿಂದ ತನ್ನಲ್ಲಿಟ್ಟಿರುವ ನಂಬಿಕೆಯನ್ನು ಕಾಂಗ್ರೆಸ್ ಉಳಿಸಿಕೊಳ್ಳಬೇಕಾದರೆ ತನ್ನ ಕೆಲವು ಬೇಡಿಕೆಗಳಿಗೆ ಒಂದು ಅಂಗೀಕಾರದ ಬೆಂಬಲ ಪಡೆಯಲೇಬೇಕು. ಆ ಬೆಂಬಲವನ್ನು ದೊರಕಿಸಿಕೊಳ್ಳುವ ಮೊದಲು ಹಿಂದೂಗಳೂ, ಮುಸಲ್ಮಾನರೂ, ಶೀಖರೂ, ಪಾರಸಿಗಳೂ, ಕಿಶ್ಚಿಯನ್ನರೂ ಎಲ್ಲರೂ ಒಂದಾಗಬೇಕು. ಅದೇ ರೀತಿ ಸ್ವರಾಜ್ಯವಾದಿಗಳು, ಅಪರಿವರ್ತನ ವಾದಿಗಳು , ಉದಾರಪಂಥಿಗಳು ಹೋಂರೂಲಿನವರೂ, ಮುಸ್ಲಿಂ ಲೀಗಿನವರೂ ಇತರರೂ ಒಟ್ಟಾಗಬೇಕು. ನಮ್ಮ ಮನಸನ್ನು ನಾವು ಅರಿತುಕೊಂಡು ಎಲ್ಲರೂ ಏಕಕಂಠದಿಂದ ಮಾತನಾಡುವುದು ಒಳ್ಳೆಯದು. ನಮ್ಮ ದೇಶಕ್ಕೆ ಪರದೇಶದ ಬಟ್ಟೆ ಬರದಂತೆ ತಡೆಯುವ ಶಕ್ತಿಯನ್ನು ಗಳಿಸಿಕೊಂಡರೆ ನಮಗೆ ಎಷ್ಟೋ ಮೇಲಾದೀತು. ಆಗ ನಿಜವಾಗಿಯೂ ನಮಗೆ ಶಕ್ತಿ ಮೈಗೂಡುತ್ತದೆ.

ನನ್ನ ನಂಬಿಕೆ:

ನನ್ನ ವಿಶ್ವಾಸವನ್ನು ಹೇಳುತ್ತೇನೆ: ಕಾಂಗ್ರೆಸ್ಸನ್ನು ಭದ್ರವಾಗಿ ಇಡ ಬಯಸುವ ಕಾಂಗ್ರೆಸ್ಸಿಗನಂತೆ ಅಸಹಕಾರವನ್ನು ನಿಲ್ಲಿಸಲು ಸಲಹೆ ಕೊಡುತ್ತೇನೆ, ನಮ್ಮ ದೇಶ ಅದಕ್ಕಿನ್ನೂ ಸಿದ್ಧವಾಗಿಲ್ಲ ಎಂದು . ಆದರೆ ಈಗಿನ ಈ ಸರಕಾರ ಈಗಿರುವ ಹಾಗೆಯೇ ಇರುವ ತನಕ ವೈಯಕ್ತಿಕವಾಗಿ ನಾನು ಅಸಹಕಾರವನ್ನು ಕೈಬಿಡಲಾರೆ, ಕೈಬಿಡುವುದೂ ಇಲ್ಲ. ನನ್ನ ಮಟ್ಟಿಗೆ ಇದು ಕೇವಲ ಒಂದು ಧೋರಣೆ ಅಷ್ಟೇ ಅಲ್ಲ, ಅದೊಂದು ಶ್ರದ್ಧಾಪೂರ್ಣ ಉದ್ದೇಶ. ಅಸಹಕಾರ, ಸವಿನಯ ಶಾಸನಭಂಗ ಇವು ಸತ್ಯಾಗಹದ ವೃತ್ತಕ್ಕೆ ಬೇರೆ ಬೇರೆ ಶಾಖೆಗಳು ಮಾತ್ರ. ಸತ್ಯಾಗ್ರಹವೆಂದರೆ ಸತ್ಯಶೋಧನೆ ; ದೇವರು ಸತ್ಯ. ಆ ಸತ್ಯವನ್ನು ನನಗೆ ತಿಳಿಸಿಕೊಡುವ ಬೆಳಕು ಅಹಿಂಸೆ. ಸ್ವರಾಜ್ಯವು ನನಗೆ ಆ ಸತ್ಯದ ಒಂದು ಅಂಶ. ದಕ್ಷಿಣ ಆಫ್ರಿಕೆಯಲ್ಲಿ, ಖೇಡಾದಲ್ಲಿ, ಚಂಪಾರಣ್ಯದಲ್ಲಿ ಇನ್ನೂ ಹಲವು ಪ್ರಸಂಗಗಳಲ್ಲಿ ಸತ್ಯಾಗ್ರಹವು ನನ್ನನ್ನು ಕೈಬಿಟ್ಟಿಲ್ಲ. ಅವರಲ್ಲಿ ಹಿಂಸೆಗೆ ಅಥವಾ ದ್ವೇಷಕ್ಕೆ ಸ್ವಲ್ಪವೂ ಸ್ಥಾನವಿಲ್ಲ. ಆದ್ದರಿಂದ ನಾನು ಇಂಗ್ಲಿಷ್ ಜನರನ್ನು ದ್ವೇಷಿಸಲಾರೆ, ದ್ವೇಷಿಸುವುದೂ ಇಲ್ಲ. ಹೀಗೆಂದರೆ ಅವರ ನೊಗಕ್ಕೆ ಹೆಗಲನ್ನು ಕೊಡುತ್ತೇನೆ" ಎಂದು ಅಲ್ಲ.

ಭಾರತದ ಮೇಲೆ ಬ್ರಿಟಿಷ್ ರೀತಿ ನೀತಿಗಳನ್ನೂ ಬ್ರಿಟಿಶ್ ಸಂಸ್ಥೆಗಳನ್ನೂ ಹೇರುವ ಈ ಅಧಾರ್ಮಿಕ ಪ್ರಯತ್ನಗಳನ್ನು ನನ್ನ ಪ್ರಾಣ ಪಣವಿಟ್ಟು ಕಡೆಯವರೆಗೂ ಹೋರಾಡುತ್ತೇನೆ, ಆದರೆ ನಾನು ಜತೆಯಾಗಿ ಆ ಪ್ರಯತ್ನವನ್ನು ಎದುರಿಸುತ್ತೇನೆ, ಇಂಗ್ಲಿಷ್ ಪ್ರಭುಗಳೊಡನೆ ಅಹಿಂಸಾತ್ಮಕವಾಗಿ ಯುದ್ಧ ಮಾಡಬಲ್ಲ ಸಾಮರ್ಥ್ಯ ಭಾರತಕ್ಕೆ ಇದೆ ಎನ್ನುವುದು ನನ್ನ ವಿಶ್ವಾಸ . ಈ ಪ್ರಯೋಗ ವಿಫಲವಾಗಿಲ್ಲ,ಆದರೆ ಎಷ್ಟು ಸಫಲವಾಗಬೇಕೆಂದು ನಾವು ಬಯಸಿದ್ದೆವೋ ಅಷ್ಟು ಸಫಲವಾಗಿಲ್ಲ. ಆದರೆ ನನಗೆ ನಿರಾಶೆ ಆಗಿಲ್ಲ. ಅದಕ್ಕೆ ಬದಲು ಶೀಘ್ರದಲ್ಲಿಯೇ ಭಾರತವು ತನ್ನ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಸತ್ಯಾಗ್ರಹದ ಮೂಲಕವೇ ಪಡೆದೀತೆಂದು ನನ್ನ ನಂಬಿಕೆ. ತಾತ್ಪೂರ್ತಿಕವಾಗಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂಬ ಸೂಚನೆ ಕೂಡ ಆ ಪ್ರಯೋಗದ ಒಂದು ಅಂಗವೇ ಆಗಿದೆ. ನಾನು ಹಾಕಿಕೊಟ್ಟ ಕಾರ್ಯಕ್ರಮವನ್ನು ಪೂರೈಸಿದ್ದೇ ಆದರೆ ಅಸಹಕಾರವನ್ನು ಮತ್ತೆ ಪ್ರಾರಂಭಿಸುವ ಅಗತ್ಯವೇ ಬೇಕಾಗುವದಿಲ್ಲ. ಒಂದು ವೇಳೆ ಕಾರ್ಯಕ್ರಮ ನಡೆಯದೇ ಇದ್ದರೆ ಕಾಂಗ್ರೆಸ್ಸಿನ ಮೂಲಕವೋ ಅಥವಾ ಹೊರಗಡೆಯೋ ಯಾವುದೂ ಒಂದು ರೂಪದಲ್ಲಿ ಅಹಿಂಸಾತ್ಮಕ ಅಸಹಕಾರವನ್ನು ಪುನಃ ಪ್ರಾರಂಭಿಸಲೇಬೇಕಾಗುತ್ತದೆ. ಸತ್ಯಾಗ್ರಹಕ್ಕೆ ಎಂದೂ ಸೋಲಿಲ್ಲ ಎಂದು ಪದೇ ಪದೇ ಹೇಳಿದ್ದೇನೆ. ಸತ್ಯವನ್ನು ಎತ್ತಿ ಹಿಡಿಯಲು ಒಬ್ಬನೇ ಒಬ್ಬ ಪೂರ್ಣ ಸತ್ಯಾಗಹಿ ಆದರೂ ಸಾಕು. ಅಂಥ ಪೂರ್ಣ ಸತ್ಯಾಗ್ರಹಿಗಳಾಗಲು ನಾವೆಲ್ಲರೂ ಪ್ರಯತ್ನಿಸೋಣ. ಇದನ್ನು ಸಾಧಿಸಲು ನಮ್ಮಲ್ಲಿ ಕೆಳಗಿನವನಿಗೂ ಸಾಧ್ಯವಲ್ಲದ ವಿಶೇಷ ನಮ್ಮಲ್ಲಿ ಪ್ರತಿಯೊಬ್ಬರ ಒಳಗೂ ಅಡಗಿದೆ. ಸ್ವರಾಜ್ಯದ ಹಾಗೆ ಅದು ಅದು ನಮ್ಮ ಜನ್ಮಸಿದ್ಧ ಹಕ್ಕು. ಅದನ್ನು ಅರಿತುಕೊಳ್ಳೋಣ. ಏಕೆಂದರೆ ಸತ್ಯಾಗ್ರಹವು ಒಳಗಿರುವ ಆತ್ಮದ ಲಕ್ಷಣ.

ಅಧಿವೇಶನದ ಉಪಸಂಹಾರ

(27-12-1924)

ಸೋದರರೆ,

ನಿಮಗೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ನೀವು ನನಗೆ ತೋರಿಸಿದ್ದಕ್ಕಿಂತ ಹೆಚ್ಚು ಪ್ರೇಮವನ್ನು ಯಾವ ಅಧ್ಯಕ್ಷನೂ ನಿರೀಕ್ಷಿಸಲಾರ. ನೀವೇನು ಮಾಡಬೇಕು ಎಂದು ನಾನು ಬಯಸಿದೆನೋ ಅದನ್ನೆಲ್ಲ ಮಾಡಿದಿರಿ. ಮೌನವಾಗಿರಬೇಕು ಎಂದಾಗ ಮೌನವಾಗಿದ್ದಿರಿ. ನಾನು ಮಾಡಿದ ಭಾಷಣವನ್ನೆಲ್ಲ ಕೇಳಿದಿರಿ. ಬರೆದುಕೊಂಡು ಬಂದು ಓದಬೇಕು ಎಂದಿರಿ. ನಾನು ಕ್ಷಮಿಸಿ ಎಂದಾಗ ನೀವು ಅದಕ್ಕೆ ಒತ್ತಾಯ ಮಾಡಲಿಲ್ಲ. ಇಲ್ಲಿ ಹೇಗೆ ಸದ್ದುಗದ್ದಲ ಇಲ್ಲದೆ ನಿಮ್ಮ ಅಭಿಪ್ರಾಯವನ್ನು ಪ್ರಕಟಿಸಿದಿರೋ ವಿಷಯ ನಿಯಾಮಕ ಸಮಿತಿಯಲ್ಲೂ ಹಾಗೇ ಮಾಡಿದಿರಿ. ನಿಮ್ಮ ನಡುವೆ ರಾಟೆ ಬಾಂಬು ಬಿದ್ದಾಗ ಗದ್ದಲವಾಗಬಹುದಾಗಿತ್ತು. ಏನೂ ಆಗಲಿಲ್ಲ. ವಿಷಯ ನಿಯಾಮಕ ಸಮಿತಿಯಲ್ಲೂ ನೀವು ಸಭ್ಯತೆಗೆ ಶೋಭಿಸುವಂತೆ ನಡೆದುಕೊಂಡಿರಿ. ನನ್ನ ಸೋದರರು ತೋರಿಸಿದ ಈ ದಯೆ ಯಾವುದೋ ನನ್ನ ಪೂರ್ವ ಜನ್ಮದ ಫಲ ಎಂದು ತಿಳಿದಿದ್ದೇನೆ, ನನ್ನ ಬಗ್ಗೆ ತೋರಿಸಿದ ಈ ಕರುಣೆಯನ್ನು ಭರತ ಭೂಮಿಯ ಬಗ್ಗೆಯೂ ತೋರಿಸಬೇಕು ಎನ್ನುತ್ತೇನೆ, ನಾನು ಬದುಕಿರುವುದು ಭಾರತಕ್ಕಾಗಿಯೇ. ಸಾಯಬೇಕೆನ್ನುವುದೂ ಭಾರತಕ್ಕಾಗಿಯೇ. ದೇವರ ಇಚ್ಛೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವದಿಲ್ಲ. ಆದರೆ ಮಗು ತಂದೆಯನ್ನು ತನಗೆ ಬೇಕಾದ್ದು ಕೇಳುವಂತೆ, ಪ್ರತಿಯೊಬ್ಬರಿಗೂ ದೇವರನ್ನು ಕೇಳಲು ಹಕ್ಕಿದೆ, ನಾನು ಕೇಳಿದ್ದನ್ನು ಅವನು ಕೊಟ್ಟೇ ಕೊಡುತ್ತಾನೆ ಎಂಬುದನ್ನು ನಾನು ಮನಗೊಂಡಿದ್ದೇನೆ, ದೇವರ ಇಷ್ಟಕ್ಕೆ ವಿರುದ್ಧವಾಗಿ ಏನೂ ನಡೆಯಲಾರದು.

ಆದ್ದರಿಂದ, ಸೋದರರೇ, ಭಾರತದ ಸೇವೆಗೆ ಟೊಂಕಕಟ್ಟಿ, ನೀವು ಮಾಡಿರುವ ಶಪಥವನ್ನು ಪಾಲಿಸಿರೆಂದು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನಾನು ಅಧ್ಯಕ್ಷತೆ ವಹಿಸಿದೆ. ನೀವೆಲ್ಲರೂ ಪ್ರೇಮವನ್ನು ಸುರಿದಿರಿ. ಪ್ರತಿಯೊಬ್ಬರೂ ನನ್ನನ್ನು ಹೊಗಳಬೇಕು ಎಂದು ಬಯಸುವುದು ಸ್ವಾಭಾವಿಕ, ಆದರೆ ಇದರಿಂದ ಏನೂ ಸಾಧನೆ ಆಗುವದಿಲ್ಲ. ಸಾಧನೆ ಆಗಬೇಕು ಎಂದರೆ ನೀವೆಲ್ಲರೂ ಮಾತು ಕೊಟ್ಟಂತೆ ನಡೆಯಬೇಕು. ಇವೆಲ್ಲ ಕಾರ್ಯಗಳೂ ನಿಮ್ಮ ಅಳವಿಗೆ ಮೀರಿದ್ದೆಂದು ನಾನು ನಂಬಲಾರೆ .ಮೂರನೆಯದು, ನಾಲ್ಕನೆಯದು ಅಥವಾ ಐದನೆಯದು ಯಾವ ಕಾರ್ಯವೂ ನಮ್ಮಿಂದ ಅಸಾಧ್ಯವಲ್ಲ. ■

(ಮುಂದುವರೆಯುವುದು)



ಜಗತ್ತು ಕಂಡ ಗಾಂಧೀಜಿ

ಸಂಗ್ರಹ –ರಮೇಶ್ ಚೌಧುರಿ

ಇಂಗ್ಲೀಷ್ ಭಾಷೆಯೊಂದರಲ್ಲೇ ಮಹಾತ್ಮ ಗಾಂಧೀಜಿಯವರ 1000 ಕ್ಕಿಂತ ಹೆಚ್ಚು ಜೀವನಚರಿತ್ರೆಗಳಿವೆ. ಅವರ ಆತ್ಮಚರಿತ್ರೆ ನಲವತ್ತಕ್ಕಿಂತಾ ಹೆಚ್ಚು ಭಾಷೆಗಳಲ್ಲಿ ಭಾಷಾಂತರವಾಗಿದೆ. ಇದರ ಹೊರತಾಗಿ, ವಿವಿಧ ಭಾರತೀಯ ಭಾಷೆಗಳಲ್ಲಿ ಅವರ ಬಗ್ಗೆ ನೂರಾರು ಗ್ರಂಥಗಳಿವೆ. ಅವರ ಪ್ರಕಟವಾಗಿರುವ ಸಮಗ್ರ ಭಾಷಣಗಳು, ಪತ್ರಗಳು, ಲೇಖನಗಳೇ 50 ಸಾವಿರ ಪುಟಗಳಷ್ಟಿದ್ದು,ನೂರಕ್ಕಿಂತಾ ಹೆಚ್ಚು ಸಂಪುಟಗಳಲ್ಲಿ ಪ್ರಕಟವಾಗಿವೆ. ಅವರ ಹಿಂದ್ ಸ್ವರಾಜ್ ಪುಸ್ತಕ ಪ್ರಪಂಚದ ಅನೇಕ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮದ ಭಾಗವಾಗಿದೆ. ವಿಶ್ವದ 102 ದೇಶಗಳಲ್ಲಿ ಮಹಾತ್ಮನ ಪ್ರತಿಮೆಗಳಿವೆ.

ಜಗತ್ತಿನ 150 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ಪೋಸ್ಟಲ್ ಸ್ಟಾಂಪ್ ಗಳನ್ನು ಬಿಡುಗಡೆ ಮಾಡಿವೆ. ಮೊಟ್ಟ ಮೊದಲು ಬಿಡುಗಡೆಗೊಳಿಸಿದ ದೇಶ ಪೋಲಂಡ್.

- ಭಾರತ ಅಂಚೆ ಇಲಾಖೆಯು ಇಲ್ಲಿಯವರೆಗೂ ಗಾಂಧೀಜಿಯ ಭಾವಚಿತ್ರ ಇರುವ ಸುಮಾರು 40 ಕ್ಕೂ ಹೆಚ್ಚು ಸ್ಟಾಂಪ್ ಮತ್ತು 200 ಕ್ಕೂ ಹೆಚ್ಚು ಪೋಸ್ಟಲ್ ಎನ್ವಲಪ್‌ಗಳನ್ನು ಬಿಡುಗಡೆಗೊಳಿಸಿದೆ.
- ಸುಮಾರು 40 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ನಾಣ್ಯಗಳನ್ನು ಬಿಡುಗಡೆಗೊಳಿಸಿವೆ.
- ಸುಮಾರು 80 ಕ್ಕೂ ಹೆಚ್ಚು ದೇಶಗಳಲ್ಲಿ ಗಾಂಧೀಜಿಯವರ ವಿವಿಧ ರೀತಿಯ ಪ್ರತಿಮೆಗಳಿವೆ.
- ಗಾಂಧೀಜಿಯವರ ಹೆಸರಿನ ರಸ್ತೆಗಳು ಸುಮಾರು 40 ಕ್ಕೂ ಹೆಚ್ಚು ದೇಶಗಳಲ್ಲಿವೆ.
- ಗಾಂಧೀಜಿ ಮರಣ ಹೊಂದಿದ ದಿನ ಶ್ರೀಲಂಕಾ ಸರಕಾರವು ಶೋಕಾಚರಣೆ ಮಾಡಿ ತನ್ನ ರೇಡಿಯೋ ಪ್ರಸಾರವನ್ನು 24 ಗಂಟೆಗಳ ಕಾಲ ಬಂದ್ ಮಾಡಿತ್ತು.
- ಗಾಂಧೀಜಿಯವರು ಬದುಕಿದ್ದಾಗಲೇ ಅವರ ಜೀವನ ಚರಿತ್ರೆ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ರೋಮನ್ ರೋಲ್ಯಾಂಡ್ ಅವರಿಂದ ಬರೆಯಲ್ಪಟ್ಟಿತ್ತು.\
- 06.07.1944ರಂದು ಸಿಂಗಾಪೂರ್ ರೇಡಿಯೋದ ತಮ್ಮ ಭಾಷಣದಲ್ಲಿ ಗಾಂಧೀಜಿಯವರನ್ನು "ಭಾರತದ ರಾಷ್ಟ್ರಪಿತ" ಎಂದು ಮೊದಲ ಬಾರಿಗೆ ಘೋಷಿಸಿದ್ದು ನೇತಾಜಿ ಸುಭಾಶ್ಚಂದ್ರ ಬೋಸ್.



- ಗಾಂಧೀಜಿಯವರ ಸಮಗ್ರ ಬದುಕು ಸಾಧನೆಗಳ ಕುರಿತು ವಿಠಲ್ ಭಾಯಿ ಝುವೇರಿಯವರು 5 ಗಂಟೆ 9 ನಿಮಿಷಗಳಷ್ಟು ಸುದೀರ್ಘವಾದ ಡಾಕ್ಯುಮೆಂಟರಿಯನ್ನು 1968ರಲ್ಲಿ ನಿರ್ಮಿಸಿದ್ದಾರೆ.
- ಅಮೇರಿಕಾದ ಟೈಮ್ ಮ್ಯಾಗ್ಜೀನ್ 1930 ರಲ್ಲಿ 'ವರ್ಷದ ವ್ಯಕ್ತಿ' ಎಂದು ಗಾಂಧೀಜಿಯರನ್ನು ಘೋಷಿಸಿ ಮುಖಪುಟದಲ್ಲಿ ಅವರ ಭಾವಚಿತ್ರ ಪ್ರಕಟಿಸಿತ್ತು. ನಂತರವೂ 1947ರ ವರೆಗೆ ಮತ್ತೆರಡು ಬಾರಿ ಮುಖಪುಟದಲ್ಲಿ ಗಾಂಧೀಜಿಯವರ ಭಾವಚಿತ್ರ ಪ್ರಕಟಿಸಿದೆ. ಇಲ್ಲಿಯವರೆಗೂ ಭಾರತದ ಯಾವ ವ್ಯಕ್ತಿಗೂ ಈ ಗೌರವ ಸಂದಿಲ್ಲ.
- ಯಾವುದೇ ಅಧಿಕಾರದಲ್ಲಿಲ್ಲದ ಗಾಂಧೀಜಿ ತೀರಿಕೊಂಡಾಗ ವಿಶ್ವಸಂಸ್ಥೆಯು ತನ್ನ ಎಲ್ಲ ಸದಸ್ಯ ರಾಷ್ಟಗಳ ಧ್ವಜವನ್ನು ಅರ್ಧಕ್ಕೆ ಇಳಿಸಿ ಶೋಕಾಚರಣೆ ಮಾಡಿತ್ತು. ಇದು ಇತಿಹಾಸದಲ್ಲೇ ಮೊದಲ ಬಾರಿ ಮತ್ತು ಕೊನೆಯ ಬಾರಿ ನಡೆದ ಘಟನೆ. ಮತ್ತೊಬ್ಬರಿಗೆ ಈ ರೀತಿ ಗೌರವ ಸಿಕ್ಕಿಲ್ಲ.
- ಗಾಂಧೀಜಿಯವರು ಯಾವ ದೇಶದ ವಿರುದ್ಧ ಜೀವಮಾನವಿಡಿ ಹೋರಾಡಿದರೋ ಅದೇ ದೇಶದ (ಇಂಗ್ಲೆಂಡಿನ ಲಂಡನ್ ಸ್ಕ್ವೆರ್) ಪಾರ್ಲಿಮೆಂಟ್ ಮುಂದೆ ಗಾಂಧೀಜಿಯ ಪ್ರತಿಮೆ ಸ್ಥಾಪಿಸಲ್ಪಟ್ಟಿದೆ.
- ಜಗತ್ತಿನಲ್ಲೇ ವಿಶ್ವಸಂಸ್ಥೆಯಿಂದ ಆಚರಿಸಲ್ಪಡುವ ಜನ್ಮದಿನ ಕೇವಲ 'ಗಾಂಧಿ ಜನ್ಮದಿನ' ಮಾತ್ರ. ವಿಶ್ವಸಂಸ್ಥೆಯು ಗಾಂಧೀ ಜನ್ಮದಿನವನ್ನು 'ವಿಶ್ವ ಅಹಿಂಸಾ ದಿನ' ಎಂದು ಘೋಷಿಸಿದೆ.
- ಗಾಂಧೀಜಿಯಿಂದ ಪ್ರೇರಣೆಗೊಂಡು ನಾಲ್ಕು ಖಂಡಗಳ ಸುಮಾರು 20 ಕ್ಕೂ ಹೆಚ್ಚು ದೇಶಗಳಲ್ಲಿ ಮಾನವ ಹಕ್ಕುಗಳ ಹೋರಾಟಗಳು ನಡೆದಿವೆ
- ಸುಮಾರು 6 ಬಾರಿ ನೊಬೆಲ್ ನಾಮಿನೇಟ್ ಗೊಂಡಿರುವ ಗಾಂಧೀಜಿಗೆ ನೊಬೆಲ್ ಸಿಗಲಿಲ್ಲ. ಕೊನೆಗೆ ನೊಬೆಲ್ ಸಂಸ್ಥೆ ಈ ವಿಷಯವಾಗಿ ಕ್ಷಮೆ ಕೇಳಿ 'ಅವರು ನೊಬೆಲ್ ಪ್ರಶಸ್ತಿಗಿಂತ ದೊಡ್ಡವರು' ಎಂದು ಹೇಳಿತು.
- ಗಾಂಧೀಜಿಯವರನ್ನು ಒಮ್ಮೆಯೂ ಭೇಟಿಯಾಗದ ಆದರೆ ಗಾಂಧೀಜಿಯಿಂದ ಪ್ರಭಾವಿತರಾದ ನೆಲ್ಸನ್ ಮಂಡೇಲಾ (ದ.ಆಫ್ರಿಕಾದ ಗಾಂಧಿ) ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ (ಅಮೇರಿಕಾದ ಗಾಂಧಿ) ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿದೆ.
- ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಮತ್ತು ಅವರ ಸಾವಿರಾರು ಸಹಚರರು ತಮ್ಮ ಪ್ರಸಿದ್ಧ ವಾಷಿಂಗ್ಟನ್ ಯಾತ್ರೆಯಲ್ಲಿ ಗಾಂಧಿ ಟೋಪಿ ಧರಿಸಿ ಹೋರಾಟಕ್ಕೆ ಇಳಿದಿದ್ದರು.

ಪ್ರಚಾರ ಪಡೆಯದ ಮಹಾತ್ಮ ಗಾಂಧೀಜಿಯವರ ಸಾಧನೆಗಳು..



- ಕರಾರು ಕೂಲಿ ಪದ್ಧತಿಯಲ್ಲಿ, ಬಡ ನಿರುದ್ಯೋಗಿ ಭಾರತೀಯರನ್ನು ದೂರ ದೂರದ ಬ್ರಿಟಿಷ್ ವಸಾಹತುಗಳಿಗೆ ಅಗ್ಗದ ಕೂಲಿಗಾಗಿ ಸಾಗಿಸಲಾಗುತ್ತಿತ್ತು. ಈ ದೋಷಪೂರಿತ ಪದ್ಧತಿಯನ್ನು ತೊಡೆದು ಹಾಕಿದ್ದು ಮಹಾತ್ಮ ಗಾಂಧೀಜಿಯವರ ಅತ್ಯಂತ ಪ್ರಮುಖವಾದ ಆದರೆ ಹೆಚ್ಚು ಪ್ರಚಾರವಿಲ್ಲದೆ ಸಾಧನೆ.
- ಕರಾರುಕೂಲಿ ಭಾರತೀಯರು ಯಾವ ಶೋಚನೀಯ ಪರಿಸ್ಥಿತಿಯಲ್ಲಿ ಬದುಕಿದ್ದು ದುಡಿಯುತ್ತಿದ್ದರೋ ಅದನ್ನು ಗಾಂಧೀಜಿಯವರು ಮೊದಲು ಕಂಡದ್ದು ದಕ್ಷಿಣ ಆಫ್ರಿಕೆಯಲ್ಲಿ. ಅಲ್ಲದೇ ಅವರಿಗೆ ಮತದಾನದ ಹಕ್ಕು ಇರಲಿಲ್ಲ. ಪಾದಚಾರಿ ಪಥಗಳಲ್ಲಿ ಓಡಾಡುವಂತಿರಲಿಲ್ಲ. ರಾತ್ರಿ 09 ಗಂಟೆಯ ನಂತರ ಅವರು ಅಪ್ಪಣೆ ಇಲ್ಲದೆ ಹೊರಗೆಲ್ಲೂ ಹೋಗುವಂತಿರಲಿಲ್ಲ ಮತ್ತು ವಾರ್ಷಿಕ 03 ಪೌಂಡ್ ತಲೆಗಂದಾಯ ಕಟ್ಟಬೇಕಾಗಿತ್ತು.
- ಇದನ್ನೆಲ್ಲಾ ಅರಿತ ಗಾಂಧೀಜಿಯವರು ಅವರಿಗಾಗಿ ನೇಟಾಲ್ ಭಾರತೀಯ ಕಾಂಗ್ರೆಸ್ ನ್ನು ಸ್ಥಾಪಿಸಿದರು. (1894), ಫಿನಿಕ್ಸ್ ಮತ್ತು ಟಾಲ್ಸ್ ಸ್ಟಾಯ್ ಆಶ್ರಮಗಳನ್ನು ಕಟ್ಟಿದರು. (1903 ಮತ್ತು 1910) 'ಇಂಡಿಯನ್ ಓಪಿನಿಯನ್' ಪತ್ರಿಕೆ ಹೊರಡಿಸಿದರು. (1903) ಮತ್ತು ಸತ್ಯಾಗ್ರಹ ತಂತ್ರವನ್ನು ರೂಪಿಸಿದರು. (1906) ಅದರಿಂದ ಅವರು ನೇಟಾಲ್ ಮತ್ತು ಟ್ರಾನ್ಸ್ ವಾಲ್ ಸರ್ಕಾರಗಳಿಂದ ಕ್ರಮವಾಗಿ 1907 ಮತ್ತು 1914 ರಲ್ಲಿ ಅಲ್ಲಿನ ಭಾರತೀಯರಿಗೆ ಅನುಕೂಲವಾದ ಸಾಕಷ್ಟು ಸುಧಾರಣೆಗಳನ್ನು ಗಳಿಸಿದರು.
- 1896ರಲ್ಲಿ ಗಾಂಧೀಜಿಯವರು ಭಾರತಕ್ಕೆ ಬಂದಿದ್ದಾಗ ಭಾಷಣಗಳ ಮೂಲಕ ಹಾಗೂ ತಾವು ಬರೆದಿದ್ದ "ಹಸಿರು ಕರಪತ್ರಗಳ" ಮೂಲಕ ದಕ್ಷಿಣ ಆಫ್ರಿಕಾದ ಭಾರತೀಯರ ಸಂಕಷ್ಟಗಳನ್ನು ಪ್ರಕಟಪಡಿಸಿದರು. ಇದರ ಬಗ್ಗೆ ರಾಯಿಟರ್ಸ್ ನ ಒಂದು ವರದಿ ದಕ್ಷಿಣ ಆಫ್ರಿಕೆಗೆ ತಲುಪಿ, ಭಾರಿ ಅಲ್ಲೋಲ ಕಲ್ಲೋಲ ಉಂಟುಮಾಡಿತು. ಗಾಂಧೀಜಿಯವರು ಸಂಸಾರ ಸಮೇತ ಡರ್ಬಾನ್ ನಲ್ಲಿ ಇಳಿದಾಗ, ಬಿಳಿಯರ ದಂಡೊಂದು ಅವರ ಮೇಲೆ ಬಿದ್ದು ದೊಡ್ಡ ಹಲ್ಲೆ ಕೂಡಾ ಮಾಡಿತು. ಆಗ ಸ್ಥಳೀಯ ಪೊಲೀಸ್ ಅಧಿಕಾರಿಯ ಹೆಂಡತಿ ಅವರನ್ನು ಕಾಪಾಡಿದರು. ಇಲ್ಲವಾದರೆ ಗಾಂಧೀಜಿಯವರನ್ನು ಕೊಂದೇ ಬಿಡಲಾಗುತ್ತಿತ್ತು.
- 1901 ರಲ್ಲಿ ಗಾಂಧೀಜಿಯವರು ಮಾರಿಷಸ್ ನಲ್ಲಿ ಭಾರತೀಯರ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಅಲ್ಲಿಗೆ ಹೋದರು. 1912 ರಲ್ಲಿ ಫಿಜಿಯ ಭಾರತೀಯರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಗಾಂಧೀಜಿಯವರ ಸಹಾಯ ಕೋರಿದರು. ಆಗ ಅವರು ಮಣಿಲಾಲ ಡಾಕ್ಟರನ್ನು ಅಲ್ಲಿಗೆ ಹೋಗಲು ಹೇಳಿದರು ಮತ್ತು ತಾವು ಮಾರಿಷಸ್ ನಲ್ಲಿ ತಂಗಿದರು. ಈ ರೀತಿ ಗಾಂಧೀಜಿಯವರ ಪ್ರಯತ್ನದಿಂದಾಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಮಿತಿಯು ಕರಾರುಕೂಲಿ ಪದ್ಧತಿಯ ಕಾರ್ಮಿಕರ ಬಗ್ಗೆ ಗಮನ ಹರಿಸುವಂತಾಯಿತು. 1915 ರ ಅಧಿವೇಶನದಲ್ಲಿ ಕರಾರುಕೂಲಿ ಪದ್ಧತಿ ರದ್ದತಿಗೆ ಕರೆ ನೀಡಿತು.
- 1915 ರಲ್ಲಿ ಗಾಂಧೀಜಿಯವರು ಭಾರತಕ್ಕೆ ಹಿಂದಿರುಗಿದ ನಂತರ, ಅವರು ಚಾರ್ಲಿ ಗೆ ಫಿಜಿಗೆ ಹೋಗಿ ಅಲ್ಲಿನ ಭಾರತೀಯರ ಸ್ಥಿತಿಗತಿ ಬಗ್ಗೆ ವರದಿ ಮಾಡಬೇಕೆಂದು ಹೇಳಿದರು. ಆಂಡ್ರೂಸ್ ರ ವರದಿ ತುಂಬಾ ಖಾರವಾಗಿತ್ತು. ಇದನ್ನರಿತ ಗಾಂಧೀಜಿ ಯವರು ಜನವರಿ 1917ರಲ್ಲಿ ಕಲಕತ್ತೆಯ ಕಾಂಗ್ರೆಸ್ ನಲ್ಲಿ ಒಂದು ನಿರ್ಣಯವನ್ನು ಮಾಡಿದರು. "ಕರಾರು ಕೂಲಿ ಎಂದು ಹೆಸರು ಕೊಡಲಿ, ಅಥವಾ ಬೇರಾವ ಹೆಸರನ್ನಾದರೂ ಕೊಡಲಿ, ಆ ಪದ್ಧತಿಯನ್ನು ಸಂಪೂರ್ಣ ತೊಡೆದುಹಾಕದ ಹೊರತು ಕೂಲಿಕಾರರಿಗೆ ಸರಿಪಡಿಸಲಾಗದಂಥ ಹಾನಿ ಮಾಡಿರುವ ಆತಂಕಕಾರಿ ಪದ್ಧತಿ ಎಂದೇ ಎಲ್ಲರೂ ಒಪ್ಪಿರುವ ಆ ಪದ್ಧತಿಯ ಕೆಡಕುಗಳನ್ನು ತಡೆಯಲಾಗುವುದಿಲ್ಲ".
- ಹಾಗೆ ರದ್ದು ಮಾಡದಿದ್ದರೆ ಸಾಮೂಹಿಕವಾಗಿ ಅಹಿಂಸಾತ್ಮಕ ಶಾಸನಭಂಗ ಚಳವಳಿಯನ್ನು ಆರಂಭಿಸುವುದಾಗಿ ಗಾಂಧೀಜಿಯವರು ಘೋಷಿಸಿದರು.

- 1917ರ ಮಾರ್ಚ್ 20ರಂದು ವೈಸರಾಯ್ ಲಾರ್ಡ್ ಹಾರ್ಡಿಂಜ್ ರು ' ಕರಾರುಕೂಲಿ ' ಪದ್ಧತಿಯು ಕೊನೆಗೊಳ್ಳುತ್ತದೆ ಎಂದು ಪ್ರಕಟಿಸಿದರು. ಆದರೂ ಅದೇ ವರ್ಷ ಜೂನ್ ನಲ್ಲಿ ವಸಾಹತು ಕಚೇರಿ ಹೊಸದೊಂದು ಯೋಜನೆಯನ್ನು ಪ್ರಕಟಿಸಿತು. ಅದರ ಹೆಸರು "ಇಸ್ಲಿಂಗ್ಟನ್" ಸಹಾಯಕ ವಲಸೆ ಯೋಜನೆ. ಗಾಂಧೀಜಿಯವರು ಇದನ್ನೂ ಬಲವಾಗಿ ವಿರೋಧಿಸಿದರು.
- "ಇದೊಂದು ಹೊಸ ಬಗೆಯ ಕರಾರು ಕೂಲಿ ಪದ್ಧತಿ, ಕೂಲಿಗಳ ಹಿತದ್ದಲ್ಲ, ವಸಾಹತು ಮಾಲೀಕನ ಹಿತದ್ದು" ಎಂದರು. ಕಾಂಗ್ರೆಸ್ಸು ಇದನ್ನು ಅನುಮೋದಿಸಿತು. 1919 ಜನವರಿಯಲ್ಲಿ ಆ ಯೋಜನೆಯನ್ನು ಕೈ ಬಿಡಲು ವೈಸರಾಯ್ ಸೂಚಿಸಿದರು. ಅದನ್ನು ಕೈ ಬಿಡಲಾಯಿತು.
- ಬ್ರಿನ್ಸ್ ಲೇ ಸಮರೂ ಅವರು "ಮಹಾತ್ಮರ ಕೆರಿಬಿಯನ್ ಆಸಕ್ತಿಗಳು" (mahatma's Caribbean concern) ಎಂಬ ಪಾಂಡಿತ್ಯ ಪೂರ್ಣ ಲೇಖನದಲ್ಲಿ ಹೇಳುತ್ತಾರೆ, ಸೂರ್ಯ ಎಂದಿಗೂ ಮುಳುಗದೇ ಇದ್ದ ಸಾಮ್ರಾಜ್ಯದ ವಿರುದ್ಧ ಶಾಂತಿಯುತ ಸಂಗ್ರಾಮದಲ್ಲಿ ಗಾಂಧಿಯವರು ತೊಡಗಿದ್ದರೂ, ನಡು ನಡುವಿನ ಸಮಯದಲ್ಲಿ, ನೆಟಾಲ್, ಮಾರಿಷಸ್, ಫಿಜಿ ಮತ್ತು ಕೆರಿಬಿಯನ್ ತೋಟಗಳಲ್ಲಿ ದುಡಿಯುತ್ತಿದ್ದ ಹಾಗೂ ತಾತ್ಕಾಲಿಕವಾಗಿ ನಷ್ಟವೇ ಆಗಿ ಹೋಗಿದ್ದ ಕಾರ್ಮಿಕ ಪೀಳಿಗೆಗಳಿಗೂ ಗಮನವೀಯಲು ಸಮಯ ಮಾಡಿಕೊಳ್ಳುತ್ತಿದ್ದರು.
- ಸಲಹೆ ಹಾಗೂ ಅವರ ಪರ ಹೋರಾಟಗಳಿಂದ ಅವರು ಆ ಜನಕ್ಕೆ ದನಿಯಿತ್ತರು. ಅವರಲ್ಲಿ ಹೊಸ ಆಸೆ ಕೊನರಿಸಿದರು. ಆ ಜನ ಭಾರತದಿಂದ ಸಾಗಿಸಲ್ಪಟ್ಟ ಮೇಲೆ ಮತ್ತು ತೋಟದ ಕೆಲಸದ ಕಷ್ಟಗಳನ್ನು ಅನುಭವಿಸಿದ ಮೇಲೆ ಜರ್ಜರಿತರಾಗಿದ್ದರು. ಅವರ ಪುನರುಜ್ಜೀವನದಲ್ಲಿ ಗಾಂಧೀಜಿಯವರು ಕಾರಣರಾದರು. ಆದ್ದರಿಂದ ವೈವಿಧ್ಯಮಯ ಭಾರತೀಯರು ಅವರನ್ನೇ ತಮ್ಮದೇ ' ಮಹಾತ್ಮ ' ರನ್ನಾಗಿ ಮಾಡಿಕೊಂಡರು.
- 1837 ರಿಂದ 1917ರ ಅವಧಿಯಲ್ಲಿ ಕರಾರುಕೂಲಿ ಪದ್ಧತಿ ಚಾಲ್ತಿಯಲ್ಲಿದ್ದಾಗ, ಭಾರತದಿಂದ 11,94,957 ಭಾರತೀಯರನ್ನು 14 ದೂರ ದೂರದ ಬ್ರಿಟಿಷ್ ವಸಾಹತುಗಳಿಗೆ ಸಾಗಿಸಲಾಯಿತು ಎಂಬುದನ್ನು ನೆನಸಿಕೊಳ್ಳುವುದು ಸಂಗತಿ.
- ಆ ಪೈಕಿ ಅತಿ ಹೆಚ್ಚು ಸಂಖ್ಯೆಯಲ್ಲಿ ಸಾಗಿಸಿದ್ದು ಮಾರಿಷಸ್ (4,53,063), ಬ್ರಿಟಿಷ್ ಗಯಾನಾಗೆ (2,38,909), ನೆಟಾಲ್ ಗೆ (1,52,184) ಹಾಗೂ ಫಿಜಿಗೆ (60,965)

(ಸೌಜನ್ಯ : ನಜರತ್ ಅವರ ಅಮೋಘ ನಾಯಕ ಗಾಂಧಿ ಪುಸ್ತಕ) ■



No. 2039-2498 II

GOVERNMENT OF THE CENTRAL PROVINCES AND BERAR
GENERAL ADMINISTRATION DEPARTMENT.

MEMORANDUM

To

The Registrar, High Court of Judicature, Nagpur.
All Commissioners of Divisions.
The Commissioner of Settlements and Director of Land Records.
The Chief Engineer, Public Works Department.
The Legal Remembrancer to Government.
The Chief Conservator of Forests.
The Inspector-General of Civil Hospitals.
The Director of Public Instruction.
The Inspector-General of Police.
The Inspector-General of Prisons.
The Director of Veterinary Services.
All Deputy Commissioners.
All Superintending Engineers.
All Conservators of Forests.
The Director of Public Health.
The Director of Industries.
The Registrar, Co-operative Societies.
The Commissioner of Excise, etc.
The Superintendent, Government Printing.
All Secretaries to Government.
The Secretary to His Excellency the Governor.
The Military Secretary to His Excellency the Governor.
The Registrar, Civil Secretariat.
All Departments of the Secretariat.
The Publicity Officer.

Nagpur, the 2nd September 1938.

In future Mr. Gandhi should be referred to in all correspondence as "Mahatma Gandhi".

Secy. to Govt., C. P. & Berar,
General Administration Department.

ಮೋಹನ್ ದಾಸ್ ಕರಮ್ ಚಂದ್ ಗಾಂಧಿಯನ್ನು ಇಡೀ ಜಗತ್ತು "ಮಹಾತ್ಮ ಗಾಂಧಿ" ಎಂದು ಕರೆದು ಗೌರವಿಸುತ್ತದೆ.

ಅವರನ್ನು ಇನ್ನು ಮುಂದೆ "ಮಹಾತ್ಮ ಗಾಂಧಿ" ಎಂದು ಸಂಬೋಧಿಸಬೇಕೆಂದು 1938 ರಲ್ಲಿಯೇ ಬ್ರಿಟಿಷ್ ಸರಕಾರ ಅಧಿಕಾರಿಗಳಿಗೆ ಅಂದಿನ ಸೆಂಟ್ರಲ್ ಪ್ರಾವಿನ್ಸ್ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಇದು ವಿಶೇಷವಾಗಿದೆ.ಆ ಗೌರವ ಬಿರುದಿನ ಕುರಿತು ಒಂದಿಷ್ಟು ಮಾಹಿತಿ ತಿಳಿದುಕೊಳ್ಳೋಣ.

1915ನೇ ಇಸ್ವಿ ಮಾರ್ಚ್ 6 ರಂದು ಗುರುದೇವ ಟ್ಯಾಗೋರ್ ರು ಗಾಂಧಿಯನ್ನು ಮಹಾತ್ಮ ಎಂದು ಕರೆದು ಗೌರವಿಸಿದ್ದರು.

ತಮ್ಮ ಶಾಂತಿ ನಿಕೇತನದಲ್ಲಿ ಹೃದಯ ಸ್ಪರ್ಶಿಯಾಗಿ ಸತ್ಕರಿಸಿದ್ದರು.

ಅದಕ್ಕಿಂತ ಮೊದಲು ಅಂದರೆ 1913ರಲ್ಲಿಯೇ ಸತ್ಯಾಗ್ರಹಿ ಗಾಂಧಿ ಸೌತ್ ಆಫ್ರಿಕೆಯ ವಾಕ್ ರಸ್ಟ್ ಜೈಲಿನಲ್ಲಿರುವಾಗ ಮಹಾತ್ಮ ಆಗಿದ್ದು.

ಬಾಪೂಜಿಯ ಅಹಿಂಸಾ ತತ್ವ ಸಾತ್ವಿಕ ಹೋರಾಟ, ಸತ್ಯದ ನುಡಿ, ಅದರಂತೆ ನಡೆದ ತ್ಯಾಗಮಯಿ ಜೀವನ ಇದೆಲ್ಲವನ್ನು ಗಮನಿಸುತ್ತಿದ್ದ ಇಂಗ್ಲಿಷ್ ಪತ್ರಕರ್ತನೊಬ್ಬ ಸಂದರ್ಶನ ಮಾಡಿ ತನ್ನ ಪತ್ರಿಕೆಯಲ್ಲಿ ' ಗಾಂಧಿ ದ ಗ್ರೇಟ್ ಸೋಲ್ ' ಎಂದು ಲೇಖನ ಬರೆದರು.

ಇದಾದ ನಂತರ ಮುಂದೆ ಇಂಡಿಯಾದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ಹೆಸರಿಸಿದ ' ಮಹಾತ್ಮ' ಎನ್ನುವ ಗೌರವ ಬಿರುದನ್ನೇ ಇಂದು ಇಡೀ ಜಗತ್ತು ಅಂಗೀಕರಿಸಿ ಗೌರವಿಸುತ್ತಿದೆ.





ಕರ್ನಾಟಕದ ಕಸ್ತೂರ ಬಾ ಗಾಂಧಿ

ಯಶೋಧರಾ ದಾಸಪ್ಪ

–ಬನ್ನೂರು ಕೆ.ರಾಜು

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪಾತ್ರ ಅತ್ಯಂತ ಪ್ರಮುಖವಾದದ್ದು. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯ, ಅಧಿಕಾರಶಾಹಿಯ ವಿರುದ್ಧ ಸತ್ಯ, ಅಹಿಂಸೆ, ಹಾಗೂ ಅಸಹಕಾರದ ಮೂಲ ಮಂತ್ರಗಳನ್ನು ಉಸಿರಾಗಿಸಿಕೊಂಡು ಅನೇಕ ರೀತಿಯ ವಿಶಿಷ್ಟವಾದ ಜನಾಕರ್ಷಣೀಯ ಚಳವಳಿಗಳನ್ನು ರೂಪಿಸಿ ಹಿರಿಯರು, ಕಿರಿಯರು, ಬಡವರು, ಬಲ್ಲಿದರು, ಹೆಣ್ಣು, ಗಂಡುಗಳೆಂಬ ಭೇದ ಭಾವವಿಲ್ಲದೆ ಅಬಾಲವೃದ್ಧರಾಧಿಯಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಈ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ಸಮಸ್ತ ಭಾರತೀಯರನ್ನೂ ಜೊತೆ ಜೊತೆಯಲಿ ಕಿಂದರಿ ಜೋಗಿಯಂತೆ ಕರೆದೊಯ್ದವರು ಮಹಾತ್ಮ ಗಾಂಧೀಜಿ. ಹಾಗಾಗಿ ಭಾರತದ ಚರಿತ್ರೆಯಲ್ಲಿ 1919ರಿಂದ 1947ರ ವರೆಗಿನ ಕಾಲಘಟ್ಟವನ್ನು 'ಗಾಂಧಿಯುಗ' ಎಂದೇ ಕರೆಯಲಾಗುತ್ತದೆ.



ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಮಹಾ ಸಂಗ್ರಾಮದ ಹಾದಿಯಲ್ಲಿ ಒಟ್ಟಾಗಿ ಹೆಜ್ಜೆ ಹಾಕಿದವರು ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಭಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್, ಸರೋಜಿನಿ ನಾಯ್ಡು ಕಮಲಾದೇವಿ ಚಟ್ಟೋಪಾಧ್ಯಾಯ ಸೇರಿದಂತೆ ಸಹಸ್ರ ಸಹಸ್ರ ಮಂದಿ ನೇತಾರರು. ಇವರೆಲ್ಲರ ಜೊತೆ ಮಹಾತ್ಮ ಗಾಂಧೀಜಿಯ ವೈಯಕ್ತಿಕ ಜೀವನದಲ್ಲಿ ಜೀವದಾತೆಯಂತೆ ಹೆಚ್ಚಿನ ಪ್ರಭಾವ ಬೀರಿದವರು ಅವರ ಮಡದಿ ಕಸ್ತೂರಬಾ ಗಾಂಧಿ. ಇವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಮಡದಿಯಷ್ಟೇ ಆಗಿರಲಿಲ್ಲ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದ ವೀರ ಸೇನಾನಿಯೂ ಹೌದು. ಗಾಂಧಿ ಸೇವಾಗ್ರಾಮದ ಆಶ್ರಮದಲ್ಲಿದ್ದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಂತೆ ನಿಂತು ದೇಶಕ್ಕಾಗಿ ಪತಿಯೊಡನೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಕರ್ಮಯೋಗಿ ಎಂದೇ ಹೆಸರಾಗಿದ್ದವರು. ಇಂತಹ ಮಹಾಚೇತನ ಗಾಂಧಿಪತ್ನಿ ಕಸ್ತೂರಬಾ ಗಾಂಧಿಯ ನಿಕಟವರ್ತಿಯಾಗಿ ಅವರ ಪ್ರಭಾವಲಯದಲ್ಲಿದ್ದ ಅಪ್ಪಟ ಗಾಂಧಿವಾದಿ ಯಶೋಧರಾ ದಾಸಪ್ಪನವರು ಕರ್ನಾಟಕದ ಕಸ್ತೂರಬಾ ಗಾಂಧಿ ಎಂದೇ ನಾಡಿನ ಉದ್ದಗಲಕ್ಕೂ ಪ್ರಸಿದ್ಧರು. ಅನೇಕ ವಿಚಾರ, ವಿಷಯಗಳಲ್ಲಿ ಗಾಂಧೀಜಿ – ಕಸ್ತೂರ ಬಾ ದಂಪತಿ ಮತ್ತು ಹೆಚ್.ಸಿ.ದಾಸಪ್ಪ– ಯಶೋಧರ ದಂಪತಿಗಳಿಗೂ ಬಹಳ ಸಾಮ್ಯತೆಗಳುಂಟು.

ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗು ಕರ್ನಾಟಕ ಏಕೀಕರಣ ಹೋರಾಟಗಾರ್ತಿಯಾಗಿ, ಗಾಂಧೀ ಮಾರ್ಗದಲ್ಲಿ ನಡೆದು ಸಮಾಜ ಸೇವಕಿಯಾಗಿ ಮತ್ತು ಕರ್ನಾಟಕ ರಾಜ್ಯದ ಮೊದಲ ಮಹಿಳಾ ಮಂತ್ರಿಯಾಗಿ ಸೇವೆ ಸಲ್ಲಿಸಿದವರು ಯಶೋಧರಾ ದಾಸಪ್ಪ. ಅವರು 1905ರ ಮೇ 28ರಂದು ಬೆಂಗಳೂರಿನಲ್ಲಿ ಜನಿಸಿದರು. ಜನಸೇವೆಯೇ ಜನಾರ್ದನನ ಸೇವೆಯೆಂದು ನಂಬಿದ್ದ ಹಾಗೆಯೇ ನಡೆದು ಕೊಳ್ಳುತ್ತಿದ್ದ ಎಲ್ಲರ ಪಾಲಿನ ಆಪದ್ಬಾಂಧವ ಕುಟುಂಬವಾಗಿ ಖ್ಯಾತಿಗಳಿಸಿದ್ದ ದೊಡ್ಡ ಬಳ್ಳಾಪುರ ತಾಲೂಕಿನ ಕಲ್ಲುದೇವನಹಳ್ಳಿಯ ಚಿಕ್ಕಣ್ಣೇಗೌಡರ ವಂಶದ ಕುಡಿ ಇವರು. ತಂದೆ ಮೈಸೂರು ಮಹಾರಾಜರ ಒಡನಾಡಿಯಾಗಿ ರಾಜರಂತೆಯೇ ಇದ್ದು ಜನಸೇವಕರಾಗಿದ್ದ ಸುಪ್ರಸಿದ್ಧ ಸಮಾಜ ಸೇವಕರಾದ ಕೆ.ಎಚ್. ರಾಮಯ್ಯ ಹಾಗು ತಾಯಿ ಸುಸಂಸ್ಕೃತ ಮನೆತನದ ರೇವಮ್ಮ. ಇವರ ಸುಪುತ್ರಿಯೇ ಯಶೋಧರಾ ದಾಸಪ್ಪ. ಬುದ್ದನ ಮಾನವೀಯ ಚಿಂತನೆಗಳ ಮೇರು ವ್ಯಕ್ತಿತ್ವದ ಕೆ.ಹೆಚ್. ರಾಮಯ್ಯ ದಂಪತಿ ತಮ್ಮ ಸುಪುತ್ರಿಗೆ ಪ್ರೀತಿಯಿಂದ ಇಟ್ಟ ಹೆಸರು ಯಶೋಧರೆ. ಇದು ಭಗವಾನ್ ಬುದ್ದ ದೇವನ ಆದರ್ಶ ಪತ್ನಿಯ ಹೆಸರು. ಬಹುಶಃ ಆ ದಿನಗಳಲ್ಲಿ ಇಂಥ ಹೆಸರನ್ನು ಅಷ್ಟಾಗಿ ಯಾರೂ ಇಡುತ್ತಿರಲಿಲ್ಲ. ಈಗಲೂ ಅಷ್ಟೆ, ಇದೊಂದು ಅಪರೂಪದ ನಾಮಾಂಕಿತ. ಬುದ್ದನ ಮಾನವೀಯ ತತ್ವಾನುಸಾರಿ ಕೆ.ಹೆಚ್.ರಾಮಯ್ಯ ದಂಪತಿಗಳ ಬುದ್ಧ ಮತ್ತು ಯಶೋಧರೆಯ ತತ್ವಾದರ್ಶಗಳ ಸಂಕೇತವಿದು. ಯಶೋಧರಾ ದಾಸಪ್ಪ ಅವರು ಚಿನ್ನದ ಚಮಚವನ್ನು ಬಾಯಲ್ಲಿಟ್ಟು ಕೊಂಡು ಬಂದವರೆನ್ನುತ್ತಾರಲ್ಲ ಹಾಗೆ

ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಓರ್ವ ಸಾಮಾನ್ಯ ಸಾಮಾಜಿಕ ಕಾರ್ಯಕರ್ತೆಯಾಗಿ, ಜನಸೇವಕಿಯಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸೇರಲು ನಿರ್ಧರಿಸಿದರು. ಸೇರಿದವರೇ ಹೋರಾಟದ ಕೆಚ್ಚನ್ನು ,ಕಿಚ್ಚನ್ನು ಇನ್ನಷ್ಟು ಹೆಚ್ಚಿಸಿ ಮಹಾತ್ಮಾ ಗಾಂಧಿಯವರ ಮಡದಿ ಕಸ್ತೂರ ಬಾ ಅವರಂತೆಯೇ ಸ್ವಾತಂತ್ರ್ಯ ಚಳವಳಿಗೆ ಶಕ್ತಿ ತುಂಬಿದರು.

ಯಶೋಧರ ದಾಸಪ್ಪ ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ದಿನದಿಂದ ದಿನಕ್ಕೆ ಸಕ್ರಿಯರಾಗುತ್ತಾ ಹೋದರು.ಇವರು ಕೆಚ್ಚಿನಿಂದ ಪಾಲ್ಗೊಂಡಿದ್ದ 1930ರ ಅರಣ್ಯ ಸತ್ಯಾಗ್ರಹ ಚಳವಳಿಯಲ್ಲಿ 1200ಕ್ಕೂ ಹೆಚ್ಚು ಜನ ಸೆರೆವಾಸಕ್ಕೆ ಸೇರಿದರು. 1938ರ ವಿದುರಾಶ್ವತ್ಥ ಚಳವಳಿಯಲ್ಲಿ 35 ಮಂದಿ ಪೊಲೀಸ್ ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದರು. ಈ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಇವರೂ ಸಹ ಕಠಿಣವಾದ ಸೆರೆವಾಸ ಅನುಭವಿಸಿದ್ದರು.

ಯಶೋಧರಾ ಅವರ ಮನೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದ ಭೂಗತ ಸತ್ಯಾಗ್ರಹಿಗಳ ಚಟುವಟಿಕೆಯ ಕೇಂದ್ರವಾಗಿತ್ತು. ಸ್ವಾತಂತ್ರ್ಯ ಆಂದೋಲನಕಾರರ ಮೇಲೆ ಕ್ರೂರ ಕಾರ್ಯಾಚರಣೆಗಳಿಗೆ ಕುಖ್ಯಾತನಾಗಿದ್ದ

ಹ್ಯಾಮಿಲ್ಟನ್ ಹೆಸರನ್ನು ಕಟ್ಟಡವೊಂದಕ್ಕೆ ಇಡಲು ಸರ್ಕಾರ ನಿರ್ಧರಿಸಿದಾಗ ಯಶೋಧರಾ ಅವರು ಸರ್ಕಾರದ ವಿರುದ್ಧ ಅನೇಕ ಆಕ್ರಮಣಕಾರಿ ಭಾಷಣಗಳನ್ನು ಮಾಡಿ ಪ್ರತಿಭಟಿಸಿದರು. ಯಶೋಧರಾ ದಾಸಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಎಸ್.ಆರ್.ಕಂಠಿ ಮತ್ತು ಎಸ್.ನಿಜಲಿಂಗಪ್ಪ ಅವರ ಸಂಪುಟಗಳಲ್ಲಿ ಸಚಿವೆಯಾಗಿ ದಕ್ಷತೆ ಮೆರೆದಿದ್ದರು. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಹಿರಿಯ ಸಚಿವೆಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಪಾನನಿರೋದದ ಕುರಿತಾಗಿದ್ದ ಆಜ್ಞೆಯನ್ನು ತೆರವುಗೊಳಿಸಿದ್ದನ್ನು ವಿರೋಧಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಆ ಕಾಲದಲ್ಲಿ ಬಹು ದೊಡ್ಡ ಸುದ್ದಿಯಾಗಿ ನಾಡಿನಾದ್ಯಂತ ಮಾರ್ದನಿಸಿತ್ತು. ಯಶೋಧರಾ ಅವರು ಖ್ಯಾತ ವಕೀಲರೂ ಹಾಗೂ ಜವಾಹರಲಾಲ್ ನೆಹರು ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದ ಎಚ್.ಸಿ.ದಾಸಪ್ಪ ಅವರನ್ನು 1926ರಲ್ಲಿವಿವಾಹವಾಗಿದ್ದರು. ಈ ದಂಪತಿಗಳ ಕಿರಿಯ ಪುತ್ರ ತುಳಸಿದಾಸ್ ದಾಸಪ್ಪ ಅವರು ಚರಣ್ ಸಿಂಗ್ ಅವರ ಕೇಂದ್ರ ಸಂಪುಟದಲ್ಲಿ ರಾಜ್ಯ ಸಚಿವರಾಗಿದ್ದರು. ಇವರು ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿ ಹ್ಯಾಟ್ರಿಕ್ ಬಾರಿಸಿ ದಾಖಲೆ ಬರೆದಿದ್ದಾರೆ. ಇವತ್ತಿಗೂ ಈ ದಾಖಲೆ ತುಳಸಿದಾಸ್ ದಾಸಪ್ಪನವರ ಹೆಸರಿನಲ್ಲೇ ಇದೆ!

ಸ್ವಾತಂತ್ರ್ಯ ಹೋರಾಟದಲ್ಲಿ : ಯಶೋಧರಾ ದಾಸಪ್ಪ ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು 1930 ರ ದಶಕದಲ್ಲಿ ನಡೆದ ಅರಣ್ಯ ಸತ್ಯಾಗ್ರಹ ಚಳವಳಿಯಂತಹ ಹಲವಾರು ಸಾಮಾಜಿಕ ಹೋರಾಟಗಳಲ್ಲಿ ಭಾಗವಹಿಸಿದರು, ಇದರಲ್ಲಿ 1200 ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಸಕ್ರಿಯ ಸಾಮಾಜಿಕ ಕಾರ್ಯಕರ್ತೆ ಮತ್ತು ಧೀರ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಅವರು ಚಳವಳಿಯಲ್ಲಿ ಭಾಗವಹಿಸಲು ಸಹಸ್ರಾರು ಮಹಿಳೆಯರನ್ನು ಉತ್ತೇಜಿಸಿದರು. ಏಪ್ರಿಲ್ 25, 1938 ರಂದು, ವಿದುರಾಶ್ವಥದಲ್ಲಿ ಗ್ರಾಮಸ್ಥರು ಸತ್ಯಾಗ್ರಹವನ್ನು ಆಯೋಜಿಸಿದರು, ಈ ಸಂದರ್ಭದಲ್ಲಿ ಪೊಲೀಸರು ಅವರ ಮೇಲೆ ಗುಂಡು ಹಾರಿಸಿ ಸುಮಾರು 35 ಜನರನ್ನು ಕೊಂದರು. ಈ ಘಟನೆಯ ನಂತರ ಯಶೋಧರಾ ದಾಸಪ್ಪರನ್ನು ಜೈಲಿಗೆ ಹಾಕಲಾಗಿತ್ತು. ಅವರ ಮನೆಯು ಒಂದು ರೀತಿ ಭೂಗತ ಸತ್ಯಾಗ್ರಹಿ ಚಟುವಟಿಕೆಯ ಕೇಂದ್ರವಾಗಿತ್ತು. ಸ್ವಾತಂತ್ರ್ಯಕ್ಕಾಗಿ ಆಂದೋಲನ ನಡೆಸುತ್ತಿರುವ ಪ್ರತಿಭಟನಾಕಾರರ ವಿರುದ್ಧದ ಕ್ರೂರತೆಗೆ ಹೆಸರುವಾಸಿಯಾದ ಹ್ಯಾಮಿಲ್ಟನ್ ಅವರ ಹೆಸರನ್ನು ಕಟ್ಟಡಕ್ಕೆ ಹೆಸರಿಸಲು ನಿರ್ಧರಿಸಿದಾಗ ಅವರು ಸರ್ಕಾರದ ವಿರುದ್ಧ ಅನೇಕ ಆಕ್ರಮಣಕಾರಿ ಭಾಷಣಗಳನ್ನು ಮಾಡಿ ಜನರಲ್ಲಿ ಜಾಗೃತಿಯ ಕಿಚ್ಚು ಮೂಡಿಸಿದ್ದರು. ಈ ದಿಸೆಯಲ್ಲಿ ಸ್ವತಃ ಬಹಳಷ್ಟು ಬರಹಗಳನ್ನೂ ಬರೆದು ಅಕ್ಷರ ಕ್ರಾಂತಿಯನ್ನೂ ಮಾಡಿದರು. ಇಂತಹ ಧೀರೋದ್ದಾತ ಸ್ವಾತಂತ್ರ್ಯಜ್ಯೋತಿ ಯಶೋಧರ ದಾಸಪ್ಪ 1980 ಜೂನ್ 20 ರಂದು ದೇಶಕ್ಕಾಗಿ ಉಸಿರು ಬಿಟ್ಟು ನಂದಿ ಹೋಯಿತು. ಇವರ ಸೇವೆ ಮತ್ತು ಸಾಧನೆಗಾಗಿ 1972 ರಲ್ಲಿ, ಅವರಿಗೆ ಭಾರತ ಸರ್ಕಾರವು ತನ್ನ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯ ಗೌರವವಾದ 'ಪದ್ಮಭೂಷಣ' ವನ್ನು ನೀಡಿತು. ಅವರು ಕರ್ನಾಟಕದಲ್ಲಿ ಕ್ಯಾಬಿನೆಟ್ ಸಚಿವರಾದ ಮೊದಲ ಮಹಿಳೆ ಯಾಗಿ ಜನಪರ ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ವಿಶೇಷವಾಗಿ ಸ್ತ್ರೀಪರ ಕಾಳಜಿಯಿಂದ ಯೋಜನಾಬದ್ಧ ವಾಗಿ ಬದ್ದತೆಯಿಂದ ಕೆಲಸ ಮಾಡಿದವರು.ಒಟ್ಟಾರೆ ಜನಪರ ಕಾಳಜಿಯ ದಿಟ್ಟ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ವಿಪರ್ಯಾಸವೆಂದರೆ ಗಾಂಧಿ ತತ್ವಕ್ಕೆ ಮಾರು ಹೋಗಿದ್ದ ಯಶೋದರ ದಾಸಪ್ಪ ದಂಪತಿಗಳು ಸ್ವಾತಂತ್ರ್ಯ ಹಾಗೂ ದೇಶ ಸೇವೆಯ ಬಗ್ಗೆ ಜನ ಜಾಗೃತಿ ಮೂಡಿಸುತ್ತಿದ್ದ ಇವರ ಪ್ರಾಮಾಣಿಕ ಸಮಾಜ ಸೇವೆ ಹಾಗು ದೇಶ ಸೇವೆಯ ಕೆಲಸಕ್ಕೆ ಬ್ರಿಟೀಷ್ ಸರ್ಕಾರ ರಾಜದ್ರೋಹದ ಪಟ್ಟವನ್ನೂ ಕಟ್ಟಿದ್ದರು.ಒಮ್ಮೆ ಯಶೋಧರ ದಾಸಪ್ಪ ದಂಪತಿಗಳು ಗಾಂಧಿ ಸೇವಾ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ದಲಿತ ಸಮುದಾಯದ ಅನಾಥ ಮಗುವೊಂದನ್ನು ಪೋಷಣೆಗೆ ಇವರಿಗೆ ನೀಡುತ್ತಾರೆ. ಅದನ್ನು ಪ್ರಸಾದವೆಂಬಂತೆ ಸ್ವೀಕರಿಸುವ ದಂಪತಿಗಳು ತಮ್ಮ ಎರಡು ಮಕ್ಕಳ ಜತೆ ಮೂರನೆಯವ ರಾಗಿ ಮಗುವನ್ನು ಸಾಕಿ ಸಲಹಿ ಪ್ರಾಯಕ್ಕೆ ಬಂದಾಗ ಮದುವೆ ಮಾಡುತ್ತಾರೆ.ತಮ್ಮ ಆಸ್ತಿಯನ್ನು ಸಹ ಕೊಟ್ಟ ಧೀಮಂತ ವ್ಯಕ್ತಿತ್ವ ದಾಸಪ್ಪ ದಂಪತಿಗಳದು. 1964 ರಲ್ಲಿ ದಾಸಪ್ಪನವರು ಹೃದಯಾಘಾತದಿಂದ ನಿಧನ ಹೊಂದುತ್ತಾರೆ. ನಂತರದ ದಿನಗಳಲ್ಲಿ ಪತಿಯ ಆಶಯದಂತೆ ನಾಡಿಗಾಗಿ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡು ಸೇವಾ ಪಥ ದಲ್ಲಿ ಮುಂದುವರಿದು ನೊಂದವರ ಕಂಬನಿವರೆಸುವ ಕೈಗಳಾಗುತ್ತಾರೆ.

ಮಂತ್ರಿಯಾಗಿ ಯಶೋದರಾ ದಾಸಪ್ಪ: 1962 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಮೈಸೂರು ರಾಜ್ಯದ ವಿಧಾನಸಭೆಗೆ ಸರಿ ಸುಮಾರು 11,498 ಮತಗಳ ಅಂತರದಿಂದ ಆಯ್ಕೆಗೊಂಡು ಪ್ರಥಮವಾಗಿ ಪಾದಾರ್ಪಣೆ ಮಾಡುತ್ತಾರೆ. ಯಶೋದರಾ ದಾಸಪ್ಪ ನವರು ಎಸ್. ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿರುತ್ತಾರೆ. ಮುಖ್ಯ ಮಂತ್ರಿ ಎಸ್ ನಿಜಲಿಂಗಪ್ಪ ಅವರು ಪಾನನಿರೋಧ ಕಾಯ್ದೆ ವಾಪಸ್ ಪಡೆಯುವ ವಿಷಯದಲ್ಲಿ ಅನುಮೋದನೆ ಪಡೆಯಲು 1969 ರಲ್ಲಿ ಒಮ್ಮೆ ಮಂತ್ರಿಮಂಡಲದ ಸಭೆ ಕರೆದಿದ್ದರು. ಈ ಸಂದರ್ಭದಲ್ಲಿ ಕಳ್ಳ ಬಟ್ಟಿಯಿಂದ ನೊಂದವರ ಕಣ್ಣು ಮತ್ತು ಕಿವಿಗಳೆರಡೂ ಆಗಿದ್ದ ಯಶೋಧರ ದಾಸಪ್ಪ ಅವರು ಇದನ್ನು ಪ್ರಬಲವಾಗಿ ವಿರೋಧಿಸಿದ್ದರು. ಚುನಾವಣೆಗೂ ಮುನ್ನ ಗಾಂಧಿ ಕರೆಗೆ ಹೋಗೊಟ್ಟು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರ ಕಡಿಯುವ ಚಳವಳಿಯಲ್ಲಿ ಭಾಗವಹಿಸಿದ್ದ ನಿಜಲಿಂಗಪ್ಪನವರು ಅಧಿಕಾರ ಬಂದಾಗ ಅವರು ಬದಲಾದ ಪರಿ ಕಂಡು ಯಶೋಧರಾ ದಾಸಪ್ಪನವರು ಅಕ್ಷರಶಃ ಕೆಂಡಾಮಂಡಲರಾಗುತ್ತಾರೆ. ಬದ್ಧತೆಗೆ ಹೆಸರಾದ ಮಹಾ ಸ್ವಾಭಿಮಾನಿಯಾದ ಅವರು ಒಂದು ಕ್ಷಣವೂ ಅಲ್ಲಿರದೆ ತಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಹೇಳಿ ಸ್ವಂತ ಕಾರಿನಲ್ಲಿ ಮಂತ್ರಿ ಮಂಡಲ ಸಭೆಗೆ ಹೋಗಿ ರಾಜೀನಾಮೆ ನೀಡಿ ಬರುತ್ತಾರೆ.


ನೊಂದು ಬೆಂದವರಿಗಾಗಿ, ಸಾಮಾಜಿಕ ಸುಧಾರಣೆಗಾಗಿ ಅರಸೀಕೆರೆಯಲ್ಲಿ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿರ್ಮಾಣ ಮಾಡಿ ಉಳಿದ ಜೀವಿತಾವಧಿಯನ್ನು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡು ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

(ಮೇ 28, ಕರ್ನಾಟಕದ ಕಸ್ತೂರ ಬಾ ಗಾಂಧಿ ಎಂದೇ ಕರೆಯಲಾಗುವ ಯಶೋಧರಾ ದಾಸಪ್ಪ ಅವರ ಜನ್ಮ ದಿನೋತ್ಸವ)

ಸರ್ವೋದಯ ಸತ್ಯನಾರಾಯಣ...

–ಸಾಧನಾ ಸತ್ಯನಾರಾಯಣ





ಸರ್ವೋದಯವೆಂದರೆ ಸರ್ವರ ಉದಯ. ಸರ್ವೋದಯ ಮಹಾತ್ಮ ಗಾಂಧೀಜಿಯವರಿಗೆ ಬಹಳ ಪ್ರಿಯವಾದ ವಿಷಯವಾಗಿತ್ತು . ತಮ್ಮ ಸಂಪರ್ಕಕ್ಕೆ ಬಂದ ಸಾವಿರಾರು ಜನರನ್ನು ಸರ್ವೋದಯ ಕಾರ್ಯಕರ್ತರೆಂದು ಗುರುತಿಸಿ ಅವರಿಗೆ ಸಮಾಜ ಸೇವೆಯಲ್ಲಿ ಮುಳುಗಿ ಹೋಗಬೇಕೆಂದು ಗಾಂಧೀಜಿ ದೀಕ್ಷೆ ನೀಡುತ್ತಿದ್ದರು . ಒಂದು ಕಾಲಕ್ಕೆ ಇಂಥ ಸಾವಿರಾರು ಸರ್ವೋದಯ ಕಾರ್ಯಕರ್ತರ ಬಳಗವೇ ದೇಶಾದ್ಯಂತ ಇತ್ತು . ಇದಕ್ಕೆ ಮೈಸೂರು ರಾಜ್ಯ ಕೂಡಾ ಹೊರತಾಗಿಲ್ಲ. ಇಲ್ಲಿಯೂ ನೂರಾರು ಸರ್ವೋದಯ ಕಾರ್ಯಕರ್ತರಿದ್ದರು .

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲ ಅದೊಂದು ಸೇವಾಯುಗ . ಗಾಂಧೀಜಿಯ ಆದರ್ಶಗಳನ್ನು ಅಪ್ಪಿಕೊಂಡ ಸಾವಿರಾರು ಕಾರ್ಯಕರ್ತರು ತಮ್ಮ ಇಡೀ ಬದುಕನ್ನು ಸರ್ವೋದಯ ಕಾರ್ಯಗಳಿಗೆ ಅರ್ಪಿಸಿಕೊಂಡ ಹಲವಾರು ಉದಾಹರಣೆಗಳಿವೆ . ಸರ್ವೋದಯ ಸತ್ಯನಾರಾಯಣ ಇಂಥ ಸರ್ವೋದಯ ಕಾರ್ಯಕರ್ತರಲ್ಲಿ ಒಬ್ಬರು .

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ತಗಡೂರು ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡ ಹೆಸರು . ತಗಡೂರು ರಾಮಚಂದ್ರ ರಾಯರು ಹೆಸರಾಂತ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು . ಇಂಥ ತಗಡೂರು ಗ್ರಾಮದಲ್ಲಿ ಗಣಪತಯ್ಯ ಮತ್ತು ಕೃಷ್ಣಮ್ಮನವರ ನಾಲ್ಕನೇ ಕೂಸಾಗಿ 1931 ರಲ್ಲಿ ಜನಿಸಿದವರೇ ಟಿ.ಜಿ. ಸತ್ಯನಾರಾಯಣ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಅಣ್ಣಂದಿರ ಆರೈಕೆಯಲ್ಲಿ ಬೆಳೆದರು .ಅವರ ಕುಟುಂಬ ಕಷ್ಟಗಳ ಹಾದಿಯಲ್ಲೇ



ಸಾಗುತ್ತಿತ್ತು . ಆದರೆ ಹಳೆಯ ಪೀಳಿಗೆಯ ಜನರು ಈಗಿನಂತೆ ಕಷ್ಟಗಳಿಗೆ ಹೆದರುತ್ತಿರಲಿಲ್ಲ. ಕಷ್ಟವನ್ನೇ ಮೆಟ್ಟಿಲಾಗಿಸಿಕೊಂಡು ಯಶಸ್ಸಿನ ಶಿಖರವನ್ನು ಏರುತಿದ್ದರು.

ಸತ್ಯನಾರಾಯಣರ ಬಾಲ್ಯವು ಬಹಳ ಕಷ್ಟದಲ್ಲಿಯೇ ಕಳೆಯಿತು . ತಗಡೂರಿನಲ್ಲಿ ಬಾಲ್ಯಾವಸ್ಥೆ ಕಳೆದು ಅವರು ಬೆಂಗಳೂರಿಗೆ ಬಂದರು. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು . ಹೆಚ್ಚಿನ ಓದಿಗಿಂತಲೂ ಅವರಿಗೆ ಉದ್ಯೋಗವೇ ಆದ್ಯತೆಯಾಗಿತ್ತು . ಗ್ರಾಮೋದ್ಯೋಗ ದೊರಕಿಸುವ ' ನಯಿ ತಾಲೀಮ್ ' ತರಬೇತಿ ಶಿಕ್ಷಣಕ್ಕಾಗಿ ಹದಿನಾರನೇ ವಯಸ್ಸಿಗೆ ವಾರ್ಧಾದ (ಮಹಾರಾಷ್ಟ್ರ) ಮಗನವಾಡಿಗೆ ಸೇರಿದರು. ' ನಯೀ ತಾಲೀಮ್ ' ಗಾಂಧೀಜಿಯವರು ಯುವಕರಿಗಾಗಿ ಸ್ಥಾಪಿಸಿದ್ದ ಹೊಸ ಶಿಕ್ಷಣ ಪದ್ಧತಿ . ಇಲ್ಲಿಗೆ ಶಿಕ್ಷಣಕ್ಕಾಗಿ ಸೇರಿದವರಿಗೆ ಸ್ವಾವಲಂಬನೆಯ ಶಿಕ್ಷಣ ನೀಡಲಾಗುತ್ತಿತ್ತು . ಸತ್ಯನಾರಾಯಣ ಅವರು ತರಬೇತಿ ಪಡೆಯುವಾಗಲೇ ಸಮಾಜಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿ ಇಡುವ ಸಂಕಲ್ಪ ಮಾಡಿದರು . ತಮ್ಮ ಆರು ಮಂದಿ ಗೆಳೆಯರೊಂದಿಗೆ ದೇವೇಂದ್ರಕುಮಾರ್ ಗುಪ್ತಾಜಿಯ ನೇತೃತ್ವದಲ್ಲಿ ಮಧ್ಯಪ್ರದೇಶದ ಇಂದೂರಿನ ಒಂದು ಸುಂದರಗ್ರಾಮ ಮಾಚಲಕ್ಕೆ ಬಂದರು . ಇವರೆಲ್ಲರೂ ಸೇರಿ ಕೃಷಿ ಕಾರ್ಮಿಕ ಸಹಕಾರ ಸಂಘ ಸ್ಥಾಪಿಸಿ ಅಲ್ಲಿಯೇ ದುಡಿಯಲು ನೆಲೆ ನಿಂತರು . ಎಲ್ಲರೂ ಒಂದೇ ಮನೆಯಲ್ಲಿ ವಾಸ್ತವ್ಯ ಹೂಡಿದರು .

ತಮ್ಮ ಇಪ್ಪತ್ತೈದನೇ ವರ್ಷದಲ್ಲಿ 1956 ಜೂನ್ 4ರಂದು ಅಕ್ಕನ ಮಗಳು ಶಶಿರೇಖಳ ಜೊತೆ ಸಪ್ತಪದಿ ತುಳಿದು ಗೃಹಸ್ಥಾಶ್ರಮಕ್ಕೆ ಪಾದಾರ್ಪಣೆ ಮಾಡಿದರು . ಮಡದಿಯೊಂದಿಗೆ ಮಾಚಲದಲ್ಲಿ ವಾಸ್ತವ್ಯ ಹೂಡಿದರು . ಹದಿನಾಲ್ಕು ವರ್ಷಗಳ ಕಾಲ ಮಾಚಲದಲ್ಲಿ ಗ್ರಾಮ ಸೇವೆ ಮತ್ತು ಕೃಷಿಯನ್ನು ಮಾಡಿದರು . (1951 ರಿಂದ 1966)

ಇದೇ ಸಮಯದಲ್ಲಿ ಇವರ ಪತ್ನಿ ಸರ್ವೋದಯ ತರಬೇತಿಯಲ್ಲಿ ತೊಡಗಿದರು . ಈ ಸಮಯದಲ್ಲಿ ಸತ್ಯನಾರಾಯಣ ಅವರು ಒಂದು ವರ್ಷ ಕಾಲ ವಿನೋಬಾಜಿಯವರೊಂದಿಗೆ "ಭೂದಾನ ಯಜ್ಞ" ಪಾದಯಾತ್ರೆಯಲ್ಲಿ ನಿರತರಾಗಿದ್ದರು . ವಿನೋಬಾಜಿಯೊಂದಿಗೆ ಒಡನಾಟದ ನಂತರ ಗೃಹಸ್ತ ಜೀವನದಲ್ಲಿ ಎರಡು ಮಕ್ಕಳ ತಂದೆಯಾದರು . ಮಧ್ಯ ಪ್ರದೇಶದ ಮಾಚಲ ಇವರ ಗೃಹಸ್ಥ ಬದುಕಿಗೆ ಸಮಾಧಾನ ತಂದಿತು .



ಸರ್ವೋದಯ ಕಾರ್ಯಕರ್ತರ ಜೀವನವೇ ಸರಳ ಬದುಕು . ತಮಗೆ ಸಿಗುತ್ತಿದ್ದ ಸಣ್ಣ ಗೌರವ ಧನದಲ್ಲೇ ಅವರು ತೃಪ್ತಿಯ ಜೀವನ ನಡೆಸುತ್ತಿದ್ದರು. ಸಾರ್ವಜನಿಕ ಸೇವೆಯೇ ಇವರ ಬದುಕಿನ ಧ್ಯೇಯವಾಗಿತ್ತು . 1966ರಲ್ಲಿ ಬಿಹಾರದಲ್ಲಿ ಶ್ರೀ ಜಯಪ್ರಕಾಶ ನಾರಾಯಣರ ಶಾಂತಿ ಸೇನಾ ಕ್ಯಾಂಪ್ ನಲ್ಲಿ ಮತ್ತೆ ತರಬೇತಿ ಪಡೆದು ಉತ್ತರಪ್ರದೇಶದ ಬನಾರಸ್ ನಲ್ಲಿ ಸರ್ವಸೇವಾ ಸಂಘದ ಶಾಂತಿಸೇನಾ ವಿಭಾಗದಲ್ಲಿ ಶ್ರೀ ನಾರಾಯಣ ದೇಸಾಯಿಯವರ ಸಂಘದಲ್ಲಿ ಅಖಿಲ ಭಾರತ ಸಂಘಟಕರಾಗಿ ಇಡೀ ಭಾರತದಲ್ಲಿ ಶಾಂತಿದೂತನಾಗಿ ಅಡ್ಡಾಡಿದರು. ಈ ನಡುವೆ ಮೂರು ಮಕ್ಕಳ ಜವಾಬ್ದಾರಿಯು ಇವರ ಹೆಗಲಿಗೇರಿತು . ಸಣ್ಣ ಮೊತ್ತದ ಗೌರವ ಧನದಲ್ಲಿ ಹಾಗೂ ಜೀವನ ಕಷ್ಟದಲ್ಲೂ ನಗುವನ್ನು ಮರೆಯದೆ ಸಂತಸವನ್ನು ಉಣಿಸಿದ ಜೀವ ಅವರ ಸಹಧರ್ಮಿಣಿ ಶಶಿರೇಖ . ಒಂದು ರೀತಿಯಲ್ಲಿ ಇಬ್ಬರೂ ಸರ್ವೋದಯ ಕಾರ್ಯಕರ್ತರು .

ಸತ್ಯನಾರಾಯಣ ಅವರು ಬನಾರಸದಲ್ಲಿ ಇದ್ದಾಗಲೇ ಜಯಪ್ರಕಾಶ್ ನಾರಾಯಣ್ ಅವರ ಸಾಂಗತ್ಯಕ್ಕೆ ಬಂದರು . ಜೆಪಿಯವರ ಪ್ರಯತ್ನದಿಂದ ಮನ ಪರಿವರ್ತನೆಗೊಂಡ ಚಂಬಲ್ ಕಣಿವೆಯ ಡಕಾಯಿತರುಗಳನ್ನು ಭೇಟಿ ಮಾಡಿ ಅವರುಗಳ ಸಂಸಾರವನ್ನು ನೋಡಿಕೊಳ್ಳುವ ಜವಾಬ್ದಾರಿ ಸತ್ಯನಾರಾಯಣರ ಹೊಣೆಗಾರಿಕೆಯಾಗಿತ್ತು . ಇದನ್ನು ಸಮರ್ಥವಾಗಿ ನಿರ್ವಹಿಸಿ ಡಕಾಯಿತರ ಕುಟುಂಬವನ್ನು ನಾಗರೀಕ ಜೀವನಕ್ಕೆ ಅಣಿಗೊಳಿಸುವ ಜವಾಬ್ದಾರಿಯನ್ನು ಇವರು ನಿರ್ವಹಿಸಿದರು.

ಇದಾದ ನಂತರ ಇವರನ್ನು ಅರುಣಾಚಲ ಪ್ರದೇಶಕ್ಕೆ ಕಳುಹಿಸಲಾಯಿತು . ಅಲ್ಲಿನ ನೇಫಾ ಪ್ರದೇಶದಲ್ಲಿ ಗುಡ್ಡಗಾಡು

ತಗಡೂರು ಗಣಪತಯ್ಯ ಸತ್ಯನಾರಾಯಣ ಅವರನ್ನು ತಗಡೂರಿನ ಅವರ ಮನೆಯಲ್ಲಿ ಭೇಟಿಯಾದಾಗ ಏಪ್ರಿಲ್ ತಿಂಗಳ ಬಿರು ಬೇಸಿಗೆ . ಹೆಂಚಿನ ಮನೆಯಾಗಿರುವುದರಿಂದ ಬಿಸಿಲಿನ ಝಳ ಸ್ವಲ್ಪ ಕಡಿಮೆಯಿತ್ತು .ತೊಂಬತ್ತರ ಇಳಿ ವಯಸ್ಸಿನಲ್ಲಿರುವ ಸತ್ಯನಾರಾಯಣ ಅವರು ಎಂಬತ್ತು ವರ್ಷದ ತಮ್ಮ ಮಡದಿ ಶಶಿ ರೇಖಾ ಅವರ ಜೊತೆಯಲ್ಲಿ ಯಾರದೇ ಆಸರೆಯಿಲ್ಲದೆ ತಗಡೂರಿನಲ್ಲಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ . ಅವರದ್ದು ಸರಳ ಶಿಸ್ತುಬದ್ಧ ಜೀವನ ಶೈಲಿ . ಅದೇ ಇವರ ಆರೋಗ್ಯದ ಗುಟ್ಟು . ಇಳಿ ವಯಸ್ಸಿನ ಸಹಜ ತೊಂದರೆಗಳನ್ನು ಹೊರತು ಪಡಿಸಿದರೆ ಇವರಿಗೆ ಯಾವುದೇ ಗಂಭೀರ ಅರೋಗ್ಯ ಸಮಸ್ಯೆಗಳಿಲ್ಲ .

ಇತರರಿಗೆ ಹೊರೆಯಾಗದೆ ತಾವು ಸ್ವಾವಲಂಬಿಯಾಗಿ ಇರಬೇಕು ಅನ್ನುವುದು ಅವರ ಅಂತರಂಗದ ಆಸೆ . ಆದರೆ ಇಳಿ ವಯಸ್ಸಿನಲ್ಲಿ ಏನಾದರೂ ತೊಂದರೆ ಆದೀತು ಎನ್ನುವ ಕಾರಣದಿಂದ ಅವರ ಮಕ್ಕಳು ಅವರನ್ನು ತಗಡೂರಿನಲ್ಲಿ ಇರಲು ಬಿಡುವುದಿಲ್ಲ . ಹಾಗಾಗಿ ಅವರು ಬೆಂಗಳೂರಿನಲ್ಲಿರುವ ಮಗನ ಮನೆಯಲ್ಲಿಯೂ ಇರುತ್ತಾರೆ .

ತಗಡೂರಿನಲ್ಲಿರುವ ಹಿತೈಷಿಗಳ ಸಹಕಾರದಿಂದ ಹಳ್ಳಿಯ ಬದುಕು ನಮಗೆ ಸಹನೀಯವಾಗಿದೆ. ಗಾಂಧೀಜಿಯವರ ಸರ್ವೋದಯ ವಿಚಾರವೇ ನಮ್ಮ ದೇಶಕ್ಕೆ ಒಳ್ಳೆಯದು ಎನ್ನುತ್ತಾರೆ. ಈಗಿನ ರಾಜಕಾರಣ ಮತ್ತು ಸ್ವಾರ್ಥ ರಾಜಕೀಯ ನಿಲುವುಗಳ ಬಗ್ಗೆ ಅವರಿಗೆ ತುಂಬು ಅಸಮಾಧಾನವಿದೆ . ಆದರೆ ಅದನ್ನು ಮುಕ್ತವಾಗಿ ಹಂಚಿಕೊಳ್ಳಲು ಅವರಿಗೆ ಮುಜುಗುರ . ನಮ್ಮ ಕಣ್ಣೆದುರಿಗೆ ನಮ್ಮ ದೇಶದ ಅವನತಿ ಆಗುತ್ತಿದೆಯಲ್ಲ ಎನ್ನುವ ನೋವು ಅವರನ್ನು ಬಾಧಿಸುತ್ತಿದೆ . ಸರ್ವೋದಯ ವಿಚಾರದಲ್ಲಿ ನಂಬಿಕೆಯಿಟ್ಟು ತಮ್ಮ ಇಡೀ ಜೀವನವನ್ನು ಸರ್ವೋದಯ ಸಂಸ್ಥೆಗಳಲ್ಲಿ ಕಳೆದ ಬಗ್ಗೆ ಅವರಿಗೆ ಹೆಮ್ಮೆಯಿದೆ.

ಸ್ವಾತಂತ್ರ್ಯ ಬಂದ ಎಪ್ಪತ್ತೈದು ವರ್ಷಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದರೂ ಈಗ ಗಾಂಧಿ ಮಾರ್ಗ ಬಿಟ್ಟು ಜಾಗತೀಕರಣದ ಹಾದಿಯಲ್ಲಿ ದೇಶ ಸಾಗುತ್ತಿರುವುದು ಸತ್ಯನಾರಾಯಣ ಅವರಿಗೆ ಸರಿ ಕಾಣುತ್ತಿಲ್ಲ. ಕೇವಲ ಹಣ ಸಂಪಾದಿಸಿದರೆ ಸಾಲದು . ಹಣಕ್ಕಿಂತ ನೆಮ್ಮದಿಯ ಜೀವನ ಮುಖ್ಯ . ಬಡವರು ಮತ್ತು ಶ್ರೀಮಂತರ ನಡುವೆ ಅಂತರ ಹೆಚ್ಚಾಗುತ್ತಿದೆ. ಇದು ಸರಿಯಲ್ಲ . ಧರ್ಮ ಕೋಮು ಭಾವನೆಗಳನ್ನು ಕೆರಳಿಸಿ ಅಧಿಕಾರ ಹಿಡಿಯುವ ಕೆಟ್ಟ ಪ್ರವೃತ್ತಿ ಈ ದೇಶದಲ್ಲಿ ಬೆಳೆಯುತ್ತಿದೆ. ಗಾಂಧೀಜಿ ಇದಕ್ಕೆ ವಿರುದ್ಧವಾಗಿದ್ದರು . ಎಲ್ಲ ಧರ್ಮ , ಜಾತಿ , ವರ್ಗದ ಜನರು ಜೊತೆಯಾಗಿ ಸಾಗಬೇಕು ಎನ್ನುವುದು ಅವರ ಜೀವನ ಧ್ಯೇಯವಾಗಿತ್ತು. ಅದಕ್ಕಾಗಿಯೇ ಗಾಂಧೀಜಿ ತಮ್ಮ ಜೀವವನ್ನೇ ಬಲಿ ನೀಡಿದರು . ಗಾಂಧಿಮಾರ್ಗ ಬಿಟ್ಟು ನಮ್ಮ ದೇಶಕ್ಕೆ ಅನ್ಯ ಮಾರ್ಗವಿಲ್ಲ . ಗಾಂಧೀಜಿ ವಿಚಾರಗಳಲ್ಲಿ ನಂಬಿಕೆಯುಳ್ಳ ರಾಜಕೀಯ ವ್ಯವಸ್ಥೆ ದೇಶದಲ್ಲಿ ಮರುಸ್ಥಾಪನೆ ಆಗಬೇಕು ಎನ್ನುವುದು ನಮ್ಮ ಆಸೆ ಎಂದು ನಿಟ್ಟುಸಿರು ಬಿಡುತ್ತಾರೆ.

ಜನರುಗಳ ಒಡನಾಟ. ಅವರನ್ನು ನಾಗರೀಕರನ್ನಾಗಿ ಮಾಡುವ ಪ್ರಯತ್ನ.ಇದೇ ಸಂದರ್ಭದಲ್ಲಿ "ಚಿಪ್ಕೋ ' ಆಂದೋಲನದ ನೇತಾರ ಸುಂದರ್ ಲಾಲ್ ಬಹುಗುಣ ಅವರ ಸಾನಿಧ್ಯಇವರಿಗೆ ಸಿಕ್ಕಿತು . ಅವರ ಆರೈಕೆಯ ಜವಾಬ್ದಾರಿಯೂ ಇವರ ಹೆಗಲಿಗೇರಿತು . ಸುಮಾರು ಒಂದು ವರ್ಷ ಕಾಲ ಇವರು ಅರುಣಾಚಲ ಪ್ರದೇಶದಲ್ಲಿ ಗುಡ್ಡಗಾಡು ಜನರ ಜೊತೆ ಕಷ್ಟದ ಜೀವನ ನಡೆಸಿದರು.

ಅರುಣಾಚಲ ಪ್ರದೇಶದ ನಂತರ ಅವರು ಗಡಿನಾಡಿನ ಗಾಂಧಿ ಎಂದೇ ಪ್ರಸಿದ್ಧರಾದ ಖಾನ್ ಅಬ್ದುಲ್ ಗಫರ್ ಖಾನ್ ಅವರ ಸಂಪರ್ಕಕ್ಕೆ ಬಂದರು . ಹೀಗೆ ಸದಾ ಸರ್ವೋದಯ ಸಂಸ್ಥೆಗಳಲ್ಲೇ ಸತ್ಯನಾರಾಯಣ ಅವರ ಸೇವೆ ಮುಂದುವರಿಯಿತು .

1973 ರಲ್ಲಿ ಮತ್ತೆ ವಿನೋಬಾ ಭಾವೆಯವರು ಸ್ಥಾಪಿಸಿದ್ದ ಅಂತರ ರಾಷ್ಟ್ರೀಯ ಸರ್ವೋದಯ ಸಂಸ್ಥೆ ವಿಶ್ವನೀಡಂ ಗೆ ಇವರು ಸೇರಿಕೊಂಡರು . ವಿಶ್ವ ನೀಡಂ ಸಂಸ್ಥೆಯ ವಿವಿಧ ಸೇವಾ ಚಟುವಟಿಕೆಗಳಲ್ಲಿ ನಿರತರಾದರು . ಮುಖ್ಯವಾಗಿ ಪಶುಪಾಲನೆ ಹಾಗೂ ಡೈರಿಯ ಮೇಲ್ವಿಚಾರಕರಾಗಿ 5 ವರ್ಷ ಸೇವೆ ಸಲ್ಲಿಸಿದರು . ನಂತರ 1978 ರಿಂದ " ಕಸ್ತೂರ ಬಾ ಗಾಂಧೀ ಕೇಂದ್ರ ಪ್ರಾಂತೀಯ ಕಚೇರಿ ಅರಸೀಕೆರೆಯತ್ತ ಸಂಸಾರದೊಂದಿಗೆ ಪಯಣ . 1992 ಅಕ್ಟೋಬರ್ ವರೆಗೆ ಕೃಷಿ ಹಾಗೂ ತೆಂಗಿನ ತೋಟದ ಮೇಲ್ವಿಚಾರಕರಾಗಿ ಬರಡಾಗಿದ್ದ ಭೂಮಿಯನ್ನು ಕಂಗೊಳಿಸುವಂತೆ ಮಾಡಿದ ತೃಪ್ತಿ ಮತ್ತು ಹೆಮ್ಮೆ ಇವರದ್ದು .ಐವತ್ತು ವರ್ಷಗಳ ಸೇವಾ ನಿವೃತ್ತಿಯ ನಂತರ ಸತ್ಯನಾರಾಯಣ ಅವರು ತಮ್ಮ ಜನ್ಮ ಸ್ಥಳ ತಗಡೂರಿಗೆ ಆಗಮಿಸಿದರು .

ತಗಡೂರಿನ ಹಳೆಯ ಮನೆಯಲ್ಲಿ ಮಡದಿ ಶಶಿ ರೇಖಾ ಅವರೊಡನೆ ಸತ್ಯನಾರಾಯಣ . ಇಳಿ ವಯಸ್ಸಿನ ಸಂತೃಪ್ತ ಜೀವಗಳು ..

ಸದಾ ಲವಲವಿಕೆಯಿಂದ ಇರುವ ಸತ್ಯನಾರಾಯಣ ಅವರಿಗೆ ಸುಮ್ಮನೆ ಕೂರಲಾಗಲಿಲ್ಲ . ತಗಡೂರಿನ ಖಾದಿ ಕೇಂದ್ರದಲ್ಲಿ ಏಳು ವರುಷ ಮತ್ತೆ ಸೇವೆ ಸಲ್ಲಿಸಿದರು. 2022ರ ವರೆಗೂ ಕರ್ನಾಟಕ ಸರ್ವೂದಯ ಸಂಘದ ಸದಸ್ಯರಾಗಿದ್ದರು. ಈಗ ವಿಶ್ರಾಂತಿ ಜೀವನವನ್ನು ತನ್ನ ಪತ್ನಿಯೊಂದಿಗೆ ಮಕ್ಕಳ ಸಂರಕ್ಷಣೆಯಲ್ಲಿ ತಗಡೂರಿನಲ್ಲಿ ಕಳೆಯುತ್ತಿದ್ದಾರೆ.

ಇತ್ತೀಚಿಗೆ ಅನೇಕ ಸಂಘ ಸಂಸ್ಥೆಗಳು ಮೈಸೂರು ಆಕಾಶವಾಣಿ ಕೇಂದ್ರ ಇವರ ಸರ್ವೋದಯ ಸೇವೆಯನ್ನು ಗುರುತಿಸಿ ಇವರ ಸಂದರ್ಶನವನ್ನು ಏರ್ಪಡಿಸಿತ್ತು. ಅವರು ಇಳಿ ವಯಸ್ಸಿನಲ್ಲೂ ಅನೇಕ ಸನ್ಮಾನಗಳನ್ನು ಪಡೆದಿರುವುದು ಮಕ್ಕಳಾದ ನಮಗೆ ಹೆಮ್ಮೆಯನ್ನು ತಂದಿದೆ.

"ಸರಳ ಜೀವನ ಉದಾತ್ತ ಜೀವನ"

"ಸತ್ಯ ಮೇವ ಜಯತೆ" ಅವರ ಧ್ಯೇಯವಾಗಿದೆ

ಹಸನ್ಮುಖಿ ಶಾಂತಿ ಪ್ರಿಯ ನಮ್ಮ ಅಪ್ಪ ಟಿ ಜಿ ಸತ್ಯನಾರಾಯಣ ಅವರ ಬಗ್ಗೆ ನಮಗೆ ತುಂಬು ಅಭಿಮಾನ . ■

ಪುಸ್ತಕ ಪರಿಚಯ

ಡಾ ಪ್ರಕಾಶ ಭಟ್ ಅವರ

ಹಳ್ಳಿಗಳನ್ನು ಕಟ್ಟುವ ಕಷ್ಟಸುಖ

ಅವರು ಹೇಗಿರುತ್ತಾರೆ ಮಹಾತ್ಮರು? ದಾರ್ಶನಿಕರು, ಸಂತರು..? ಎಂದು ಕೇಳಿದರೆ ನನ್ನ ಬಳಿ ಉತ್ತರವಿಲ್ಲ.

ನಾನು ಗಾಂಧಿಯನ್ನು ನೋಡಿಲ್ಲ, ಅಂಬೇಡ್ಕರ್ ಅವರನ್ನೂ ನೋಡಿಲ್ಲ, ಅಂತೆಯೇ ನೋಡಲೇಬೇಕಾಗಿದ್ದ ಹಲವರನ್ನು.

ಆದರೆ ಮಹಾತ್ಮರ ಪ್ರಭಾವ ಹೇಗಿರಬಹುದು? ಎನ್ನುವುದಕ್ಕೆ ನನ್ನ ಬಳಿ ಉತ್ತರವಿದೆ, ಉದಾಹರಣೆಯಿದೆ.

ನೀವು ಈಗ ಈ ಕ್ಷಣದಲ್ಲಿ ಆ ಪ್ರಶ್ನೆ ಕೇಳಿದರೂ ನಾನು ಸುಲಭವಾಗಿ ಉತ್ತರಕನ್ನಡದ ಕಡಲತಡಿಯ ಹಳ್ಳಿ ಹೊಲನಗದ್ದೆಯಿಂದ ಎದ್ದು ಬಂದ ಡಾ ಪ್ರಕಾಶ ಭಟ್ ಅವರನ್ನು ತೋರಿಸಿಬಿಡುತ್ತೇನೆ.

ನಾನು ಮತ್ತೆ ಮತ್ತೆ ಎಚ್ ನಾಗವೇಣಿ ಅವರ 'ಗಾಂಧಿ ಬಂದ' ಕೃತಿಯತ್ತ ಮರಳಲೇಬೇಕಿದೆ. ಆಗ 'ಕನ್ನಡ ಜಿಲ್ಲೆ' ಎನಿಸಿದ್ದ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡವನ್ನು ಒಳಗೊಂಡಿದ್ದ ಜಿಲ್ಲೆಗೆ ಗಾಂಧಿ ಬರುವುದಿರುತ್ತದೆ. ಗಾಂಧಿ ಬಂದು ಪರಿವರ್ತನೆ ಆದರೆ ಅದು ಸಹಜ. ಆದರೆ ಗಾಂಧಿ ಬರುತ್ತಾರಂತೆ ಎಂದು ಊರಿಗೆ ಊರುಗಳೇ ಗಾಂಧಿಯಂತಾಗಿಬಿಡುವ ಕಥನ ಇದೆಯಲ್ಲಾ ಅದು ಅನ್ವಯವಾಗುವುದು ಪ್ರಕಾಶ ಭಟ್ಟರಿಗೆ.

ಪಶು ವೈದ್ಯ ಓದಿದ ಡಾ. ಪ್ರಕಾಶ ಭಟ್ ಅವರು ತಾನು ಸರ್ಕಾರಿ ಹುದ್ದೆಗೆ ಹೋಗುವುದಿಲ್ಲ ಎಂದು ನಿರ್ಧರಿಸಿ ಹಳ್ಳಿಗಳನ್ನು ಕಟ್ಟುವ ಕೆಲಸದ ಕಡೆ ಹೊರಳಿಬಿಡುತ್ತಾರೆ. ಗಾಂಧೀಜಿಯವರ ಬಳಿ ಇದ್ದ ಮಣಿಭಾಯಿಯವರನ್ನು ಗಾಂಧೀಜಿ ಕೇಳುತ್ತಾರೆ– ಭಾರತ ಯಾಕೆ ಬಡವಾಗಿದೆ? ಗಾಂಧೀಜಿಯವರೇ ಉತ್ತರಿಸುತ್ತಾರೆ– ಏಕೆಂದರೆ ಭಾರತದ ಹಳ್ಳಿಗಳು ಬಡವಾಗಿವೆ. ಗಾಂಧೀಜಿಯವರ ಶಿಷ್ಯತ್ವ ಪಡೆದ ಮಣಿಬಾಯಿಯವರು ಡಾ ಪ್ರಕಾಶ ಭಟ್ ಅವರ ಮುಂದೆ ಕೂತು ಕ್ಯಾಂಪಸ್ ಸಂದರ್ಶನದಲ್ಲಿ ಇದನ್ನು ಹೇಳಿದ್ದರು. ಉತ್ತರ ಕನ್ನಡದಲ್ಲಿ ಯಕ್ಷಗಾನ ಹೇಳಿಕೊಡುವುದನ್ನು ಇನ್ನಿಲ್ಲದಂತೆ ಪ್ರೀತಿಸುತ್ತಿದ್ದ ಪ್ರಕಾಶ ಭಟ್ಟರು ಮಹಾತ್ಮರ ಹಾದಿಯಲ್ಲಿ ನಡೆದೇಬಿಟ್ಟರು.

ಅದರ ಫಲ ಇಂದು 75 ಹಳ್ಳಿಗಳ ಮುಖದಲ್ಲಿ ಸಂತಸದ ಬುಗ್ಗೆಯಿದೆ. ತಮ್ಮ ಅಭಿವೃದ್ಧಿಯನ್ನು ತಾವೇ ಮಾಡಿಕೊಳ್ಳುವ ಹುಮ್ಮಸ್ಸನ್ನು ಇಲ್ಲಿಯ ಸುಮಾರು 7 ಸಾವಿರಕ್ಕೂ ಹೆಚ್ಚು ಕುಟುಂಬಗಳು ಗಳಿಸಿವೆ. 5 ಸಾವಿರಕ್ಕೂ ಹೆಚ್ಚು ಕುಟುಂಬಗಳ ಬದುಕು ಬದಲಾಗಿದೆ.


ಇಷ್ಟು ಮಾತ್ರವಲ್ಲ ಇಡೀ ರಾಜ್ಯಕ್ಕೆ ಹೇಗೆ ಬರಗಾಲವನ್ನು ಒದ್ದು ಓಡಿಸಬೇಕೆಂಬ ಮಾದರಿಯನ್ನು ಹಾಕಿಕೊಟ್ಟಿದ್ದಾರೆ. 'ಯಾತಕ್ಕೆ ಮಳೆ ಹೋದವೋ ಶಿವ ಶಿವ ಲೋಕ ತಲ್ಲಣಿಸುತಾವೊ' ಎಂದು ತತ್ತರಿಸಿಹೋಗಿದ್ದ ರೈತರಿಗೆ ಇದು ಮಾದರಿ ಪರಿಹಾರವಾಗಿದೆ. ಇದರ ಭಾಗವಾಗಿಯೇ 20 ಲಕ್ಷಕ್ಕೂ ಹೆಚ್ಚು ಮರಗಳು ನೆಡಲ್ಪಟ್ಟಿವೆ. 50 ಕೋಟಿ ಲೀಟರ್ ನೀರನ್ನು ಸಂಗ್ರಹಿಸಲಾಗಿದೆ.

ಉಸಿರುಗಟ್ಟಿಸುತ್ತಿದ್ದ ಆರೋಗ್ಯಕ್ಕೆ ಅಪಾಯ ತಂದೊಡ್ಡುತ್ತಿದ್ದ ಸಾವಿರಾರು ಹಳ್ಳಿಗಳ ಅಡುಗೆ ಮನೆ ಇಂದು ಹೊಗೆರಹಿತವಾಗಿದೆ. ಹಿತ್ತಲಲ್ಲಿ ಮನೆಯ ತ್ಯಾಜ್ಯವೇ ಗೊಬ್ಬರವಾಗಿ ಬದಲಾಗಿದೆ. ಅಷ್ಟೇ ಅಲ್ಲ, ಶೌಚಾಲಯ ಎನ್ನುವ ಕಲ್ಪನೆಯೇ ಇಲ್ಲದ ಹಳ್ಳಿಗಳಲ್ಲಿ ಈಗ ಬೆಳಗು ಯಾತನಾಮಯವಲ್ಲ.

ನನಗೆ ಗೊತ್ತು, ಇದನ್ನು ಬರೆಯುವಾಗ ಡಾ ಪ್ರಕಾಶ ಭಟ್ಟರ ಮುಖ್ಯ ಗಂಟಿಕ್ಕಿರುತ್ತದೆ ಎಂದು. ಕಾರಣ ಅವರಿಗೆ 'ನಾವು' ಎನ್ನುವುದು ಗೊತ್ತೇ ಹೊರತು ನಾನು ಎನ್ನುವುದು ಅಲ್ಲ. ಅವರು ಮೊದಲು ಬೋಧಿಸುವ ಸೂತ್ರವೇ ಅದು. ಎಲ್ಲರನ್ನೂ ಒಳಗೊಳ್ಳಿ ಹಾಗಾಗಬೇಕಾದರೆ 'ನಾನು' ಎನ್ನುವುದನ್ನು ತೊಡೆದು ಹಾಕಿ ಎಂದು. ಅದು ಎಷ್ಟು ಅವರೊಳಗೇ ಆಳವಾಗಿ ಬೇರೂರಿತ್ತು ಎಂದರೆ ಅವರು ನಡೆಸುತ್ತಿದ್ದ ಮಹಿಳಾ ಸಂಘಗಳ ಸಭೆಯಲ್ಲಿ ಅವರು 'ನಾವು ಮಹಿಳೆಯರು ಇದ್ದೇವಲ್ಲ..' ಎಂದೇ ಮಾತನಾಡುತ್ತಿದ್ದರು. ಹಾಗೂ ಅಲ್ಲಿನ ಹೆಂಗಸರು ಅದು ಹೌದು ಎಂದು ಅವರನ್ನು ತಮ್ಮಂತೆ ಒಪ್ಪಿಕೊಂಡಿದ್ದರು.

ಡಾ ಪ್ರಕಾಶ ಭಟ್ ಅವರು ಈ ಎಲ್ಲವನ್ನೂ ಸಾಧಿಸಿದ್ದು ಮಣೀಭಾಯಿಯವರು ಕನಸಿದ 'ಬೈಫ್' ಸಂಸ್ಥೆಯ ಮೂಲಕ. ತಳ ಕಾಣುವಂತೆ ಪಾಯಿಖಾನೆಯ ಬಕೆಟ್ ತೊಳೆಯಬೇಕು ಎಂದು ಗಾಂಧಿಯ ಆಶ್ರಮದಲ್ಲಿ ಕಲಿತಿದ್ದ ಮಣಿಬಾಯಿಯವರ ಬೈಫ್ ನಿಂದ.

'ಹಳ್ಳಿಗಳನ್ನು ಕಟ್ಟುವ ಕಷ್ಟ ಸುಖ' ಹಳ್ಳಿಗಳನ್ನು ಕಟ್ಟಿದವರಿಗೇ ಗೊತ್ತು. ಅದು ಬೇರೆಯವರಿಗೂ ಒಂದಿಷ್ಟು ಗೊತ್ತಾಗಲಿ ಎನ್ನುವ ಕಾರಣಕ್ಕೆ ಈ ಪುಸ್ತಕ. ಮೀಸೆ ಇದ್ದವರೇ ದೊಡ್ಡವರು, ಅನುಕೂಲಸ್ಥರು



ಎಂದು ಭಾವಿಸುತ್ತಿದ್ದ, ಅಭಿವೃದ್ಧಿಯ ಸಂಕೇತ ಎಂದುಕೊಂಡಿದ್ದ ಜನರನ್ನು, ಕುಂಬಳಕಾಯಿ ಬೇಯಿಸಿ ತಿನ್ನುತ್ತಿದ್ದ ಕಾಲದಿಂದ ಅವರ ಕೈ ಹಿಡಿದು ಅವರು ಬೇರೆ ಊರುಗಳಿಗೂ ಹಾಲು ಹಂಚುವ, ಬೆಳೆದದ್ದನ್ನು ಮಾರುವವರೆಗೆ ಕರೆದುಕೊಂಡು ಬಂದ ಕಥೆ ಇದು.

ಡಾ ಪ್ರಕಾಶ್ ಭಟ್ ಅವರು ಕೇಳುತ್ತಾರೆ. ಒಂದು ಕಿಲೋ ಜೋಳ ಎಂದರೆ ಎಷ್ಟು? ಆಗ ರೈತರು ತಟ್ಟಂತ ಕೊಡುವ ಉತ್ತರ ಇಷ್ಟು ರೂಪಾಯಿ ಅಂತ. ಬಿಡದೆ ಮತ್ತೆ ಕೇಳಿದಾಗ ಹೊರಡುವ ಉತ್ತರ ಇಪ್ಪತ್ತು ರೊಟ್ಟಿ, ಇನ್ನೂ ಮುಂದುವರಿದಾಗ ಹೇಳುವ ಉತ್ತರ 'ಒಂದು ಕುಟುಂಬದ ಒಂದು ದಿನದ ಊಟ'

ಕೃಷಿ ಮಾರುಕಟ್ಟೆಯ ಹಿಡಿತ, ಜಾಗತೀಕರಣದ ಅಬ್ಬರ ತಿನ್ನುವ ರೊಟ್ಟಿಯನ್ನು ಸದ್ದು ಮಾಡುವ ಹಣವಾಗಿ ಬದಲಿಸಿಬಿಟ್ಟಿರುವುದನ್ನು ಪ್ರಕಾಶ್ ಭಟ್ ನಿಟ್ಟುಸಿರಿಟ್ಟು ನೋಡುತ್ತಾರೆ. ಆದರೆ ಸುಮ್ಮನೆ ಕೂರುವುದಿಲ್ಲ 'ನೇಗಿಲು ಸುಖವಾಗಿ ಉಳಲಿ' ಎನ್ನುವ ಪಾಠವನ್ನು ಕಲಿಸುತ್ತಾರೆ.

ಸಫಲತೆ ಎಂದರೆ ಹೆಚ್ಚು ಸಂಬಳ ಅಲ್ಲ ಎನ್ನುವ ಮಾತನ್ನು ಪ್ರಕಾಶ್ ಭಟ್ ಮತ್ತೆ ಮತ್ತೆ ಹೇಳುತ್ತಾರೆ. 'ಭಾರತೀಯರೊಬ್ಬರು ವಿದೇಶದ ಕಂಪನಿಯೊಂದರ ಸಿಇಒ ಆಗುವುದು ಬಹು ದೊಡ್ಡ ಸುದ್ದಿ. ಇಡೀ ದೇಶ ಅದರಿಂದ ಧನ್ಯವಾಯ್ತು ಎನ್ನುವಂತೆ ಮಾಧ್ಯಮಗಳು ಬಿಂಬಿಸುತ್ತಿರುವ ದಿನಗಳಲ್ಲಿ ಧನ್ಯವಾದರಹಿತ, ಗ್ಲಾಮರ್ ಇಲ್ಲದ ಕೆಲಸ ಮಾಡಲು ಯುವಕ ಯುವತಿಯರನ್ನು ಪ್ರೇರೇಪಿಸುವುದು ಹೇಗೆ?' ಎಂದು ಪ್ರಶ್ನಿಸುತ್ತಾರೆ.

ಈ ಪುಸ್ತಕ ಎತ್ತುವ ಪ್ರಶ್ನೆ ನಿಮ್ಮೊಳಗೂ ಸದಾ ಆಡುತ್ತಲಿರಲಿ.

–ಜಿ ಎನ್ ಮೋಹನ್

ಚೌದರಿ ಕೊಪ್ಪಲಿನಲ್ಲಿ ಗಾಂಧಿ ಪ್ರಣೀತ ಎನ್‌ಎಸ್‌ಎಸ್ ಶಿಬಿರ



ಚೌದುರಿ ಕೊಪ್ಪಲು – ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ 32 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಹಿರಿಯ ಗಾಂಧಿವಾದಿ ದಿವಂಗತ ಹೋ ಶ್ರೀನಿವಾಸಯ್ಯ ಅವರ ಹುಟ್ಟೂರು. ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ಚೌಧರಿ ಕೊಪ್ಪಲು ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ವಾರ್ಷಿಕ ಶಿಬಿರವು 21. 5 .2024 ರಿಂದ 27 .5 .2024 ರವರೆಗೆ ನಡೆಯಿತು. ಹೋ .ಶ್ರೀನಿವಾಸಯ್ಯ ಅವರ ಹೆಸರಿನಲ್ಲಿ ನಿರ್ಮಿಸಿರುವ ಸಮುದಾಯ ಭವನದಲ್ಲಿ ನಡೆದ ಎನ್ ಎಸ್ ಎಸ್ ಶಿಬಿರದಲ್ಲಿ ನಾಗಮಂಗಲದ ಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಐವತ್ತಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು .

ನಮ್ಮೂರ ಪರಿಸರವನ್ನು ಸ್ವಚ್ಛತೆಗೊಳಿಸುವ ಮುಖಾಂತರ ಮಾದರಿ ಗ್ರಾಮಗಳನ್ನಾಗಿ ಮಾಡುವ ಹೊಣೆ ನಮ್ಮಗಳಲ್ಲಿ ಮೈಗೂಡಿಸಿಕೊಂಡಾಗ ಮಾತ್ರ ಮಾದರಿ ಗ್ರಾಮ ಮಾಡುವ ನಮ್ಮ ಕನಸು ನನಸಾಗುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಮಂಡ್ಯ ಜಿಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿಗಳಾದ ಹೆಚ್.ಎಲ್ ನಾಗರಾಜ್ ರವರು ತಿಳಿಸಿದರು.

ನಾಗಮಂಗಲ ತಾಲೂಕು ದೇವಲಾಪುರ ಹೋಬಳಿಯ ಚೌದರಿ ಕೊಪ್ಪಲು ಗ್ರಾಮದಲ್ಲಿ ಶ್ರೀ ಆದಿಚುಂಚನಗಿರಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವತಿಯಿಂದ ಮೇ 21ರಿಂದ 27ರವರೆಗೆ ನಡೆದ ರಾಷ್ಟ್ರೀಯ ಸ್ವಯಂಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಈ ಮಾತು ಹೇಳಿದರು .

ರಾಷ್ಟ್ರೀಯ ಸ್ವಯಂ ಸೇವಾ ಭಾವನೆಯಿಂದ ರಾಜ್ಯದ ಕುಗ್ರಾಮಗಳನ್ನ ರಾಷ್ಟ್ರೀಯ ಸೇವಾ ಯೋಜನೆಗಳಲ್ಲಿ ಅಳವಡಿಸಿಕೊಂಡು ಅಭಿವೃದ್ಧಿ ಪಥದತ್ತ ಹೆಜ್ಜೆ ಹಾಕಿದಾಗ ಆ ಗ್ರಾಮಗಳನ್ನು ಮಾದರಿ ಗ್ರಾಮಗಳಾಗಿ ಪರಿವರ್ತನೆ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ನಾಗಮಂಗಲ ತಾಲೂಕಿನ 75 ಗ್ರಾಮಗಳನ್ನು ಮಾದರಿ ಗ್ರಾಮಗಳಾಗಿ ಮಾಡುವ ಯೋಜನೆಯನ್ನು ಹಮ್ಮಿಕೊಂಡಿರುವ ಕುರಿತು ಮಾಹಿತಿ ನೀಡಿದರು.

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಪುರುಷೋತ್ತಮಾನಂದನಾಥ ಮಹಾಸ್ವಾಮೀಜಿರವರು ಹಾಗೂ ಗಣ್ಯರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ವೊಡೇ ಪಿ. ಕೃಷ್ಣ ತಮ್ಮ ಆಶಯ ನುಡಿಯಲ್ಲಿ ಗಾಂಧಿ ಚಿಂತನೆಗಳು ಮತ್ತು ಗಾಂಧಿ ತತ್ವಗಳನ್ನು ಕುರಿತು ಮಾಹಿತಿ ನೀಡಿದರು. ಹೋ . ಶ್ರೀನಿವಾಸಯ್ಯನವರ ಕಾರ್ಯ ವೈಖರಿ ಹಾಗೂ ಅವರ ಸೇವಾ ಮನೋಭಾವ ಗಾಂಧಿ ತತ್ವದ ಪ್ರತಿಪಾದನೆ ಯುವ ಸಮುದಾಯಕ್ಕೆ ಗಾಂಧೀಜಿ ವಿಷಯಗಳು ತಲುಪ ಬೇಕಾಗಿರುವ ಬಗ್ಗೆ ಶಿಬಿರದ ವಿದ್ಯಾರ್ಥಿಗಳಿಗೆ ತಿಳಿವಳಿಕೆ ನೀಡಿದರು .

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎನ್‌ಎಸ್ ರಾಮೇಗೌಡ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಇವರು ವಹಿಸಿದ್ದರು,

ಶ್ರೀ ಚಂದ್ರೇಗೌಡರು, ಡಾಕ್ಟರ್ ಬಿ ಕೆ ಲೋಕೇಶ್, ಶ್ರೀಮತಿ ಶಶಿಕೃಷ್ಣ ಅಧ್ಯಕ್ಷರು ಡಾಕ್ಟರ್ ಹೋ ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್, ಪ್ರೊ ಜಿ ಬಿ ಶಿವರಾಜು ನಿರ್ದೇಶಕರು ಗಾಂಧಿ ಭವನ, ಡಾಕ್ಟರ್ ಹೆಚ್ ಎಸ್ ರವೀಂದ್ರ ಪ್ರಾಂಶುಪಾಲರು, ಬ್ರಹ್ಮಚಾರಿ ಸತ್



ಕೀರ್ತಿನಾಥ ಸ್ವಾಮೀಜಿ ಹಾಗೂ ಗಣ್ಯರು ಗ್ರಾಮಸ್ಥರು ಸಮಾರಂಭದಲ್ಲಿ ಭಾಗವಹಿಸಿದ್ದರು

ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದ ರೈತ ನಾಯಕರಾದ ಸುನಂದ ಜಯರಾಮರವರು

ವೈಚಾರಿಕತೆ, ಬೌದ್ಧಿಕತೆ, ವಿಚಾರ ವಾದಗಳಿಗೆ ಮೌಲ್ಯ ಬರುವುದು ಅದು ಜೀವನ ಮೌಲ್ಯಗಳಿಂದ ಸಮೃದ್ಧವಾದಾಗ. ಜೀವನ ಮೌಲ್ಯವೆಂದರೆ ಸತ್ಯ, ಅಹಿಂಸೆ, ಶೀಲ, ಸಂಯಮ, ದಯೆ, ಕ್ಷಮೆ, ತನ್ನಂತೆ ಪರರ ಬಗೆಯುವ ರೀತಿ, ಬೌದ್ಧಿಕ ಪ್ರಾಮಾಣಿಕತೆ ಮಾನವೀಯ ಗುಣಗಳು. ವೈಚಾರಿಕತೆ ಸಮಾಜವನ್ನು ತಿದ್ದುವ ಮುಖ್ಯವಾದ ಅಸ್ತ್ರವಾಗಿದೆ .ಈ ವೈಚಾರಿಕತೆ ಒಬ್ಬ ವ್ಯಕ್ತಿಯ ರಾಜಕೀಯ, ಸಾಮಾಜಿಕ, ಧಾರ್ಮಿಕ ಇಲ್ಲವೇ ಅವನ ವೈಯಕ್ತಿಕ ಬದುಕಿನ ಚಿಂತನೆಗೆ ಎಡೆಮಾಡಿಕೊಡುತ್ತದೆ.

ನಮ್ಮದು ಪುರಾತನ ಸಂಸ್ಕೃತಿಯನ್ನು ಹೊಂದಿರುವ ದೇಶ . ಮಧ್ಯಮ ಯುಗದ ಚಿಂತನೆ ಮತ್ತು ಧಾರ್ಮಿಕ ಚಿಂತನೆಗಳು ಇಲ್ಲಿನ ಜನಜೀವನದ ಮೇಲೆ ಹೆಚ್ಚು ಪ್ರಭಾವ ಬೀರಿದುವು. ಅವುಗಳಲ್ಲಿ ಕೆಲವು ವೈಜ್ಞಾನಿಕ ತಳಹದಿಯನ್ನು ಹೊಂದಿದ್ದರೂ ಇನ್ನುಳಿದವು ಆ ಕಾಲದ ಊಹಾಪೋಹಗಳಿಂದ ಸೇರಿಕೊಂಡವು.

ಅವುಗಳೆಲ್ಲವನ್ನು ವೈಚಾರಿಕತೆಗೆ ಒಳಪಡಿಸುವ ಕೆಲಸ ಈ ತಲೆಮಾರಿನಲ್ಲಿ ಆಗುತ್ತಿರುವುದು ಪ್ರಗತಿಪರ ಚಿಂತನೆಯೇ ಆಗಿದೆ.

ಇದನ್ನು ಸಾಮೂಹಿಕ ನೆಲೆಯಲ್ಲಿ ಕಾರ್ಯ ರೂಪಕ್ಕೆ ತರಬೇಕಾದರೆ ಬಹಳಷ್ಟು ಕಾಲಾವಕಾಶ ಬೇಕಾಗಬಹುದು. ಆದರೆ ವೈಯಕ್ತಿಕ ನೆಲೆಯಲ್ಲಿ ಅನುಸರಿಸುವುದು ನಮ್ಮ ಕೈಯ್ಯಲ್ಲಿದೆ. ಅದನ್ನು ಕಾರ್ಯಗತಳಿಸುವ ಮೂಲಕ ನಾವು ಪ್ರಜ್ಞಾವಂತರಾಗಿ ಕೆಲಸ ಮಾಡಲು ಸಾಧ್ಯವೆಂದು ತಿಳಿಸಿದರು.

ರಾಷ್ಟಪಿತ ಮಹಾತ್ಮ ಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಗ್ರಾಮ ಪರಿಕಲ್ಪನೆಯ ಕನಸಿಗೆ ಪೂರಕವಾಗಿ 1969 ರಲ್ಲಿ ಆರಂಭವಾದ ರಾಷ್ಟೀಯ ಸೇವಾ ಯೋಜನೆ ಈಗ ಗರಿಗೆದರಿಕೊಂಡಿದೆ ಎಂದು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಕಾರ್ಯನಿರ್ವಹಣಾಧಿಕಾರಿಗಳಾದ ರಾಮೇಗೌಡ ರವರು ಶಿಬಿರದ ಸಮಾರೋಪ ಸಮಾರಂಭದಲ್ಲಿ ತಿಳಿಸಿದರು.

ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶನದಂತೆ ಗಾಂಧಿ ಹೆಜ್ಜೆಯ ಗುರುತಾಗಿ ಈ ಗ್ರಾಮದ ಶ್ರೀನಿವಾಸಯ್ಯನವರು ವಿವಿಧ ಭಾಗಗಳಲ್ಲಿ ಗಾಂಧಿ ಚಿಂತನೆಗಳನ್ನು ಪ್ರಚಾರ ಮಾಡಿರುವ ಹೆಗ್ಗಳಿಕೆ ಹೊಂದಿದ್ದಾರೆ . ಇಂತಹವರ ನೆಲದಲ್ಲಿ ಸೇವಾ ಮನೋಭಾವ ಬೆಳೆಸಿಕೊಳ್ಳುವ ಹಾಗೂ ಇಂತಹ ಶಿಬಿರಗಳಲ್ಲಿ ಕಾಲೇಜು ಹಾಗೂ ಗ್ರಾಮಗಳಲ್ಲಿ ರಾಷ್ಟೀಯ ಸೇವಾ ಯೋಜನೆಯಿಂದ ಮಾಡಿರುವಂತಹ ಹೆಜ್ಜೆಯ ಗುರುತು ಮುಂದಿನ ಯುವ ಪೀಳಿಗೆ ಗಾಂಧಿ ಮಾರ್ಗದಂತೆ ಮಾದರಿಯಾಗಬೇಕೆಂಬುದು ನಮ್ಮಗಳ ಆಶಯವಾಗಿದೆ ಎಂದರು .

ಆದಿ ಚುಂಚನಗಿರಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ . ಎಚ್ ಎಸ್ ರವೀಂದ್ರ ಅವರು ಶಿಬಿರ ಯಶಸ್ವಿಯಾಗಲು ನೆರವು ನೀಡಿದ ವಿದ್ಯಾರ್ಥಿಗಳು , ಗ್ರಾಮಸ್ಥರು , ಎನ್ ಎಸ್ ಎಸ್ ಅಧಿಕಾರಿಗಳು ಮತ್ತು ಶ್ರೀ ಮಠದ ಸ್ವಾಮೀಜಿಗಳ ಸಹಕಾರವನ್ನು ಸಮಾರೋಪ ಸಮಾರಂಭದಲ್ಲಿ ಕೃತಜ್ಞತೆಯಿಂದ ನೆನೆದು ಎಲ್ಲರನ್ನೂ ಸ್ವಾಗತಿಸಿದರು .

ಮಹಾತ್ಮ ಗಾಂಧೀಯವರ ತತ್ವ ಮತ್ತು ವಿಚಾರಗಳು ಇಂದಿನ ಯುವ ಸಮುದಾಯಕ್ಕೆ ಅಗತ್ಯವಾಗಿವೆ. ರಾಷ್ಟೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಗಾಂಧಿ ವಿಚಾರಗಳನ್ನು ಸಂಯೋಜಿಸಿದ ಕೀರ್ತಿ ಪ್ರೊ . ಜಿ ಬಿ ಶಿವರಾಜುರವರಿಗೆ



ಏಳು ದಿನಗಳ ಎನ್ ಎಸ್ ಎಸ್ ಶಿಬಿರ ಗ್ರಾಮದ ಜನರ ಮನಸ್ಸಿನಲ್ಲಿ ಒಳ್ಳೆಯ ಭಾವನೆಯನ್ನು ಬಿತ್ತುವಲ್ಲಿ ಯಶಸ್ವಿಯಾಯಿತು

ಸಲ್ಲುತ್ತದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯು ಮಹಾತ್ಮ ಗಾಂಧಿಯವರ ವ್ಯಕ್ತಿ ಪರಿಚಯ ಮತ್ತು ವಿಚಾರಗಳನ್ನು ಯುವ ಸಮುದಾಯಕ್ಕೆ ತಲುಪಿಸುವ ಪ್ರಮುಖ ಧ್ಯೇಯವನ್ನು ಹೊಂದಿದೆ . ಈ ದಿಕ್ಕಿನಲ್ಲಿ ವಿವಿಧ ಸಂಘ ಸಂಸ್ಥೆಗಳು ಮತ್ತು ಸರ್ಕಾರದ ಸಹಕಾರದೊಂದಿಗೆ ಮುನ್ನಡೆಯುತ್ತೇವೆ ಎಂದು ಗಾಂಧಿ ಸ್ಮಾರಕ ನಿಧಿಯ ಕಾರ್ಯಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್ ಅವರು ತಮ್ಮ ಸಮಾರೋಪ ನುಡಿಯಲ್ಲಿ ಹೇಳಿದರು .

ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿಗಳಾದ ಎಂ ಸಿ ನರೇಂದ್ರ ಅವರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಕೀಳರಿಮೆ ತೊರೆದು ನಗರ ಪ್ರದೇಶದವರ ಜೊತೆ ಸರಿ ಸಮಾನವಾಗಿ ಸ್ಪರ್ದಿಸಿ ಗೆಲ್ಲಬೇಕು . ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಶಕ್ತಿ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಇರುತ್ತದೆ. ಕುಟುಂಬಕ್ಕೆ ನೆರವಾಗುವ ಮತ್ತು ಸ್ಪಂದಿಸುವ ಉದಾರ ಗುಣವೂ ಹಳ್ಳಿಯ ವಿದ್ಯಾರ್ಥಿಗಳಲ್ಲಿದೆ . ಇದನ್ನು ಬಳಸಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸ ಬೇಕು ಎಂದು ಕಿವಿ ಮಾತು ಹೇಳಿದರು .



ರಾಷ್ಟ್ರೀಯ ಸೇವಾ ಯೋಜನೆಯ ಬಗ್ಗೆ ಪರಿಣಿತರಾದ ಪ್ರೊ ಜಿ ಬಿ ಶಿವರಾಜುರವರು ಹಿರಿಯ ಗಾಂಧಿವಾದಿ ಹೋ ಶ್ರೀನಿವಾಸಯ್ಯನವರು ತಮ್ಮ ಹುಟ್ಟೂರಾದ ಚೌಧರಿ ಕೊಪ್ಪಲಿನ ಬಗ್ಗೆ ಇಟ್ಟುಕೊಂಡಿದ್ದ ಅಭಿಮಾನ ಹಾಗೂ ಆದಿಚುಂಚನಗಿರಿ ಮಠದ ಬೆಳವಣಿಗೆಗೆ ಸಹಕರಿಸಿದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು . ಏಳು ದಿನಗಳ ಎನ್ ಎಸ್ ಎಸ್ ಶಿಬಿರವನ್ನು ಹೆಚ್ಚು ಖರ್ಚು ವೆಚ್ಚಗಳಿಲ್ಲದೆ ಎಲ್ಲರ ಸಹಕಾರ ಪಡೆದು ಯಶಸ್ವಿಗೊಳಿಸಿದ ವಿಧಾನವನ್ನು ತಿಳಿಸಿ ಸಮುದಾಯವನ್ನು ತೊಡಗಿಸಿಕೊಂಡು ಮುನ್ನಡೆಯುವ ಮಾದರಿಯನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದು ಕರೆ ನೀಡಿದರು .

■

ಚಿ|ತ್ರಾ|ವ|ಳಿ





ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ದಿನಾಂಕ 28 .5 .2024 ರಂದು ಯಶೋದರಮ್ಮ ದಾಸಪ್ಪ ಅವರ 119 ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಟ್ರಸ್ಟಿನ ಸ್ಥಳೀಯ ಕಾರ್ಯಕಾರಿ ಸಮಿತಿ ಸದಸ್ಯರಾದ ಅನಂತ್ ಕುಮಾರ್ ಹಾಗು ಉಪ ಪ್ರತಿನಿಧಿ ಮೇರಿ ಹಾಗೂ ಆಶ್ರಮದ ಶಾಲಾ ಮಕ್ಕಳು ಯಶೋದರಮ್ಮ ಅವರ ಸಮಾಧಿ ಸ್ಥಳದಲ್ಲಿ ಸೇರಿ ಅವರಿಗೆ ಗೌರವ ನಮನ ಸಲ್ಲಿಸಿದರು .



ಗಾಂಧಿ ಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ದಿನಾಂಕ 18 .05 .2024 ರಂದು ನಡೆದ ' ಗಾಂಧಿ ಚಿಂತನೆಗಳು ಮತ್ತು ಮಾನವೀಯ ಮೌಲ್ಯಗಳು ' ಕಾರ್ಯಾಗಾರ. ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಡಾ . ಎಸ್ ಎಂ ಜಯಕರ್ ಉದ್ಘಾಟಿಸಿದರು .ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಮುಖ್ಯ ಆಡಳಿತಾಧಿಕಾರಿ ಟಿ ಆರ್ ಶೋಭಾ , ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಅಧಿಕಾರಿ ಡಾ .ಪ್ರತಾಪ್ ಲಿಂಗಯ್ಯ. ಮುಖ್ಯ ಅತಿಥಿಗಳಾಗಿದ್ದರು . ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ನಿರ್ದೇಶಕರಾದ ಪ್ರೊ ಜಿ ಬಿ ಶಿವರಾಜ್ ಪ್ರಾಸ್ತಾವಿಕ ನುಡಿಗಳನ್ನು ಆಡಿದರು . ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ . ವೂಡೇ ಪಿ ಕೃಷ್ಣ ಅವರು ಅಧ್ಯಕ್ಷತೆ ವಹಿಸಿದ್ದರು

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58